
ವೈದ್ಯ ಬರಹಗಾರರ ಸಮಿತಿ ಸಾರಥ್ಯದಲ್ಲಿ

# ವೈದ್ಯ ಸಂಪದ

ಕನ್ನಡ ಬಳಸಿ ವೈದ್ಯ ಸಾಹಿತ್ಯ ಬೆಳೆಸಿ

ಸಂಪುಟ: 1 ಸಂಚಿಕೆ: 3 ದ್ವೈಮಾಸಿಕ ಮೇ-ಜೂನ್, 2022 ಪುಟಗಳು: 54

ಭಾರತೀಯ ವೈದ್ಯಕೀಯ ಸಂಘ ಕರ್ನಾಟಕ ಶಾಖೆಯ ಸದಸ್ಯರ ಆಂತರಿಕ ವಿತರಣೆಗಾಗಿ ಮಾತ್ರ



## ಬಸವ ಜಯಂತಿಯ
## ಹಾರ್ದಿಕ ಶುಭಾಶಯಗಳು

ಕಳಬೇಡ
ಕೊಲಬೇಡ
ಹುಸಿಯ ನುಡಿಯಲು ಬೇಡ
ಮುನಿಯಬೇಡ
ಅನ್ಯರಿಗೆ ಅಸಹ್ಯಪಡಬೇಡ
ತನ್ನ ಬಣ್ಣಿಸಬೇಡ
ಇದಿರ ಹಳಿಯಲು ಬೇಡ.
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ.

# ಸಂಪದದೊಳಗೆ...


**ಸಂಪಾದಕೀಯ** – ಡಾ ಸುರೇಶ ಸಗರದ ಪುಟ 3

**ರಾಜ್ಯಾಧ್ಯಕ್ಷರ ನುಡಿ** – ಡಾ ಕಟೀಲ್ ಸುರೇಶ ಕುಡ್ವಾ ಪುಟ 4

**ಸಮಿತಿಯ ಅಧ್ಯಕ್ಷರ ನುಡಿ** – ಡಾ ಅರವಿಂದ ಪಟೇಲ ಪುಟ 5

**ಮೈಕ್ರೋಪ್ಲಾಸ್ಟಿಕ್ ಎಂಬ ಪೆಡಂಭೂತ ಶ್ವಾಸಕೋಶದಲ್ಲಿ (ಪ್ರಚಲಿತ)** – ಡಾ ಎಚ್‌ಎಸ್ ಮೋಹನ್ ಪುಟ 6

**ಮಾತೃ ಭಾಷೆಯಲ್ಲಿ ವೈದ್ಯಕೀಯ ಶಿಕ್ಷಣ** – ಡಾ ಬಿ ಎನ್ ಗಂಗಾಧರ ಪುಟ 8

**ಸುಖಿ ಸಂಸಾರಕ್ಕೊಂದು ಸೂತ್ರ (ಕಥೆ)** – ಡಾ ರಾಧಾ ರಮೇಶ ಪುಟ 11

**ಮಿನಿ ಕಥೆ ಸ್ಪರ್ಧೆ (ಫಲಿತಾಂಶ, ವಿಜೇತ ಕೃತಿಗಳು, ತೀರ್ಪುಗಾರರ ನುಡಿಗಳು)** ಪುಟ 16

**ಡಾ ಶಿವರಾಂ ಅವರ "ಕಾಲ" (ಕೃತಿ ಪರಿಚಯ)** – ಡಾ ಗುರುದತ್ ಕೆ ಎನ್ ಪುಟ 21

**ಹೆಸರಲ್ಲೇನಿದೆ (ಚಿಕಿತ್ಸೆ)** – ಡಾ ಅಪರ್ಣಾ ಶ್ರೀವತ್ಸಾ ಪುಟ 24

**ಅಂಡಕೋಶದಲ್ಲಿ ಪುಂಬೀಜ ತೂರುವಿಕೆ (ಚಿಕಿತ್ಸೆ)** – ಡಾ ಸುನಂದಾ ಆರ್ ಕುಲಕರ್ಣಿ ಪುಟ 26

**ಅಕ್ಷರ ಶ್ರದ್ಧಾಂಜಲಿ (ವೈದ್ಯೇತರ)** – ಡಾ ಸದಾನಂದ ನಾಯಕ ಪುಟ 28

**ಡಾ. ರೂಪಾಬಾಯಿ ಫರ್ದೂನ್‌ಜಿ (ವ್ಯಕ್ತಿ ವಿಷಯ)** – ಡಾ. ದಿವ್ಯಾ ಕೆ ಎನ್ ಪುಟ 29

**ವೈದ್ಯ ಲೋಕದ ವಿಸ್ಮಯ** – ಡಾ ನಾ ಸೋಮೇಶ್ವರ ಪುಟ 31

**ಆಧುನಿಕತೆ (ವಿದ್ಯಾರ್ಥಿ ಲೋಕ)** – ವಿಶಾಲ್ ಹುಷಾರೆ ಪುಟ 33

**ಆಸ್ಟ್ರೇಲಿಯಾ ವೈದ್ಯಕೀಯ ಶಿಕ್ಷಣದ ಒಂದು ಪಕ್ಷಿ ನೋಟ (ಅನಿವಾಸಿ ಲೋಕ)** – ಡಾ ವಿಷ್ಣು ಹಿರೇಮಳಲಿ ಪುಟ 35

**ಸಮಿತಿಯಿಂದ ಕನ್ನಡ ಕಾರ್ಯಕ್ರಮಗಳು** – ಡಾ ವೀಣಾ ಎನ್ ಸುಳ್ಯ ಪುಟ 37

**ಶಾಖೆಗಳಲ್ಲಿ ಕನ್ನಡ** – ಡಾ ವೀಣಾ ಭಟ್ ಪುಟ 39

**ವಿಶ್ವ ಅಧಿಕ ರಕ್ತದೊತ್ತಡ ದಿನಾಚರಣೆ (ಆರೋಗ್ಯ ದಿನಾಚರಣೆ)** – ಡಾ ಪ್ರಿಯ ಭಾಲ್ಕಿ ಪುಟ 42

**ಕಾವ್ಯ ಸಂಪದ** – ಡಾ ತನುಶ್ರೀ ಹೆಗಡೆ / ಡಾ ಶಿವಾನಂದ ಕುಬಸದ ಪುಟ 45

**ಪದಬಂಧ** – ಡಾ ರಾಧಾ ರಮೇಶ ಪುಟ 46

**ನಗೆಹನಿ–ಹನಿಕವನಗಳು** – ಡಾ ಜ್ಯೋತಿ ಎಸ್ ಫೋಂಗಡೆಮಠ ಪುಟ 47

**ಚಿಣ್ಣರ ಲೋಕ–ಹನಿಕವನಗಳು** – ವಿಜೋತ ವಿ ಎಸ್ / ಡಾ ಕವಿತಾ ಸದಾಶಿವ ಪುಟ 48

**ಚಿತ್ರ ಸಂಪದ** ಪುಟ 49

**ಚಿತ್ರಧಾಮ** ಪುಟ 54


**ಲೇಖಕರಿಗೆ ಮಾಹಿತಿ:**

ಲೇಖನಗಳನ್ನು ವಿಭಾಗೀಯ ಸಂಪಾದಕರಿಗೆ ಮೇಲ್ ಮೂಲಕ ಕಳುಹಿಸಬೇಕು

ಲೇಖನಗಳನ್ನು ವರ್ಡ್ಡ್ ಫೈಲ್ ನಲ್ಲಿ ನುಡಿ ಫಾಂಟ್‌ಗಳನ್ನು ಬಳಸಿ ಬರೆಯಬೇಕು

ಲೇಖನ ಕಳುಹಿಸಿದ ನಂತರ ವಿಭಾಗೀಯ ಸಂಪಾದಕರಿಗೆ ಸಂದೇಶ ಅಥವಾ ವಾಟ್ಸಾಪ್ ಮೂಲಕ ತಿಳಿಸಿ

ಪ್ರಕಟಿಸಿದ ಲೇಖನಗಳಿಗೆ ಲೇಖಕರೆ ಹೊಣೆ

ಅಧ್ಯಕ್ಷರು, ಭಾರತೀಯ ವೈದ್ಯಕೀಯ ಸಂಘ, ಕರ್ನಾಟಕ :
**ಡಾ. ಕಟೀಲ್ ಸುರೇಶಕುಡ್ವಾ**
ksureshkateel@yahoo.com | 9448725265
ನಿಯೋಜಿತ ಅಧ್ಯಕ್ಷರು:
**ಡಾ. ಎಸ್. ಬಿ. ಲಕ್ಕೋಳ**
9448560400
ಗೌರವ ಕಾರ್ಯದರ್ಶಿ :
**ಡಾ. ಎಸ್. ಎಮ್ ಪ್ರಸಾದ್**
9845105122
ಅಧ್ಯಕ್ಷರು, ಕನ್ನಡ ವೈದ್ಯ ಬರಹಗಾರರ ಸಮಿತಿ :
**ಡಾ. ಅರವಿಂದ ಪಟೇಲ್**
draravindpatel@gmail.com |9448918764
ಪ್ರಧಾನ ಸಂಪಾದಕರು :
**ಡಾ. ಸುರೇಶ ಸಗರದ**
vaidyasampadaeditor@gmail.com | 9448139339
ವಿಭಾಗೀಯ ಸಂಪಾದಕರು :
ಪ್ರಚಲಿತ ವಿದ್ಯಮಾನಗಳು :
**ಡಾ. ಎಚ್. ಎಸ್ ಮೋಹನ್**
prachalithavs@gmail.com | 9448173670
ಕಥಾ ವಿಭಾಗ:
**ಡಾ. ಸಲೀಮ ನದಾಫ**
kathevaidyasampada@gmail.com | 8073048415
ಕೃತಿ ಪರಿಚಯ:
**ಡಾ. ವಿನಯ ಶ್ರೀನಿವಾಸ**
kruthiparichayavs@gmail.com | 9844083284
ಕಾಯಿಲೆ / ಚಿಕಿತ್ಸೆ / ಸಂಶೋಧನೆ:
**ಡಾ. ಶುಭ್ರತ ಕೆ. ಎಸ್.**
ddinventionsvs@gmail.com | 9448149927
ವೈದ್ಯೇತರ ಲೇಖನಗಳು:
**ಡಾ. ಶಿವಾನಂದ ಕುಬಸದ**
nonmedicalvs@gmail.com | 9448012767
ವ್ಯಕ್ತಿ ವಿಷಯ / ಸಂದರ್ಶನ:
**ಡಾ. ದಿವ್ಯಾ ಕೆ. ಎನ್.**
personalitiesvs@gmail.com | 9886157094
ವೈದ್ಯ ಲೋಕದ ವಿಸ್ಮಯ:
**ಡಾ. ನಾ ಸೋಮೇಶ್ವರ**
vismayavaidyasampada@gmail.com | 9880465661
ವಿದ್ಯಾರ್ಥಿ ಲೋಕ:
**ಡಾ. ಉಮಾಮಹೇಶ್ವರಿ ಎಸ್.**
vidyarthivaidyasampada@gmail.com | 8277070611
ಅನಿವಾಸಿ ಲೋಕ:
**ಡಾ. ಕೇಶವ ಕುಲಕರ್ಣಿ**
anivasivs@gmail.com | +447852416527
ಬಳಗದ ವರದಿ:
**ಡಾ. ವೀಣಾ ಎನ್. ಸುಳ್ಯ**
programreportsvs@gmail.com | 9448215940
ಶಾಖೆಗಳಲ್ಲಿ ಕನ್ನಡ:
**ಡಾ. ವೀಣಾ ಭಟ್**
branchreportsvs@gmail.com | 9480353878
ಪದಬಂಧ / ಪದ ಕೋಶ:
**ಡಾ. ಜ್ಯೋತಿ ಎಸ್. ಘೊಂಗಡೆಮಠ**
padabhandhavs@gmail.com | 9242139990
ಕವನಗಳು:
**ಡಾ. ಗೋವಿಂದ ಹೆಗಡೆ**
poemsvaidyasampada@gmail.com | 9353118024
ಆರೋಗ್ಯ ದಿನಾಚರಣೆ:
**ಡಾ. ರಶ್ಮಿ ಕುಂದಾಪುರ**
healthdaysvs@gmail.com | 9880496567
ಚಿತ್ರ ಸಂಪದ:
**ಡಾ. ಅರವಿಂದ ಪಟೇಲ**
parisaravs@gmail.com
ಸಂಘಟನೆ / ಕೇಂದ್ರೀಯ ಸಮಾಚಾರ:
**ಡಾ. ಮಧುಸೂದನ ಕಾರಿಗನೂರು**
imavaidyasampada@gmail.com | 9448237145
ವಿಳಾಸ:
**ವೈದ್ಯ ಸಂಪದ**
ಐ ಎಮ್ ಎ ಹೌಸ್, ಐ ಎಮ್ ಎ ವೃತ್ತ, ಆಲೂರು ವೆಂಕಟರಾವ್ ರಸ್ತೆ, ಬೆಂಗಳೂರು 560018, ದೂರವಾಣಿ: 080 26703255, vaidyasampadaeditor@gmail.com

# ಸಂಪಾದಕೀಯ...



**ಡಾ. ಸುರೇಶ ಸಗರದ**

ಪ್ರಿಯ ಓದುಗರೇ,

ರಾಜ್ಯ ಆಯವ್ಯಯ ಮತ್ತು ಕನ್ನಡ ಅಭಿವೃದ್ಧಿ: ಮಾರ್ಚ 4 ರಂದು ಮಂಡಿಸಲಾದ ಈ ಸಾಲಿನ ಆಯವ್ಯಯದಲ್ಲಿ ಸೆಪ್ಟೆಂಬರ್‌ನಲ್ಲಿ ಹಾವೇರಿಯಲ್ಲಿ ನಡೆಯಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕಾಗಿ 20 ಕೋಟಿ ರೂ ಗಳನ್ನು ಮೀಸಲಾಗಿಡಲಾಗಿದೆ. ಕಾಸರಗೋಡು, ಅಕ್ಕಲಕೋಟೆ ಮತ್ತು ಗೋವಾದಲ್ಲಿ ಕನ್ನಡ ಭವನ ನಿರ್ಮಿಸುವುದಾಗಿ ಘೋಷಿಸಲಾಗಿದೆ. ರಾಜ್ಯ ಮಟ್ಟದಲ್ಲಿ ಯಕ್ಷಗಾನ ಸಮ್ಮೇಳನದ ಆಯೋಜನೆಗೆ ಕ್ರಮ. ಕರ್ನಾಟಕದ ಹೆಸರಾಂತ ಸಾಹಿತಿಗಳ ಸಾಹಿತ್ಯ ಪ್ರಚಾರಕ್ಕೆ ಯೋಜನೆ, ಡಾ ಸಿದ್ದಲಿಂಗಯ್ಯ, ಎಂ ಚಿದಾನಂದ ಮೂರ್ತಿ, ಚನ್ನವೀರ ಕಣವಿ, ಡಾ ಚಂದ್ರಶೇಖರ ಪಾಟೀಲ ಅವರ ಅಮೂಲ್ಯ ಸಾಹಿತ್ಯ ಪ್ರಚುರ ಪಡಿಸಲು ಯೋಜನೆ ಹಮ್ಮಿಕೊಳ್ಳಲಾಗುವುದು.




ರಾಜ್ಯ ಆಯವ್ಯಯ ಮತ್ತು ಆರೋಗ್ಯ ಕ್ಷೇತ್ರ: ಎಲ್ಲರಿಗೂ ಆರೋಗ್ಯ, ಎಲ್ಲೆಡೆಯೂ ಆರೋಗ್ಯ ಧ್ಯೇಯ ವಾಕ್ಯದೊಂದಿಗೆ ರಾಜ್ಯ ಸರಕಾರ ಈ ಸಾಲಿನ ಆಯವ್ಯಯದಲ್ಲಿ ಬೆಂಗಳೂರಿನ ಎಲ್ಲಾ ವಾರ್ಡಗಳಲ್ಲಿ ಮತ್ತು ರಾಜ್ಯದ ಪ್ರಮುಖ ನಗರಗಳಲ್ಲಿ ಅಸಾಂಕ್ರಾಮಿಕ ರೋಗ ತಪಾಸಣೆಗೆ 438 ನಮ್ಮ ಕ್ಲಿನಿಕ್‌ಗಳನ್ನು ಸ್ಥಾಪಿಸಲಿದೆ. 300 ಮಹಿಳಾ ಸ್ವಾಸ್ಥ್ಯ ಕೇಂದ್ರಗಳನ್ನು ಸ್ಥಾಪಿಸಿ ಮಹಿಳಾ ಆರೋಗ್ಯ ಸಮಸ್ಯೆಗಳ ಪರಿಹಾರಕ್ಕೆ ಗಮನ ನೀಡಿದೆ. ಬಡತನ ರೇಖೆಯಿಂದ ಕೆಳಗಿರುವ ಹಿರಿಯ ನಾಗರಿಕರಿಗೆ ಉಚಿತ ನೇತ್ರ ತಪಾಸಣೆ, ಶಸ್ತ್ರ ಚಿಕಿತ್ಸೆ ಮತ್ತು ಕನ್ನಡಕ ಸೌಲಭ್ಯ ಒದಗಿಸಲಿದೆ. ಹುಬ್ಬಳ್ಳಿಯಲ್ಲಿ 250 ಕೋಟಿ ರೂ ವೆಚ್ಚದಲ್ಲಿ ಜಯದೇವ ಹೃದ್ರೋಗ ಸಂಸ್ಥೆಯ ಪ್ರಾದೇಶಿಕ ಹೃದ್ರೋಗ

44ನೇ ಪುಟಕ್ಕೆ



**ಡಾ. ಕಟೀಲ್ ಸುರೇಶ ಕುಡ್ವಾ**
ಅಧ್ಯಕ್ಷರು, ಭಾರತೀಯ ವೈದ್ಯಕೀಯ ಸಂಘ,
ಕರ್ನಾಟಕ ರಾಜ್ಯ ಶಾಖೆ

# ಯುಗಾದಿ ಹಬ್ಬದ ಶುಭಾಶಯಗಳು

**ಆತ್ಮೀಯ ಓದುಗರೇ,**

ಪ್ರತೀ ಸಂಚಿಕೆಯಲ್ಲಿ ನೂತನ ಪ್ರಯೋಗಗಳೊಂದಿಗೆ ಓದುಗರ ಮನ ಮೆಚ್ಚುವಂತೆ ವೈದ್ಯ ಸಂಪದ ಪ್ರಕಟಗೊಳ್ಳುತ್ತಿರುವುದು ತುಂಬಾ ಶ್ಲಾಘನೀಯ. ಭಾ ವೈ ಸಂಘ ಕರ್ನಾಟಕ ರಾಜ್ಯ ಶಾಖೆಯ ಕನ್ನಡ ವೈದ್ಯ ಬರಹಗಾರರ ಹಾಗೂ ವೈದ್ಯ ಸಂಪದ ಸಂಪಾದಕೀಯ ಮಂಡಳಿಗೆ ಇದರ ಶ್ರೇಯ ಸಲ್ಲುತ್ತದೆ. ನಿರಂತರ ಬದಲಾಗುತ್ತಿರುವ ವೈದ್ಯ ಲೋಕದ ಆವಿಷ್ಕಾರಗಳ ಕುರಿತು, ವೈದ್ಯ ಮತ್ತು ಸಮಾಜದ ಸಂಬಂಧಗಳ ಕುರಿತು, ವಿಶ್ವದಲ್ಲಾಗುವ ತಲ್ಲಣಗಳ ಕುರಿತು, ವೈದ್ಯರ ಮೇಲಾಗುವ ಹಲ್ಲೆಗಳ ಕುರಿತು, ಸರಕಾರ ವೈದ್ಯ ಹಾಗೂ ವೈದ್ಯಕೀಯ ಸಂಸ್ಥೆಗಳ ಮೇಲೆ ತರುತ್ತಿರುವ ಕಾಯ್ದೆಗಳ ಕುರಿತು, ವೈದ್ಯಕೀಯ ಶಿಕ್ಷಣಗಳ ಮೇಲೆ ಆಗುತ್ತಿರುವ ಬದಲಾವಣೆಯ ಕುರಿತು ಮೇಲಿನ ಎಲ್ಲಾ ಕಾರಣಗಳಿಂದ ವೈದ್ಯಕೀಯ ಸೇವೆಯಲ್ಲಿ ಆಗುವ ಋಣಾತ್ಮಕ ಹಾಗೂ ಧನಾತ್ಮಕ ಪರಿಣಾಮಗಳ ಕುರಿತು ಈ ವೈದ್ಯ ಸಂಪದ ಬೆಳಕು ಚೆಲ್ಲಬೇಕಾಗಿದೆ.

ಇತ್ತೀಚಿಗೆ ರಾಜಸ್ಥಾನದ ಡಾ ಅರ್ಚನಾ ಶರ್ಮಾ ಅವರ ಮರಣ ಭಾರತದಲ್ಲಿ ವೈದ್ಯರೆಲ್ಲರಲ್ಲಿ ಶೋಕ ಮಾತ್ರವಲ್ಲ ತಲ್ಲಣವನ್ನೇ ಸೃಷ್ಟಿಸಿದೆ. ರಕ್ಷಣೆ ಕೊಡಬೇಕಾದವರೇ (ಆರಕ್ಷಕರು) ವೈದ್ಯರಿಗೆ ಅನ್ಯಾಯವೆಸಗಿದ ಪ್ರಕರಣವಿದು. ವೈದ್ಯರಿಗೆ ವೈದ್ಯಕೀಯ ಜ್ಞಾನ ಮಾತ್ರವಲ್ಲ, ಕಾನೂನಿನ ಜ್ಞಾನವೂ ಬೇಕು ಎಂಬುದನ್ನು ಇದು ದೃಢಪಡಿಸುತ್ತದೆ. ಅತ್ಯಂತ ಉತ್ತಮ ಚಿಕಿತ್ಸೆ ನೀಡಿದರೂ, ಕ್ಲಿಷ್ಟಕರ ಸಂದರ್ಭಗಳಲ್ಲಿ ಪ್ರಾಣ ಉಳಿಸುವಲ್ಲಿ ವೈದ್ಯರು ನಿಸ್ಸಹಾಯಕರು, ಇದು ವೈದ್ಯಕೀಯ ನಿರ್ಲಕ್ಷವಲ್ಲ ಎಂದು ಸರ್ವೋಚ್ಚ ನ್ಯಾಯಾಲಯವೇ ಹೇಳಿದೆ. ಜಾಕೋಬ್ ಮ್ಯಾಥ್ಯೂ ವರ್ಸಸ್ ಪಂಜಾಬ್ ವ್ಯಾಜ್ಯದಲ್ಲಿ ಪರಿಣಿತ ವೈದ್ಯರ (ಸರಕಾರಿ) ಸಲಹೆ ಪಡೆಯದೇ ವೈದ್ಯರ ಮೇಲೆ ಮೊಕದ್ದಮೆ ದಾಖಲಿಸಬಾರದು ಎಂಬ ಆಜ್ಞೆಯಿದ್ದರೂ ಈ ಘಟನೆ ಸಂಭವಿಸಿರುವುದು ಖೇದಕರ. ವೈದ್ಯರಿಗೆ ಸರಿಯಾದ ಕಾನೂನು ಮಾಹಿತಿಯ ಜ್ಞಾನ, ಸಹ ವೈದ್ಯರಿಂದ, ಕುಟುಂಬದವರಿಂದ ಸಕಾಲದಲ್ಲಿ ನೆರವು ಮತ್ತು ಸಾಂತ್ವನ ದೊರೆಯುವುದು ಹಾಗೂ ವೈದ್ಯರಲ್ಲಿ ಉತ್ತಮ ಸಂಬಂಧ ಹಾಗೂ ಸಂಘಟನೆ ಇರುವುದು ಬಹಳ ಮುಖ್ಯ. ಇದರಿಂದ ಪ್ರತಿಯೊಬ್ಬ ವೈದ್ಯರು ಭಾರತೀಯ ವೈದ್ಯಕೀಯ ಸಂಘದ ಸದಸ್ಯರಾಗುವುದು ಹಾಗೂ ಸಂಘದ ಎಲ್ಲಾ ಯೋಜನೆಗಳಿಗೆ ನೋಂದಾಯಿಸಿಕೊಳ್ಳುವುದು ಬಹು ಮುಖ್ಯ. ಕರ್ನಾಟಕ ರಾಜ್ಯದಲ್ಲಿ ಈ ನಿಟ್ಟಿನಲ್ಲಿ ನೊಂದ ವೈದ್ಯರಿಗೆ ಸಕಾಲದಲ್ಲಿ ನೆರವು ನೀಡಲು ತುರ್ತು ಕ್ರಿಯಾ ಸಮಿತಿಗಳನ್ನು, ಪ್ರತಿಯೊಂದು ಘಟಕದಲ್ಲೂ, ಜಿಲ್ಲಾ ಮಟ್ಟದಲ್ಲೂ ಹಾಗೂ ರಾಜ್ಯ ಮಟ್ಟದಲ್ಲೂ ರಚಿಸಿದ್ದೇವೆ. ಹಾಗೂ ಪೋಲೀಸ್ ಮಹಾ ನಿರ್ದೇಶಕರಿಗೆ ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಪಾಲಿಸುವಂತೆ ಅವರ ಕೆಳಗಿನ ಅಧಿಕಾರಿಗಳಿಗೆಲ್ಲರಿಗೆ ಸೂಚಿಸುವಂತೆ ಕ್ರಮ ಕೈಗೊಂಡಿದ್ದೇವೆ.

ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ಮರುಕಳಿಸದಿರಲಿ ಎಂದು ಆಶಿಸುತ್ತೇವೆ. ಕೇಂದ್ರ ಸರ್ಕಾರ ಪರಿಣಾಮಕಾರಿ ಕಾಯಿದೆ ಶೀಘ್ರದಲ್ಲಿ ತರಲಿ, ಕೇಂದ್ರ ಸರ್ಕಾರ ವೈದ್ಯರ ಮೇಲಿನ ಹಲ್ಲೆಗೆ ಪರಿಣಾಮಕಾರಿ ಕಾಯ್ದೆ ತರಲು ಇದು ಸಕಾಲ. ಭಾರತೀಯ ವೈದ್ಯಕೀಯ ಸಂಘ ಕರ್ನಾಟಕ ಶಾಖೆ ಇದಕ್ಕೆ ಒತ್ತಾಯಿಸುತ್ತಲೇ ಬಂದಿದೆ.

ಸಂಘವು ಆರೋಗ್ಯ ಸೇವೆಯಲ್ಲಿ ಸರಕಾರದೊಂದಿಗೆ ಕೈ ಜೋಡಿಸಿ ನಮ್ಮ ದೇಶದ ಆರೋಗ್ಯ ರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸಬೇಕಾಗಿದೆ. ಇದು ನಮ್ಮ ಇಂದಿನ ಮುಖ್ಯ ಧ್ಯೇಯ ಹಾಗೂ ಉದ್ದೇಶ. ಈ ನಿಟ್ಟಿನಲ್ಲಿ ಎಲ್ಲಾ ಘಟಕಗಳ ವೈದ್ಯ ಸದಸ್ಯರು ತಮ್ಮನ್ನು ತೊಡಗಿಸಬೇಕೆಂದು ಕೋರುತ್ತಾ ,ವೈದ್ಯ ಸಂಪದ ಈ ನಿಟ್ಟಿನಲ್ಲಿ ಎಲ್ಲರನ್ನೂ ಕಾರ್ಯೋನ್ಮುಖಗೊಳಿಸುವಲ್ಲಿ ಸಫಲವಾಗಲೆಂದು ಹಾರೈಸುತ್ತೇನೆ.

ಜೈ ಕರ್ನಾಟಕ

ಭಾರತೀಯ ವೈದ್ಯಕಿಯ ಸಂಘ ಚಿರಾಯುವಾಗಲಿ



# ವೈದ್ಯ ಸಂಪದ ಪತ್ರಿಕೆಯ ಓದುಗರಿಗೆಲ್ಲ ಶುಭಾಶಯಗಳು

**ಡಾ. ಅರವಿಂದ ಪಟೇಲ್**
ಅಧ್ಯಕ್ಷರು
ಕನ್ನಡ ವೈದ್ಯ ಬರಹಗಾರರ ಸಮಿತಿ

ವೈದ್ಯ ಸಂಪದ,ಸಂಚಿಕೆಯಿಂದ ಸಂಚಿಕೆಗೆ ಗಟ್ಟಿಗೊಳ್ಳುತ್ತ,ಚೆಂದವಾಗುತ್ತ ಸಾಗಿದೆ.ವಿಷಯಗಳು ವಿಶಿಷ್ಟವಾಗಿಯೂ,ವಿಭಿನ್ನವಾಗಿಯೂ ಓದುಗರನ್ನು ಸೆಳೆದು ಸೆರೆಹಿಡಿಯಬಲ್ಲವು.ವೈದ್ಯಕೀಯ ಕ್ಷೇತ್ರದ ಪ್ರಚಲಿತ ವಿದ್ಯಮಾನಗಳೊಂದಿಗೆ ವೈದ್ಯೇತರ ಕ್ಷೇತ್ರದ ವಿಷಯಗಳು ಸೇರಿ ಕರಿಮಣಿ ಸರದಲ್ಲಿ ಕೆಂಪು ಹವಳ ಕೂಡಿದ ನೋಟ ಕಾಣಸಿಗುತ್ತದೆ.

ವೈದ್ಯವೃತ್ತಿ ಬದುಕಿನಲ್ಲಿ ಬಿಡುವು ಸಿಗದ ಬಿಗಿಯಾದ ಇಂದಿನ ದಿನಮಾನಗಳಲ್ಲಿ ವೈದ್ಯಸಮುದಾಯದಿಂದ ಲೇಖನಗಳು ಮೂಡಿ ಬರುತ್ತಿರುವುದು ಸಮಾಧಾನದ ಸಂಗತಿ. ಇದು ಅಕ್ಷರ ಲೋಕಕ್ಕೆ ನಾವು ನೀಡುವ ಕಿರುಕಾಣಿಕೆಯೆಂದೇ ಹೇಳಬಹುದು. ವೈದ್ಯ ಸಂಪದವು ನಮ್ಮ ವೈದ್ಯವೃಂದದಾಚೆಯೂ ಓದುಗರನ್ನು ತಲುಪುವ ಅಭಿಲಾಷೆ ಹೊಂದಿದೆ. ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಬೇಕಿದೆ. ನಮ್ಮ ಸಂಸ್ಥೆಯ ಎಲ್ಲಾ ಬ್ರಾಂಚ್ ಗಳು ಸಕ್ರಿಯವಾಗಿ ವೈದ್ಯಸಂಪದ ಹೆಚ್ಚು ಹೆಚ್ಚು ಜನರನ್ನು ತಲುಪುವ ನಿಟ್ಟಿನಲ್ಲಿ ಗಮನ ಹರಿಸಬೇಕೆಂದು ನಮ್ಮ ಮನವಿ.

ಒಂದು ಪತ್ರಿಕೆಯ ,ಸಂಚಿಕೆಯ ಜವಾಬ್ದಾರಿ ಬಹು ದೊಡ್ಡ ಕೆಲಸ.ಸಮಯ ಪರಿಪಾಲನೆ,ವಿಷಯ ಸಂಗ್ರಹಣೆ,ತಿದ್ದುವಿಕೆ ತೀಡುವಿಕೆ ಸಹ ಮುಖ್ಯವಾದುದು.ವಿಭಾಗೀಯ ಸಂಪಾದಕರ ಕಾರ್ಯಕ್ಷಮತೆ ಮತ್ತು ಸಂಪಾದಕ ಡಾ.ಸುರೇಶ ಸಗರದ ರವರ ಚಾಕಚಕ್ಯತೆಯ ಪರಿಣಾಮ, ಪರಿಶ್ರಮದಿಂದ ವೈದ್ಯಸಂಪದದ ಮೂರನೇ ಸಂಚಿಕೆ ಹೊರಬರುತ್ತಿದೆ. ಹಾಗಾಗಿ ಇಡೀ ಸಂಪಾದಕೀಯ ಮಂಡಳಿಯನ್ನು ಅಭಿನಂದಿಸುವೆ.

ಪತ್ರಿಕೆ ಈ ರೀತಿಯಾಗಿ ಸೊಗಸಾಗಿ ಮೂಡಿಬರಲು ಭಾರತೀಯ ವೈದ್ಯ ಸಂಘದ ರಾಜ್ಯಾಧ್ಯಕ್ಷರಾದ ಡಾ.ಸುರೇಶ್ ಕುಡ್ವ ರವರ ಸಹಕಾರ ಸಹ ಪಾತ್ರವಹಿಸಿದೆ ಎನ್ನುವುದು ನಮಗೆ ಹೆಮ್ಮೆ. ಇನ್ನೂ ಉತ್ಕೃಷ್ಟವಾದ ಗುಣಮಟ್ಟದತ್ತ ನಮ್ಮ ಹೆಜ್ಜೆ.ಓದುಗರ ಅಭಿಪ್ರಾಯಗಳನ್ನು ತುಂಬು ಮನದಿಂದ ಸ್ವೀಕರಿಸಿ ಮುನ್ನಡೆಯುವ ಬಯಕೆ.

ಕನ್ನಡ ಬಳಸೋಣ. ಕನ್ನಡ ಬೆಳೆಸೋಣ

**ಡಾ. ಅರವಿಂದ ಪಟೇಲ್**
ಚೇರ್ ಮನ್
ಕನ್ನಡ ವೈದ್ಯಬರಹಗಾರರ ಸಮಿತಿ

ಪ್ರಚಲಿತ

# ಮೈಕ್ರೋಪ್ಲಾಸ್ಟಿಕ್ ಎಂಬ ಪೆಡಂಭೂತ ಶ್ವಾಸಕೋಶದಲ್ಲಿ!



**ಡಾ. ಎಚ್. ಎಸ್. ಮೋಹನ್**
ವಿಭಾಗೀಯ ಸಂಪಾದಕರು ಮತ್ತು ಲೇಖಕರು
ವಿಜಯ ಐ ಕ್ಲಿನಿಕ್, ಸಿಟಿ ಮುನಿಸಿಪಲ್ ಆಫೀಸ್ ಎದುರು, ಸಾಗರ – 577401

ಪ್ಲಾಸ್ಟಿಕ್ ನ ಉಪಯೋಗ ಈ ಆಧುನಿಕ ಜಗತ್ತಿನಲ್ಲಿ ಮಿತಿ ಮೀರಿದ ವಿಚಾರ ಹೆಚ್ಚಿನವರಿಗೆಲ್ಲ ತಿಳಿದಿದೆ. ವಾತಾವರಣದ ಬಗ್ಗೆ ಆಸಕ್ತ ವಿಜ್ಞಾನಿಗಳ ಪ್ರಕಾರ ಮಾನವ ತನ್ನ ವೈಯಕ್ತಿಕ ಸುಖಕ್ಕಾಗಿ ಈ ಪೆಡಂಭೂತವನ್ನು ಅತಿಯಾಗಿ ಬೆಳೆಸಿದ್ದಾನೆ. ಪ್ರತೀವರ್ಷ 400 ಮಿಲಿಯನ್ ಟನ್ ಗಳಷ್ಟು ಪ್ಲಾಸ್ಟಿಕ್ ಉತ್ಪಾದನೆಯಾಗುತ್ತದೆ ಎನ್ನಲಾಗಿದೆ. ಹಲವು ಉದ್ಯಮಗಳಲ್ಲಿ ಇದು ಬೇಕೇ ಬೇಕು. ಉದಾ: ಗೆ ಅಲಂಕಾರಕ್ಕೆ ಉಪಯೋಗಿಸುವ ಪ್ರಸಾಧನಗಳು, ಆಹಾರ ವಸ್ತುಗಳ ಪ್ಯಾಕಿಂಗ್ ಗೆ, ಹಲವು ರೀತಿಯ ಗೃಹೋಪಯೋಗಿ ವಸ್ತುಗಳಲ್ಲಿ ಹೀಗೆ ಹಲವೆಡೆ. ಹೆಚ್ಚಾದ ಪ್ಲಾಸ್ಟಿಕ್ ಎಲ್ಲೆಲ್ಲೋ ಬಿಸಾಡಲ್ಪಡುತ್ತದೆ. ಹಾಗೆಯೇ ನೀರಿನ ವಿವಿಧ ಆಕರಗಳಲ್ಲಿ ಕಾಣಿಸಿಕೊಳ್ಳುತ್ತದೆ. ಸಮುದ್ರದ ಇಕೋ ವ್ಯವಸ್ಥೆಯ ಮೇಲೆ ಪ್ಲಾಸ್ಟಿಕ್ ಬೀರುವ ಪರಿಣಾಮಗಳ ಬಗ್ಗೆ ಹಲವಾರು ಅಧ್ಯಯನಗಳು ನಡೆದಿವೆ. ಅಲ್ಲಿನ ಪ್ರಾಣಿಗಳಾದ ಮೀನು, ಆಮೆ ಮುಂತಾದ ಪ್ರಾಣಿಗಳ ದೇಹಗಳಲ್ಲಿ ಪ್ಲಾಸ್ಟಿಕ್ ಸೇರಿಕೊಳ್ಳುತ್ತದೆ. ಅವುಗಳ ಮೂಲಕ ಪ್ಲಾಸ್ಟಿಕ್ ಉತ್ಪಾದನೆಗೆ ಕಾರಣೀಕೃತನಾದ ಮನುಷ್ಯನ ದೇಹವನ್ನು ಸೇರಿ ಒಂದು ಸರ್ಕಲ್ ಪೂರ್ಣಗೊಳ್ಳುತ್ತದೆ.

ಮ್ಯಾಕ್ರೋಪ್ಲಾಸ್ಟಿಕ್ ಎಂದರೆ ಕಣ್ಣಿಗೆ ಕಾಣುವ ಪ್ಲಾಸ್ಟಿಕ್ ನ ಪರಿಣಾಮಗಳು ಗೋಚರವಾದರೆ ಮೈಕ್ರೋಪ್ಲಾಸ್ಟಿಕ್ ಮತ್ತು ನ್ಯಾನೋ ಪ್ಲಾಸ್ಟಿಕ್ ಗಳು ಮಾನವ ದೇಹದಲ್ಲಿ ಗಂಭೀರ ರೀತಿಯ ಆರೋಗ್ಯ ಪರಿಣಾಮಗಳನ್ನು ಬೀರುತ್ತವೆ. ದೈಹಿಕ, ರಾಸಾಯನಿಕ ಮತ್ತು ಬಯಲಾಜಿಕಲ್ ಕ್ರಿಯೆಗಳ ಮೂಲಕ ಈ ಮೈಕ್ರೋ ಮತ್ತು ನ್ಯಾನೋ ಪ್ಲಾಸ್ಟಿಕ್ ಗಳು ಹುಟ್ಟಿಕೊಳ್ಳುತ್ತವೆ. ಮೈಕ್ರೋ ಪ್ಲಾಸ್ಟಿಕ್ ಗಳೆಂದರೆ 5 ಮಿ ಮೀ ಗಿಂತ ಸಣ್ಣ ಪ್ರಮಾಣದ್ದು, ನ್ಯಾನೋ ಪ್ಲಾಸ್ಟಿಕ್ ಗಳೆಂದರೆ 1u m ಗಿಂತ ಸಣ್ಣದು. ಅವು ಕಣ್ಣಿಗೆ ಗೋಚರವಾಗದೆ ಇರುವುದರಿಂದ ಅವು ಮೈ ತಿಕ್ಕುವ ಸ್ಕಬ್ಸ್ , ಕಣ್ಣಿಗೆ ಉಪಯೋಗಿಸುವ ಕಾಡಿಗೆ, ಶಾಂಪೂಗಳು ಮತ್ತು ಸಮುದ್ರ ಪ್ರಾಣಿಗಳನ್ನು ಆಹಾರವಾಗಿ ಸೇವಿಸುವುದು – ಈ ರೀತಿಯಲ್ಲಿ ಮಾನವ ದೇಹವನ್ನು ಪ್ರವೇಶಿಸುತ್ತವೆ. ಇತ್ತೀಚಿನ ಕೆಲವು ಅಧ್ಯಯನಗಳು ನಲ್ಲಿ ಮತ್ತು ಬಾಟಲಿ ನೀರಿನಲ್ಲಿ



ಸಹಿತ ಮೈಕ್ರೋ ಪ್ಲಾಸ್ಟಿಕ್ ಇರುವುದನ್ನು ದೃಢೀಕರಿಸಿವೆ. ಬಟ್ಟೆ ಮತ್ತು ಪಿ ವಿ ಸಿ ಉದ್ಯಮದ ಕೆಲಸಗಾರರು ಅವರಿಗೆ ಗೊತ್ತಿಲ್ಲದೆಯೇ ನ್ಯಾನೋ ಪ್ಲಾಸ್ಟಿಕ್ ನ್ನು ಅಪಾರ ಪ್ರಮಾಣದಲ್ಲಿ ಸೇವಿಸುತ್ತಾರೆ ಎನ್ನಲಾಗಿದೆ.

ಒಂದು ಅಂದಾಜಿನ ಪ್ರಕಾರ ಪ್ರತಿಯೊಬ್ಬ ಭಾರತೀಯನು ಪ್ರತೀ ವರ್ಷ 11 ಕೆ ಜಿ ಯಷ್ಟು ಪ್ಲಾಸ್ಟಿಕ್ ನ್ನು ವಿವಿಧ ರೀತಿಯಲ್ಲಿ ಸೇವಿಸುತ್ತಾನೆ. ಆದರೆ ಅದೇ ಅಮೆರಿಕದ ಮತ್ತು ಚೀನಾದ ನಾಗರಿಕ ಇದಕ್ಕಿಂತ ಎಷ್ಟೋ ಜಾಸ್ತಿ ಪ್ಲಾಸ್ಟಿಕ್ ಸೇವಿಸುತ್ತಾನೆ ಎನ್ನಲಾಗಿದೆ. ಜಠರವನ್ನು ಸೇರಿದ





ಪ್ಲಾಸ್ಟಿಕ್ ಅವುಗಳ ಗಾತ್ರದ ಪ್ರಕಾರ ಅಲ್ಲಿಂದ ಹೊರಗೆ ತಳ್ಳಲ್ಪಡುತ್ತವೆ ಅಥವಾ ಅಲ್ಲಿಯೇ ಸಿಕ್ಕಿಕೊಳ್ಳುತ್ತವೆ ಜೊತೆಗೆ ಕರುಳಿನ ಒಳಭಾಗದಲ್ಲಿಯೂ ಸಿಕ್ಕಿ ಲೇಪಿಸಲ್ಪಡುತ್ತವೆ. ಮತ್ತೆ ಕೆಲವೊಮ್ಮೆ ರಕ್ತವನ್ನು ಸೇರಿ ದೇಹದ ವಿವಿಧ ಭಾಗಗಳಲ್ಲಿ ಕಾಣಿಸಿಕೊಳ್ಳುತ್ತವೆ. ಇವು ಮಾನವನ ನರವ್ಯೂಹ ವ್ಯವಸ್ಥೆ, ಹಾರ್ಮೋನುಗಳು, ಪ್ರತಿರೋಧ ವ್ಯವಸ್ಥೆಯ ಮೇಲೆ ಹಲವು ಕೆಟ್ಟ ರೀತಿಯ ಪರಿಣಾಮಗಳನ್ನು ಬೀರುವುದೇ ಅಲ್ಲದೆ ವಿವಿಧ ರೀತಿಯ ಕ್ಯಾನ್ಸರ್ ಕಾಯಿಲೆಗೂ ಕಾರಣವಾಗಬಹುದು.

ಇದುವರೆಗಿನ ಸಂಶೋಧನೆಯ ಪ್ರಕಾರ ಮಾನವ ದೇಹದ ರಕ್ತ, ದೊಡ್ಡ ಕರುಳು, ಮಲ ಮತ್ತು ಪ್ಲಾಸೆಂಟಾಗಳಲ್ಲಿ ಮೈಕ್ರೋ ಪ್ಲಾಸ್ಟಿಕ್ ಗಳು ಇರುವುದು ಗೊತ್ತಿತ್ತು. ಆದರೆ ಇತ್ತೀಚಿನ ಒಂದು ಸಂಶೋಧನೆ ಈ ಮೈಕ್ರೋ ಪ್ಲಾಸ್ಟಿಕ್ ಶ್ವಾಸಕೋಶದಲ್ಲಿ ಇರುವುದನ್ನು ಹೊರಗೆಡವಿದೆ.

ಈ ಮೈಕ್ರೋ ಪ್ಲಾಸ್ಟಿಕ್ ಗಳು ದೇಹದ ವಿವಿಧ ಭಾಗಗಳಲ್ಲಿ ಉರಿಯೂತ, ಜೀವಕೋಶಗಳನ್ನು ನಾಶ ಮಾಡುವುದು ಮತ್ತು ಡಿಎನ್ಎಗಳನ್ನು ಹಾಳುಗೆಡವುದನ್ನು ವಿಜ್ಞಾನಿಗಳು ಪ್ರಯೋಗಾಲಯದ ಪ್ರಾಣಿಗಳಲ್ಲಿ ಮತ್ತು ಜೀವಕೋಶಗಳ ಕಲ್ಚರ್ ಗಳಲ್ಲಿ ಕಂಡುಕೊಂಡಿದ್ದಾರೆ.

ಹಲ್ ಮತ್ತು ಹಲ್ ಯಾರ್ಕ್ ವೈದ್ಯಕೀಯ ಕಾಲೇಜಿನ ಸಂಶೋಧಕರು ಶ್ವಾಸಕೋಶದ ರಿಡಕ್ಷನ್ ಶಸ್ತ್ರಕ್ರಿಯೆ ಮತ್ತು ಕ್ಯಾನ್ಸರ್ ಶಸ್ತ್ರಕ್ರಿಯೆಗಳಲ್ಲಿ ಹೊರ ತೆಗೆದ ಶ್ವಾಸಕೋಶದ ಅಂಗಾಂಶಗಳಲ್ಲಿರುವ ಮೈಕ್ರೋ ಪ್ಲಾಸ್ಟಿಕ್ ನ ಅಂಶಗಳನ್ನು ಅಂದಾಜು ಮಾಡಿದರು. FTIR ಸ್ಪೆಕ್ಟ್ರೋಸ್ಕೋಪಿ ಎಂಬ ವಿಶೇಷ ಪರೀಕ್ಷೆಯಲ್ಲಿ 3 ಮೈಕ್ರೋಮೀಟರ್ ಅಳತೆಯ ಮೈಕ್ರೋ ಪ್ಲಾಸ್ಟಿಕ್ ಅನ್ನು ಕಂಡುಹಿಡಿದಿದ್ದಾರೆ. ಈ ಸಂಶೋಧಕರು 11 ರೋಗಿಗಳ ಶ್ವಾಸಕೋಶಗಳ ಬೇರೆ ಬೇರೆ ಭಾಗಗಳಿಂದ ಅಂಗಾಂಶಗಳ ತುಣುಕುಗಳನ್ನು ತೆಗೆದು ಪರೀಕ್ಷೆಗೆ ಒಳಪಡಿಸಿದರು. ನಂತರ ಅವರಿಗೆ ಶ್ವಾಸಕೋಶದ ಎಲ್ಲಾ ಭಾಗಗಳಲ್ಲಿ ಮೈಕ್ರೋ ಪ್ಲಾಸ್ಟಿಕ್ ಇರುವುದು ಕಂಡುಬಂದಿದೆ. ಅವರು 13 ಸ್ಯಾಂಪಲ್ ಗಳಲ್ಲಿ 39 ಮೈಕ್ರೋ ಪ್ಲಾಸ್ಟಿಕ್ ಗಳು ಅಂದರೆ ಸರಾಸರಿ ಸ್ಯಾಂಪಲ್ಲಿಗೆ 3 ಮೈಕ್ರೋ ಪ್ಲಾಸ್ಟಿಕ್ ಗಳು ಕಂಡುಬಂದವು. ಇವುಗಳಲ್ಲಿ 12 ರೀತಿಯ ಮೈಕ್ರೋ ಪ್ಲಾಸ್ಟಿಕ್ ಗಳು ಇದ್ದವು. ಹೆಚ್ಚಿನ ಪ್ರಮಾಣದಲ್ಲಿ ಇದ್ದ ಮೈಕ್ರೋ ಪ್ಲಾಸ್ಟಿಕ್ ಗಳೆಂದರೆ – ಕಾರ್ಪೆಟ್, ಬಟ್ಟೆ, ಆಟೋಮೋಟಿವ್ ಪ್ಲಾಸ್ಟಿಕ್ ನಲ್ಲಿ ಪಾಲಿಪ್ರೋಪಿಲಿನ್ (PP) ಪ್ಲಾಸ್ಟಿಕ್ ಇತ್ತು. ಬಟ್ಟೆ, ಪಾನೀಯಗಳು, ಆಹಾರ ಪದಾರ್ಥಗಳ ಮೇಲಿರುವ ಪಾಲಿ ಎಥಿಲೀನ್ ಟೆರೆಫ್ತಾಲಿಟ್ (PET), ಬಣ್ಣಗಳಲ್ಲಿರುವ ರೆಸಿನ್ ಮತ್ತು ಆಹಾರ ಪದಾರ್ಥಗಳ ಕವರ್ ಮೇಲೆ, ಹಾಲಿನ ಪ್ಯಾಕೆಟ್ಗಳು, ಮಕ್ಕಳ ಆಟಿಕೆಗಳು, ಸೋಪಿನ ಬಾಟಲಿಗಳ ಮೇಲಿರುವ ಪಾಲಿಎಥಿಲಿನ್ (PE)–ಇವುಗಳಿದ್ದವು.

ಶ್ವಾಸಕೋಶದ ಕೆಳಭಾಗಗಳಲ್ಲಿ ಬಹಳ ಹೆಚ್ಚಿನ ಸಂಖ್ಯೆಯ ಮೈಕ್ರೋ ಪ್ಲಾಸ್ಟಿಕ್ ತುಣುಕುಗಳನ್ನು ನಾವು ನಿರೀಕ್ಷಿಸಿರಲಿಲ್ಲ. ಶ್ವಾಸಕೋಶದ ಕೆಳಬಾಗಗಳಲ್ಲಿ ವಾಯುನಾಳಗಳು ಸಣ್ಣದಾಗಿರುತ್ತವೆ. ಹಾಗಾಗಿ ಮೈಕ್ರೋ ಪ್ಲಾಸ್ಟಿಕ್ ಗಳು ಶೇಖರಣೆಗೊಳ್ಳುವುದಕ್ಕಿಂತ ಫಿಲ್ಟರ್ ಆಗುತ್ತವೆ ಎಂದು ನಾವು ನಿರೀಕ್ಷಿಸಿದ್ದೆವು ಎಂದು ಶ್ವಾಸಕೋಶದ ಹಿರಿಯ ತಜ್ಞರಾದ ಡಾ. ಲಾರಾ ಸಡೋಸ್ಕಿ ಅಭಿಪ್ರಾಯ ಪಡುತ್ತಾರೆ.



**ಡಾ. ಬಿ. ಎನ್. ಗಂಗಾಧರ**
ಅಧ್ಯಕ್ಷರು, ಮೆಡಿಕಲ್ ಅಸೆಸ್ಮೆಂಟ್ ಮತ್ತು ರೇಟಿಂಗ್ ಬೋರ್ಡ್
ರಾಷ್ಟ್ರೀಯ ವೈದ್ಯಕೀಯ ಆಯೋಗ, ನವದೆಹಲಿ–110077

ಪ್ರಚಲಿತ...


# ಮಾತೃಭಾಷೆಯಲ್ಲಿ ವೈದ್ಯಕೀಯ ಶಿಕ್ಷಣ: ಆಗುಹೋಗುಗಳು

**ಹಿನ್ನೆಲೆ / ಪೀಠಿಕೆ**

ಸುಮಾರು 40 ವರ್ಷಗಳಿಗೂ ಹಿಂದೆ, ಆಗ ನಾನು ಮನೋವೈದ್ಯ ಕಲಿಕೆಯ ವಿದ್ಯಾರ್ಥಿ. ಜಗತ್ವಿಖ್ಯಾತ ನಿಮ್ಹಾನ್ಸ್‌ನಒಬ್ಬ ಹಿರಿಯ ವೈದ್ಯರಲ್ಲಿ ನನಗೆ ನೀಡಿದ ರೋಗಿಯ ಬಗ್ಗೆ ಚರ್ಚಿಸಬೇಕಿತ್ತು. ರೋಗಿಯ ಖಾಯಿಲೆಯ ಬಗ್ಗೆ ಏನೇ ಆಲಿಸಿದರೂ ಆ ಎಲ್ಲ ವಿವರಗಳನ್ನು ಕೆಲವು ನಿರ್ದಿಷ್ಟ ಶೀರ್ಷಿಕೆಯಡಿ ದಾಖಲಿಸಬೇಕಿತ್ತು. ಮತ್ತು ಅದೇ ಸರದಿಯಲ್ಲಿ ಹಿರಿಯ ವೈದ್ಯರಲ್ಲಿ ತಿಳಿಸಬೇಕು. ಹಾಗಾದಾಗ ರೋಗಿಯ ಖಾಯಿಲೆಯ ನೇರ ಸಮಸ್ಯೆಗಳನ್ನು ಆಂಗ್ಲಭಾಷೆಯಲ್ಲಿ ನೀಡಬೇಕಾಗುತ್ತದೆ. ಆದರೆ ಈ ರೋಗಿ ಆ ಸಮಸ್ಯೆಗಳನ್ನು ತನ್ನದೇ ಭಾಷೆಯಲ್ಲಿ ಹೇಳುತ್ತಾನೆ. ಅದಕ್ಕೆ ಎರಡು ಕಾರಣಗಳು. ಒಂದು ತನ್ನ ಮಾತೃ ಭಾಷೆಯಷ್ಟೇ ತಿಳಿದಿರುವ ರೋಗಿಗಳೇ ಬಹಳಷ್ಟು ಮಂದಿ ಮತ್ತು ಅವರ ಸಮಸ್ಯೆಗಳು ಭಾವನೆಗಳಿಗೆ ಅಂಟಿದಂತಹುಗಳು. ಉದಾ: ಬೇಸರ, ಆತಂಕ, ಭಯ, ಆಶ್ಚರ್ಯ, ಕಸಿ–ವಿಸಿ, ನೋವು, ಇತ್ಯಾದಿ. ಭಾವನೆಗಳ ಒತ್ತಡ ಇದ್ದಾಗ ನಾವು ಸಹಜವಾಗಿಯೇ ಮಾತೃಭಾಷೆ ಬಳಸುತ್ತೇವೆ ಮತ್ತು ಭಾಷೆಯ ಚಹರೆಯೂ ಸಹ ಆ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ಅರ್ಥೈಸಬಲ್ಲದು. ಹಾಗಾಗಿ, ನನ್ನ ಹಿರಿಯ ಪ್ರಾಧ್ಯಾಪಕ ವೈದ್ಯರು ತಿಳಿಸಿದ/ಕಲಿಸಿದ ಸಂಗತಿ ನನ್ನನ್ನು ಈ ಲೇಖನ ಬರೆಯಲು ಪ್ರೇರೇಪಿಸಿದೆ ಎಂದರೆ ತಪ್ಪಾಗಲಾರದು. "ರೋಗಿ ಹೇಳಿದ ಸಮಸ್ಯೆಗಳನ್ನು ಅತನದೇ ಭಾಷೆಯಲ್ಲಿ ಬರೆದು, ತಿಳಿಸು." "ಹಾಗೆಯೆ ನೇರವಾಗಿ ತಿಳಿಸಿದಲ್ಲಿ ರೋಗಿಯ ವ್ಯಕ್ತಿಚಿತ್ರಣ ಮೂಡಿಬರುತ್ತದೆ ಹಾಗೂ ಚಿಕಿತ್ಸೆಗೆ ಸಹಾಯ ಮಾಡುತ್ತದೆ". ಪ್ರಾಯಶಃ ಎಲ್ಲ ಅಧ್ಯಾಪಕರು ಈ ಸೂತ್ರ ಪಾಲಿಸಿದ್ದಲ್ಲಿ ಈ ನಾಲ್ಕು ದಶಕಗಳಲ್ಲಿ ವೈದ್ಯಶಿಕ್ಷಣಕ್ಕೆ ಒಂದು ಭಿನ್ನವಾದ ದಿಶೆ ದೊರೆತು ಬದಲಾವಣೆಗೆ ನಾಂದಿ ಆಗಬಹುದಾಗಿತ್ತು

**ಉದಾಹರಣೆಗಳು:**

ಅನೇಕ ಹೊರ ರಾಷ್ಟ್ರಗಳಲ್ಲಿ ತಮ್ಮ ಭಾಷೆಯನ್ನು ಹಿರಿಯ ವಿಜ್ಞಾನ ಕಲಿಕೆಯಲ್ಲಿ ಸಹಜವಾಗಿ ಹಾಗು ಪರಿಣಾಮಕಾರಿಯಾಗಿ ಅಳವಡಿಸಿಕೊಂಡಿದ್ದಾರೆ. ಸುಮಾರು ಎಲ್ಲ ವೈದ್ಯಕೀಯ ಕಾಲೇಜುಗಳಲ್ಲಿ ಅವರ ರಾಷ್ಟ್ರಭಾಷೆಯಲ್ಲಿ ಕಲಿಸಲಾಗುವುದು. ಉದಾಹರಣೆಗೆ, ಜರ್ಮನಿ, ಚೀನಾ, ಕೊರಿಯಾ, ರಷ್ಯಾ ರಾಷ್ಟ್ರಗಳಲ್ಲಿ / ದೇಶಗಳಲ್ಲಿ ಕೆಲವೇ ಬೆರಳೆಣಿಕೆಯ ಕಾಲೇಜುಗಳಲ್ಲಿ ಆಂಗ್ಲಭಾಷೆ ಬಳಕೆಯಲ್ಲಿದೆ. ಇಲ್ಲಿನ ಅಧ್ಯಾಪಕರಿಗೆ ಪ್ರಾಯಶಃ ಆಂಗ್ಲಭಾಷೆ ಬಳಕೆಯಲ್ಲಿ ಪ್ರಾವೀಣ್ಯತೆ ಇರದಿರಬಹುದು. ಕಳೆದ ಎರಡು ದಶಕದ ಹಿಂದೆ ಜಾಗತೀಕರಣ ವೇಗವಾಗಿ ಹರಡಿದ ನಂತರವೇ ಈ ಆಂಗ್ಲಭಾಷೆಯ ವೈದ್ಯಕೀಯ ಕಾಲೇಜುಗಳು ಈ ದೇಶಗಳಲ್ಲಿ ಪ್ರಾರಂಭವಾಗಿದೆ ಎಂದು ಅರಿಯಬಹುದು. ಅವರದೇ ಮಾತೃಭಾಷೆಗಳಲ್ಲಿ ವೈದ್ಯಕೀಯ ಪುಸ್ತಕಗಳು ಮತ್ತು ವೈಜ್ಞಾನಿಕ ನಿಯತಕಾಲಿಕೆಗಳು: ಹೀಗೆ ಚಿಂತನೆ ಬಂದದ್ದರಿಂದ ಆಂಗ್ಲಭಾಷೆಯ ಪ್ರಯೋಗವಿಲ್ಲದೆಯೇ ವೈದ್ಯಕೀಯ ಶಿಕ್ಷಣ ಬಹಳ ಮುಂದುವರಿದು ಈ ದೇಶಗಳ ವೈದ್ಯಕೀಯ ವ್ಯವಸ್ಥೆ ಅಂತಾರಾಷ್ಟ್ರೀಯ ಹೆಸರುಗಳಿಸಿದೆ. ಅದೂ ಅಲ್ಲದೆ ವೈದ್ಯಕೀಯ ಕ್ಷೇತ್ರದಲ್ಲಿ ಅಂತಾರಾಷ್ಟ್ರೀಯ ಹೆಸರು ಪ್ರಶಸ್ತಿಗಳನ್ನು, ನೊಬೆಲ್ ಪ್ರಶಸ್ತಿಯನ್ನು ಸಹ, ಈ ವೈದ್ಯರು ಗಳಿಸಿದ್ದಾರೆ. ಅನೇಕ ಪ್ರಮುಖ ವೈಜ್ಞಾನಿಕ ಲೇಖನಿಗಳು ಆಂಗ್ಲಭಾಷೆ ಅಲ್ಲದಿದ್ದರೂ ಸಹ, ಮನ್ನಣೆಗೆ ಪಾತ್ರವಾಗಿ ಜಾಗತಿಕ ಸ್ತರದಲ್ಲಿ ಪ್ರಭಾವ ಮೂಡಿಸಿ ಅದನ್ನು ಬರೆದ ವಿಜ್ಞಾನಿಗಳಿಗೆ ಪುರಸ್ಕಾರಗಳನ್ನು ತಂದಿವೆ. ಹಾಗಾಗಿ ವೈದ್ಯವಿಜ್ಞಾನ ಕಲಿಕೆಗೆ ಆಂಗ್ಲಭಾಷೆ ಅನಿವಾರ್ಯ ಅಲ್ಲ ಎನ್ನುವುದು ಮನದಟ್ಟಾಗಬೇಕು.




**ವೈದ್ಯ ವೃತ್ತಿ ಕಲಿಕೆಗೆ ಭಾರತೀಯ ಭಾಷೆ ಏಕೆ ಉತ್ತಮ?**

ವೈದ್ಯ ಕಲಿಕೆಯಲ್ಲಿ ಪ್ರಾರಂಭದ ಹಂತ ಎಂದರೆ ರಾಷ್ಟ್ರೀಯ ಸ್ಪರ್ಧಾ ಪರೀಕ್ಷೆಯಲ್ಲಿ ಉತ್ತಮಸ್ತರದಲ್ಲಿ ಅಂಕ

ಗಳಿಸಬೇಕು. ಕಾರಣಾಂತರಗಳಿಂದ ಇತ್ತೀಚಿನವರೆಗೆ ಈ ಪರೀಕ್ಷೆ ಆಂಗ್ಲಭಾಷೆಯಲ್ಲಿಯೇ ನಡೆಸಲಾಗುತ್ತಿತ್ತು. ಈ ನಡುವೆ ಹಲವು ಪ್ರಾಂತೀಯ ಭಾಷೆಯಲ್ಲಿ ಪರೀಕ್ಷೆಯ ಕಾರಣದಿಂದಾಗಿ ಆಂಗ್ಲಭಾಷೆಯ ಪ್ರಾವೀಣ್ಯಇಲ್ಲದ ಅನೇಕರು ವೈದ್ಯಕೀಯ ಕಲಿಕೆಗೆ ಅರ್ಹರಾದರು. ಆದರೆ ಮುಂದಿನ ಕಲಿಕೆಗೆ ಆಂಗ್ಲಭಾಷೆಯಲ್ಲಿಬೇಕೆಂದಾಗ ಈ ರೀತಿಯ ವಿದ್ಯಾರ್ಥಿಗಳಿಗೆ ಕಷ್ಟವಾಗಬಹುದು. ಆದಕಾರಣದಿಂದಾಗಿ ಈ ರೀತಿಯ ವಿದ್ಯಾರ್ಥಿಗಳು ವೈದ್ಯಕೀಯ ಶಿಕ್ಷಣದಿಂದಲೇ ದೂರ ಉಳಿಯಬಹುದು. ವೈದ್ಯಕೀಯ ಶಿಕ್ಷಣಕ್ಕೆ ಬೇಕಾಗುವ ಬುದ್ಧಿವಂತಿಕೆ ಅನೇಕರಲ್ಲಿ ಇರಬಹುದು, ಆಂಗ್ಲಭಾಷೆ ಕಲಿತವರಷ್ಟೇ ಅಲ್ಲದೆ ಇತರರಲ್ಲಿಯೂ ಸಹ. ಆದರೆ ಆಂಗ್ಲಭಾಷೆಯಲ್ಲಿ ಶಿಕ್ಷಣಮಾಧ್ಯಮವಾದಾಗ, ಅನೇಕ ಬುದ್ಧಿವಂತ ವಿದ್ಯಾರ್ಥಿಗಳು ಈ ಭಾಷಾ ಮಾಧ್ಯಮದ ಕಾರಣದಿಂದಾಗಿ ವೈದ್ಯರಾಗುವುದಿಲ್ಲ. ಅಥವಾ ವೈದ್ಯಕಲಿಕೆಗೆ ಹಿಂಜರಿಯುತ್ತಾರೆ. ಈ ಅಸಮಾನತೆಯನ್ನು ದೂರಗೊಳಿಸಲು ಶಿಕ್ಷಣ ಭಾಷಾಮಾಧ್ಯಮದಲ್ಲಿನ ಬದಲಾವಣೆ ಸಹಾಯವಾಗಬಹುದು. ಹೀಗಾಗಿ ಭಾರತೀಯ ಭಾಷೆಗಳಲ್ಲಿ ವೈದ್ಯಶಿಕ್ಷಣದ ಚಿಂತನೆ ಅವಶ್ಯವಿದೆ.




### ನಮ್ಮ ಭಾಷೆಗಳಲ್ಲಿ ವೈದ್ಯಕೀಯ ಪುಸ್ತಕಗಳು:

ವೈದ್ಯಕೀಯ ಶಿಕ್ಷಣದಲ್ಲಿ ಎರಡು ಭಾಗಗಳನ್ನು ನೋಡಬಹುದು. ಒಂದೆಂದರೆ ಪಠ್ಯ, ಅದರಲ್ಲಿ ವೈಜ್ಞಾನಿಕವಾದ ವೈದ್ಯಕೀಯಶಾಸ್ತ್ರದ ಕಲಿಕೆ. ಇದರಲ್ಲಿ ಉಪನ್ಯಾಸಕರಿಂದ ತಿಳಿಸಲಾಗುವ ಪಾಠಗಳು ಮತ್ತು ಪುಸ್ತಕಗಳು ಸಹಾಯಕವಾಗಿತ್ತವೆ.ಇದಕ್ಕಾಗಿ ಇಂದು ಆಂಗ್ಲಭಾಷೆಯ ಪ್ರಾವೀಣ್ಯತೆ ಅವಶ್ಯ. ಆದರೆ ಈ ಪುಸ್ತಕಗಳು ಹಾಗೂ ಪಾಠಗಳು ನಮ್ಮ ಭಾಷೆಯಲ್ಲಿಯೇ ಆಗಬಹುದೇ?

ವೈದ್ಯಕೀಯ ಪುಸ್ತಕಗಳನ್ನು ಸ್ಥಾನೀಯ, ಭಾರತೀಯ ಭಾಷೆಗಳಲ್ಲಿ ತರುವ ಪ್ರಯತ್ನ ಆಗಿಯೇ ಇಲ್ಲ ಎನ್ನುವುದು ಸ್ಪಷ್ಟ. ಸ್ವಾತಂತ್ರ್ಯನಂತರದಲ್ಲಿ ಈ ಪ್ರಕ್ರಿಯೆಗೆ ಆಸ್ಪದ ನೀಡಲಿಲ್ಲ. ಆಂಗ್ಲಮಾಧ್ಯಮವೇ ಪ್ರಯೋಗದಲ್ಲಿದೆ. ಎಲ್ಲ ಪುಸ್ತಕಗಳು ಆಂಗ್ಲಭಾಷೆಗಳಲ್ಲಿಯೇ ಇದ್ದು ಅದರ ಬೆಲೆಯೂ ಸಹ ಹೆಚ್ಚಿದವು, ಈಗಲೂ ಸಹ. ಆದ್ದರಿಂದ ವೈದ್ಯಕೀಯ ಶಿಕ್ಷಣ ದುಬಾರಿಯಾಗಲು ಈ ಪುಸ್ತಕಗಳ ಬೆಲೆಯೂ ಸಹ ಕಾರಣ.

### ಭಾಷೆ, ರೋಗಿಗಳೊಡನೆ ಸಂವಾದ, ಕಲಿಕೆ/ ಅನುಭವ:

ವೈದ್ಯಕೀಯ ಶಿಕ್ಷಣದಲ್ಲಿ ಎರಡನೆಯ ಹಾಗು ಬಹಳ ಅಮೂಲ್ಯ ವಾದ ಸಂಗತಿ ಎಂದರೆ ರೋಗಿಗಳ ತಪಾಸಣೆ ಹಾಗು ರೋಗ ನಿದಾನ ಇವುಗಳಲ್ಲದೆ ರೋಗಿಗಳ ಸಮಸ್ಯೆಗಳನ್ನು ಶಾಂತವಾಗಿ ಆಲಿಸಿ ಅರ್ಥಮಾಡಿಕೊಳ್ಳುವುದು ಮತ್ತು ರೋಗಿಗಳಿಗೆ ಹಾಗು ಅವರ ಬಂಧುಗಳಿಗೆ ರೋಗದ ಬಗ್ಗೆ ಮತ್ತು ಚಿಕಿತ್ಸೆಯ ಆಗು-ಹೋಗುಗಳ ಬಗ್ಗೆ ಸರಿಯಾಗಿ ತಿಳಿಹೇಳುವುದು ಇವುಗಳಿಗೆ ಭಾಷೆಯ ಅವಶ್ಯ ಬಹಳ ಇದೆ. ರೋಗಿಯ ಭಾಷೆಯಲ್ಲಿಯೇ ತಿಳಿ ಹೇಳಿದಾಗ ಅದು ಆತನ ಸಮಸ್ಯೆಗಳನ್ನು ಸರಿಯಾಗಿ ಗ್ರಹಿಸಿದಾಗ ಚಿಕಿತ್ಸೆ ಹಾಗು ಸಾಂತ್ವನ ಹೆಚ್ಚು ಪರಿಣಾಮಕಾರಿಯಾಗಬಹುದು, ನಿಶ್ಚಿತವಾಗಿಯೂ ಸಹ. ಖಾಯಿಲೆಗಳ ಲಕ್ಷಣಗಳನ್ನು ನಮ್ಮ ಭಾಷೆಯಲ್ಲಿಯೇ ಅರ್ಥೈಸುವುದು ಹಾಗು ಅದರ ಆಧಾರದ ಮೇಲೆ ವಾಕ್ಯಗಳನ್ನು ರಚಿಸುವುದು ಅವಶ್ಯ. ತನ್ನದೇ ಭಾಷೆಯಲ್ಲಿ ಸಂಭಾಷಿಸಲು ಬಲ್ಲಂತಹ ವೈದ್ಯರಲ್ಲಿ ರೋಗಿಗಳಿಗೆ ಭರವಸೆ/ವಿಶ್ವಾಸಮೂಡುತ್ತದೆ. ಅನೇಕ ಬಾರಿ ನಾವು ಕಲಿತ ವಿದ್ಯೆ ಆಂಗ್ಲಭಾಷೆಯಲ್ಲಿ ಆಗಿರುವುದರಿಂದ ಖಾಯಿಲೆಯ ಬಗ್ಗೆ ರೋಗಿಗೆ ಸರಳವಾಗಿ ತಿಳಿಹೇಳುವುದು ಸಮಸ್ಯೆಯಾಗಬಹುದು. ಈ ಕಾರಣಕ್ಕೂ ಸಹ ವೈದ್ಯಕಲಿಕೆ ಸ್ವಭಾಷೆಯಲ್ಲಿ ನಡೆಸಿದಾಗ ಹೆಚ್ಚು ಸಮರ್ಥವಾದೀತು.

### ವಿದೇಶಗಳಲ್ಲಿ ನಮ್ಮ ವೈದ್ಯರು:

ಈ ರೀತಿಯ ಪ್ರಾದೇಶಿಕ ಭಾಷೆಗಳಲ್ಲಿನ ಶಿಕ್ಷಣ ಜಾಗತಿಕಸ್ತರದಲ್ಲಿ ಒಂದು ತೊಡಕಾಗಿ ಕಾಣಬಹುದು. ನಮಗೆ ತಿಳಿದಿರಲಿ, ವಿದೇಶದಲ್ಲಿನ ವೈದ್ಯರಲ್ಲಿ ಭಾರತೀಯರೇ ಅತಿ ಹೆಚ್ಚಿನವರು ಇದ್ದಾರೆ. ಕಲಿಕೆಯಲ್ಲಿ ಮೇಧಾವಿಗಳು ಹಾಗು ವೃತ್ತಿಯಲ್ಲಿ ಸ್ವಭಾವತಃಗುಣವಂತರು ಭಾರತೀಯ ವೈದ್ಯರು. ವೈದ್ಯೋನಾರಾಯಣೋಹರಿಃ ಎಂಬ ಉಕ್ತಿಗೆ ತಕ್ಕಂತೆ ಭಾರತೀಯ ಸಂಸ್ಕೃತಿಯಲ್ಲಿ ಸಹಜವಾದ ವೃತ್ತಿಧರ್ಮವನ್ನು ನಮ್ಮ ವೈದ್ಯರು ಅಳವಡಿಸಿಕೊಂಡಿದ್ದಾರೆ. ಸಹನಶೀಲತೆ, ಸಂವೇದನಾ ಸಾಮರ್ಥ್ಯ ಹಾಗು ಸೇವಾಮನೋಭಾವ ಇವುಗಳು ಭಾರತೀಯವೈದ್ಯರಲ್ಲಿ ಸಹಜವಾಗಿ ಹೆಚ್ಚು ಕಾಣಬರುವುದರಿಂದ ವಿದೇಶಗಳಲ್ಲಿ ಮಾನ್ಯತೆ

ದೊರಕಿದೆ. ಅದಲ್ಲದೆ ಭಾರತೀಯ ವೈದ್ಯರೆಲ್ಲರೂ ಸಹ ಆಂಗ್ಲಭಾಷೆಯಲ್ಲಿಯೇ ಕಲಿತದ್ದರಿಂದ ಹೊರದೇಶಗಳಲ್ಲಿ ಸುಲಭವಾಗಿ ವ್ಯವಹರಿಸುತ್ತಾರೆ. ಭಾರತೀಯ ಭಾಷಾ ಮಾಧ್ಯಮಗಳಲ್ಲಿ ವೈದ್ಯಕಲಿಕೆ ನೀಡಿದಾಗ ಇದು ಒಂದು ಸವಾಲು ಮತ್ತು ಲಾಭವೂ ಆಗಬಹುದು. ಅನೇಕ ವರ್ಷಗಳಿಂದ ವೈದ್ಯರ ಕೊರತೆಯ ಅಳಲು ನಮ್ಮದೇಶವನ್ನು ಕಾಡುತ್ತಲೇ ಇದೆ. ಪ್ರಾದೇಶಿಕ ಭಾರತೀಯ ಭಾಷೆಗಳಲ್ಲಿ ವೈದ್ಯರನ್ನು ತಯಾರಿಸಿದಲ್ಲಿ ಈ ವೈದ್ಯರು ಭಾರತದಲ್ಲಿಯೇ ಉಳಿದು ಇಲ್ಲಿನ ಜನರ ಸೇವೆಗಾಗಿ ದುಡಿಯುತ್ತಾರೆ. ಈ ಅಭಾವವೂ ಸಹ ಕಡಿಮೆಯಾಗಬಹುದು.



**ಮಾರ್ಗಗಳು:**

ರಾಷ್ಟ್ರೀಯ ಭಾಷೆಗಳನ್ನು ವೈದ್ಯ ಶಿಕ್ಷಣದಲ್ಲಿ ಬಳಸಬೇಕಾದರೆ ಏನೆಲ್ಲ ಪ್ರಯತ್ನಗಳು ಬೇಕಾಗಬಹುದು? ಪಠ್ಯ ಪುಸ್ತಕಗಳನ್ನು ನಮ್ಮ ಭಾಷೆಗಳಲ್ಲಿ ತರಬೇಕು. ಇದು ಒಂದು ದೊಡ್ಡ ಸವಾಲು. ಅನೇಕ ವೈದ್ಯಕೀಯ/ವೈಜ್ಞಾನಿಕ ಪದಗಳನ್ನು ತರ್ಜುಮೆ ಮಾಡದೇ ಬಳಸಬಹುದೇ? ಬೇಕಾದಲ್ಲಿ ವೈದ್ಯಪದಗಳ ನಿಘಂಟು ತರಬಹುದೇ? ಅನೇಕ ನಿಯತಕಾಲಿಕೆಗಳು ವೈದ್ಯಶಾಸ್ತ್ರದ ಅನೇಕ ಸಂಘಟನೆಗಳ ಆಶ್ರಯದಲ್ಲಿ ಭಾರತದಲ್ಲಿಯೇ ಪ್ರಕಟವಾಗುತ್ತಲಿವೆ. ವಿವಿಧ ವೈದ್ಯಶಾಸ್ತ್ರ ವಿಭಾಗಗಳ ಭಾರತೀಯ ಸಂಘಟನೆಗಳ ಅಥವಾ ಅವುಗಳ ಪ್ರಾಂತದ ಘಟಕಗಳು ಆಂಗ್ಲ ಹಾಗು ಸ್ವಭಾಷೆಗಳಲ್ಲಿ ನಿಯತಕಾಲಿಕೆಗಳನ್ನು ಪ್ರಕಟಿಸಬಹುದೇ? ಆಂಗ್ಲ ಭಾಷೆಯಲ್ಲಿ ಬರೆಯುವ ಪ್ರಭಾವಿ ಪ್ರಬಂಧಗಳ ಅನುವಾದವನ್ನು ಪ್ರಕಟಿಸಬಹುದೇ? ದ್ವಿಭಾಷಾ ನಿಯತಕಾಲಿಕೆಗಳು ಹೊರದೇಶಗಳಲ್ಲಿವೆ. ನಮ್ಮಲ್ಲಿಯೂ ಸಹ ಈ ಪದ್ಧತಿಯನ್ನು ಕಾರ್ಯರೂಪಕ್ಕೆ ತರಬಹುದು

**ಶಿಕ್ಷಣ ಮತ್ತು ಶಿಕ್ಷಕರು:**


ಉಪನ್ಯಾಸಕರು ಸರಳವಾಗಿ ಹಾಗು ಸಹಜವಾಗಿ ಸ್ಥಾನೀಯ ಭಾಷೆಗಳಲ್ಲಿ ಕಲಿಕೆ ನೀಡಬಹುದೇ? ಪರೀಕ್ಷೆಗಳನ್ನು ಸಹ ನಮ್ಮ ಭಾಷೆಗಳಲ್ಲಿ ತರಬಹುದೇ? ಸ್ವಭಾಷೆಯಲ್ಲಿ ಕಲಿತ ವೈದ್ಯರಿಗೆ ಅದೇ ಪ್ರಾಂತದ ನೌಕರಿಯಲ್ಲಿ ಆದ್ಯತೆ ನೀಡಬಹುದೇ? ಸ್ವಭಾಷಾ ವೈದ್ಯ ಶಿಕ್ಷಣದ ಸವಾಲುಗಳು ಈ ರೀತಿಯ ಹತ್ತು ಹಲವು ಚಿಂತನೆಗಳಿಗೆ ಅವಕಾಶ ನೀಡುತ್ತವೆ.

**ಸ್ವಭಾಷೆಯಲ್ಲಿ ವೈದ್ಯ ವೃತ್ತಿ ಕಲಿಕೆ ಪ್ರಾಶಸ್ತ್ಯ ನೀಡಬಹುದೇ? ಮನಸಿದ್ದಲ್ಲಿ ಮಾರ್ಗ:**

ಸ್ವ ಭಾಷೆಗಳಲ್ಲಿ ವೈದ್ಯಶಿಕ್ಷಣ ಒಂದು ಸವಾಲಾಗಿ ಈಗ ಕಾಣಬಹುದು. ಕಳೆದ 7–8 ದಶಕಗಳ ವ್ಯವಸ್ಥೆಯಿಂದಾಗಿ ಎಲ್ಲ ರೀತಿಯ ವೃತ್ತಿಪರ ಉನ್ನತ ಶಿಕ್ಷಣಕ್ಕಾಗಿ ನಮ್ಮ ದೇಶದಲ್ಲಿ ಆಂಗ್ಲಭಾಷೆಯನ್ನು ಅಳವಡಿಸಿಕೊಂಡಿದ್ದೇವೆ. ಪ್ರಮುಖವಾಗಿ ಈ ಬದಲಾವಣೆ ಕ್ರಾಂತಿಕಾರಕ ಅಥವಾ ಊಹಾತೀತ ಎನ್ನಿಸಬಹುದು. ಈ ಬದಲಾವಣೆ ತರದಿದ್ದಲ್ಲಿ ಅನೇಕ ಮೇಧಾವಿ ವಿದ್ಯಾರ್ಥಿಗಳು ಭಾಷೆಯ ಕಾರಣದಿಂದಾಗಿಯೇ ಈ ರೀತಿಯ ಉನ್ನತ ಶಿಕ್ಷಣದಿಂದ ವಂಚಿತರಾದಾರು. ಇದರ ನಷ್ಟ ಸಮಾಜಕ್ಕೂ ಹೌದು. ಪ್ರತಿಭೆ ಇರುವ ಆದರೆ ಆಂಗ್ಲಭಾಷಾ ನೈಪುಣ್ಯವಿಲ್ಲದವರನ್ನು ಸರಿಯಾದ ವೈದ್ಯರನ್ನಾಗಿ ಸಮಾಜಕ್ಕೆ ಪೂರಕವಾಗಿ ಶ್ರಮಿಸಲು ಸಾಧ್ಯವಾಗುವಂತೆ ಮಾಡಲು ಸಾಧ್ಯಇದೆ ಎಂಬುವುದು ಕಾಲ್ಪನಿಕವಲ್ಲ. ಹೊರದೇಶಗಳ ಉದಾಹರಣೆಗಳೇ ಇವನ್ನು ಹೇಳುತ್ತವೆ. ಸ್ವ ಭಾಷೆಯ ಬಳಕೆ ವೈದ್ಯವೃತ್ತಿಯಲ್ಲಿ ಒಂದು ವಿಶೇಷ ಸ್ಥಾನಪಡೆಯುತ್ತದೆ. ಈ ಬದಲಾವಣೆಗಾಗಿ ಪರ–ವಿರೋಧ ಚರ್ಚೆ ಅವಶ್ಯ. ಕಲಿಯಲು ಆಶಿಸುವ ವಿದ್ಯಾರ್ಥಿಗಳು, ಆರೋಗ್ಯ ಸೇವೆಪಡೆಯಲು ಕಾತುರವಾಗಿರುವ ಸಾರ್ವಜನಿಕರು, ಶಿಕ್ಷಣತಜ್ಞರು ಹೀಗೆ ಹಲವಾರು ಜನರ ಚಿಂತನೆ, ಅವರ ಭಾವನೆಗಳು, ಅವರ ಮುಕ್ತ ಅಭಿಪ್ರಾಯಗಳು ಅವಶ್ಯ. ಈ ಲೇಖನ ಈ ರೀತಿಯ ಚಿಂತನೆಗೆ ಬೇಕಾಗುವ ಸಾಮಗ್ರಿ ಒದಗಿಸಿದೆ ಎಂದು ಭಾವಿಸುತ್ತೇನೆ. ಬದಲಾವಣೆ ತರುವುದು ಅಸಾಧ್ಯವಲ್ಲ. ಆದರೆ ಮಾರ್ಗಕಂಟಕ, ಕಷ್ಟಕರ

ಹೌದು. ಆಡು ಭಾಷೆಯಲ್ಲಿ ಹೇಳಬೇಕಾದರೆ – ಮನಸ್ಸಿದ್ದಲ್ಲಿ ಮಾರ್ಗ. ಬದಲಾವಣೆಯ ಮಾನಸಿಕತೆಯನ್ನು ತರಬಹುದೇ?

**ವಿ. ಸೂ: ಈ ಲೇಖನದಲ್ಲಿರುವ ಅಭಿಪ್ರಾಯಗಳು ಕೇವಲ ವೈಯುಕ್ತಿಕ. ಡಾ. ಗಂಗಾಧರ ಅವರ ಪ್ರಸಕ್ತ ಹುದ್ದೆಯಿಂದಾಗಿ ಈ ಅಭಿಪ್ರಾಯಗಳಿಗೆ ಮಾನ್ಯತೆ ದೊರಕಿದೆ ಎಂದಲ್ಲ.**



**ಡಾ ಕ ರಮೇಶ ಬಾಬು**
51 / ಡಿ, ವಶ್ವಗಿರಿ, ಹೊಸ ಬಾದಾಮಿ ನಗರ
ಹುಬ್ಬಳ್ಳಿ 580023

ಕಥಾ ವಿಭಾಗ

# ಸುಖೀ ಸಂಸಾರಕ್ಕೊಂದು ಸೂತ್ರ!?



**ಡಾ ಸಲೀಮ ನದಾಫ**
ವಿಭಾಗೀಯ ಸಂಪಾದಕರು

ಬೆಳಿಗ್ಗೆ ಇನ್ನೂ ಕಣ್ಣು ಬಿಡೋಕೆ ಮುಂಚೇನೇ ಮೊಬೈಲ್‌ನಲ್ಲಿ ಕರೆ ಬಂದಿತ್ತು. ಮಂಚದ ಪಕ್ಕದಲ್ಲಿದ್ದ ಟೀಪಾಯ್ ಮೇಲೆ ನಿದ್ದೆಗಣ್ಣಲ್ಲೇ ಕೈಯಾಡಿಸಿ, ಮೊಬೈಲ್ ತೆಗೆದುಕೊಂಡು ನಿಧಾನವಾಗಿ ಕಣ್ತೆರೆದು, ಕರೆ ಮಾಡಿದವರಾರೆಂದು ನೋಡಿದೆ. ನನ್ನ ಗೆಳೆಯ ರಾಘವ ಕರೆ ಮಾಡಿದ್ದ. ಅರೆ, ಇವನು ಯಾವಾಗ ಲಂಡನ್ ನಿಂದ ವಾಪಸ್ಸು ಬಂದ ಎಂದು ಅಚ್ಚರಿ ಪಡುತ್ತಾ,

"ಹಲೋ, ರಾಘವಾ, ಗುಡ್ ಮಾರ್ನಿಂಗ್, ಯಾವಾಗ ಬಂದೆ ಲಂಡನ್ ನಿಂದ?" ಎಂದೆ.

"ಬಂದು ಆಗ್ಲೇ ನಾಲ್ಕು ದಿನ ಆಯ್ತು. ಬೆಂಗಳೂರಿಗೆ ಬಂದ ಮೇಲೆ ಏನೇನೋ ಕೆಲಸಗಳೆಲ್ಲಾ ಬಾಕಿ ಉಳಿದಿದ್ದವು. ಅದಕ್ಕೇ ಬಂದ ಕೂಡ್ಲೇ ನಿನಗೆ ಫೋನ್ ಮಾಡ್ಲಿಕ್ಕೆ ಆಗ್ಲಿಲ್ಲ. ಈ ದಿನ ಸ್ವಲ್ಪ ಬಿಡುವು ಸಿಕ್ತು. ಇವತ್ತು ಸಾಯಂಕಾಲ ಕಲೆಯೋಣ್ವಾ? ಇವತ್ತು ಶನಿವಾರ, ನಿನ್ನ ಕ್ಲಿನಿಕ್ ಅರ್ಧ ದಿನ ತಾನೇ?" ಎಂದು ಕೇಳಿದ ಬಹಳ ಉತ್ಸಾಹದಿಂದ.

"ಇವತ್ತು ಸಾಯಂಕಾಲ ಆದ್ರೆ ನೋ ಪ್ರಾಬ್ಲಮ್. ಶ್ರೀಧರಾನೂ ಬರ್ತಾನಾ? ಅವನ ಕ್ಲಿನಿಕ್ ಕೂಡಾ ಇವತ್ತು ಅರ್ಧ ದಿನಾನೇ" ಎಂದೆ, ನಾವು ಗೆಳೆಯರೆಲ್ಲ ಸೇರಿದ್ರೆ ಕನಿಷ್ಠ ನಾನು, ಶ್ರೀಧರ ಮತ್ತೆ ರಾಘವ ಮೂರೂ ಮಂದಿ ಇರಲೇ ಬೇಕು. ಬಳ್ಳಾರಿ ಮೆಡಿಕಲ್ ಕಾಲೇಜಿನಲ್ಲಿ ಎಂ.ಬಿ.ಬಿ.ಎಸ್ ಮಾಡುವಾಗ ನಮ್ಮ ಗೆಳೆತನ ಬೆಸೆದಿದ್ದರೂ, ಪೋಸ್ಟ್ ಗ್ರಾಜುಯೇಶನ್ ಮುಗಿಸಿ, ಬೆಂಗಳೂರಿನಲ್ಲಿ ಪ್ರಾಕ್ಟೀಸ್ ಆರಂಭಿಸಿದಾಗ ಮತ್ತೊಮ್ಮೆ ನಮ್ಮ ಒಡನಾಟ ಆರಂಭವಾಗಿತ್ತು. ನಾವು ಹಾಸ್ಟೆಲ್‌ಗೆ ಸೇರಿದಾಗ ಶ್ರೀಧರನ ಕೋಣೆ ಜೊತೆಗಾರನಾಗಿ ಕೇಶವರೆಡ್ಡಿ ಎಂಬ ನಮ್ಮ ಸಹಪಾಠಿಯಿದ್ದ. ಅವನು ಪಠ್ಯ ವಿಷಯಗಳಲ್ಲಿ ಪ್ರಬುದ್ಧನಾಗಿದ್ದರೂ, ಇನ್ನುಳಿದಂತೆ, ಯಾರೊಡನೆಯೂ ಸೇರದೆ ಅಂತರ್ಮುಖಿಯಾಗಿ ಇರುತ್ತಿದ್ದ. ಹಾಗಾಗಿ ಅವನು ಮಬ್ಬುರೆಡ್ಡಿಯೆಂದೇ ಖ್ಯಾತನಾಗಿದ್ದ. ತನ್ನ ಉಡುಪು, ಪುಸ್ತಕಗಳನ್ನೆಲ್ಲಾ ಅಸ್ತವ್ಯಸ್ತವಾಗಿ ಹರಡಿಕೊಂಡು ಕುಳಿತಿರುತ್ತಿದ್ದ ಅವನಿಗೂ, ಅಚ್ಚುಕಟ್ಟಿಗೆ ಹೆಸರಾಗಿದ್ದ ಶ್ರೀಧರನಿಗೂ ಆಗಾಗ ತಿಕ್ಕಾಟವಾಗಿ, ಕೊನೆಗೊಮ್ಮೆ ಅವನು ತನ್ನ ಕೋಣೆಯನ್ನು ಬದಲಿಸಿಕೊಂಡಾಗ ನಾನು ಶ್ರೀಧರನ ಕೋಣೆಗೆ ಹೋಗಿ ಅವನ ಜೊತೆಗಾರನಾಗಿದ್ದೆ. ಆ ಸಂದರ್ಭದಲ್ಲಿ ನನಗೂ, ಶ್ರೀಧರನಿಗೂ ಹೆಚ್ಚು ಆತ್ಮೀಯತೆ ಉಂಟಾಗಿತ್ತು.



"ಹೌದು. ಅವನಿಗೆ ನಿನ್ನೇನೇ ಮಾಡಿದ್ದೆ. ಅವನ ಮಿಸೆಸ್ ಊರಲ್ಲಿ ಇಲ್ಲವಂತೆ.

ಊಟಕ್ಕೂ ಎಲ್ಲೂ ಹೋಗೋದು ಬೇಡಾ, ನಾನೇ ಒಂದೆರಡು ಐಟಮ್ ಮಾಡ್ತೀನಿ,

ನನ್ನ ಮನೆಯಲ್ಲೇ ಸೇರೋಣಾ ಎಂದ" ಒಳ್ಳೇದೇ ಆಯ್ತು. ನೀನೇ ನನ್ನ ಪಿಕ್‌ಅಪ್ ಮಾಡ್ತೀಯಾ?" ಬೆಂಗಳೂರಿನಲ್ಲಿ ನನ್ನ ಕಾರು ಡ್ರೈವಿಂಗ್ ಏನಿದ್ರೂ ನಾನಿದ್ದ ರಾಜಾಜಿ ನಗರದ ಸ್ವಲ್ಪ ಆಚೀಚೆ ಮಾತ್ರ.

ಇನ್ನೆಲ್ಲಿ ಹೋಗ್ಬೇಕಂದ್ರೂ, ನನ್ನ ಕಾರಿನಲ್ಲಿ ಮಾತ್ರ ಹೋಗ್ತಾ ಇರಲಿಲ್ಲ.

"ಸರಿ, ನಾನು ಆರುಗಂಟೆ ಹೊತ್ತಿಗೆ ಬರ್ತೀನಿ. ರೆಡಿಯಾಗಿರು" ಎಂದು ಹೇಳಿ ಫೋನ್ ಕೆಳಗಿಟ್ಟ.

ನಾನು ಫೋನ್ ನಲ್ಲಿ ಮಾತನಾಡ್ತಾ ಇದ್ದದ್ದನ್ನ ಶಾಲಿನಿ ಕೇಳಿಸ್ಕೊಂಡಿರಬೇಕು. ಧುತ್ತೆಂದು ನನ್ನೆದುರು ಅವತರಿಸಿ, "ಅಂದರೆ, ಈವತ್ತಿನ ನಮ್ಮ ಸಿನಿಮಾ ಪ್ರೋಗ್ರಾಮ್? " ಎಂದು ಸೊಂಟದ ಮೇಲೆ ಕೈಯಿಟ್ಟುಕೊಂಡು ಸವಾಲು ಹಾಕಿದಳು.

"ಶಾಲೂ, ಅಪರೂಪಕ್ಕೆ ನಾವು ಗೆಳೆಯರು ಸೇರ್ತಾ ಇದ್ದೀವಿ. ಪ್ಲೀಸ್, ನಾಳೆ ಹೇಗಿದ್ರೂ ರವಿವಾರ ಅಲ್ವಾ? ನಾಳೆ ನಮ್ಮ ಪಿಕ್ಚರ್ ಪ್ರೋಗ್ರಾಂ ಹಾಕ್ಕೊಳ್ಳೋಣ" ಎಂದೆ ಅನುನಯದಿಂದ.

"ನನಗ್ಗೊತ್ತು. ನೀವು ಮೂರೂ ಜನ ಸೇರೋದು, ಹರಟೆಗಿಂತ ತೀರ್ಥ ಸೇವನೆಗೇ ಅಂತ್ಲೇ" ಎಂದಳು. ಅವಳು ಹಾಗೆ ಹೇಳಿದ್ರೂ, ನಾವು ಸೇರುತ್ತಿದ್ದುದೇ ಅಪರೂಪವಾಗಿ ಮತ್ತು ನಾವು ಮೂವರ ಗೆಳೆತನ ಬಹಳ ಗಟ್ಟಿಯಾದದ್ದು ಎಂದು ಅವಳಿಗೆ ತಿಳಿದಿದ್ದುದರಿಂದ ಅವಳಿಂದ ಹೆಚ್ಚಿನ ಆಕ್ಷೇಪಣೆಯೇನೂ ಬರಲಿಲ್ಲ.

***

ಸಂಜೆ ಐದೂವರೆ ಗಂಟೆಗೇ ನಾನು ತಯಾರಾಗಿ ಕುಳಿತಿದ್ದರೂ, ರಾಘವ ಬರುವ ಹೊತ್ತಿಗೆ ಆರೂವರೆ ಗಂಟೆಯಾಗಿತ್ತು. ಮನೆಯೊಳಕ್ಕೆ ಬರಲು ಉಪಚಾರಕ್ಕೆ ಹೇಳಿದರೂ, ಆಗಲೇ ತಡವಾಗಿದ್ದುದರಿಂದ, ನಾನೇ ಹೊರಗೆ ಬಂದು ಅವನ ಕಾರಿನಲ್ಲಿ ಕುಳಿತೆ.

"ಮಲ್ಲೇಶ್ವರದಿಂದ ನಿಮ್ಮ ಮನೆಗೆ ಬರೋ ಹೊತ್ತಿಗೆ ಮುಕ್ಕಾಲು ಗಂಟೆಆಯ್ತು ಅಂದರೆ ನಂಬ್ತೀಯಾ? ಬೆಂಗಳೂರಿನಲ್ಲಿ ಟ್ರಾಫಿಕ್ ಕುಲಗೆಟ್ಟು ಹೋಗಿದೆ. ಲಂಡನ್

ನಲ್ಲಿ ನೋಡಬೇಕು. ಅಲ್ಲಿನ ಟ್ರಾಫಿಕ್ ಶಿಸ್ತು ನಮ್ಮಲ್ಲಿಯಾವಾಗ ಬರುತ್ತೋ ಏನೋ" ಎಂದ ರಾಘವ. ಅವನು ಹೇಳಿದುದರಲ್ಲಿ ಹೆಚ್ಚು ಉತ್ಪ್ರೇಕ್ಷೆ ಇರದಿದ್ದುದರಿಂದ ನಾನು ಸುಮ್ಮನೇ ತಲೆಯಾಡಿಸಿದೆ.



"ಕಾನ್ ಫರೆನ್ಸ್ ಹೇಗಾಯ್ತು?" ಎಂದೆ.

"ಫಸ್ಟ್‌ಕ್ಲಾಸ್. ನಿನಗೆ ಗೊತ್ತಲ್ಲ. ಕಂಪೆನಿಯವರ ಅತಿಥಿ ಎಂದ ಮೇಲೆ ನಮಗೆ ಆತಿಥ್ಯ ಹೇಗಿರುತ್ತೆಅಂತಾ? ನಮ್ಮ ಬೋರ್ಡಿಂಗ್, ಲಾಡ್ಜಿಂಗ್ ಮತ್ತೆ ಅಲ್ಲಿ ಇಲ್ಲಿ ಓಡಾಡ್ಲಿಕ್ಕೆ ಎಲ್ಲಕ್ಕೂ ಚೆನ್ನಾಗಿ ವ್ಯವಸ್ಥೆ ಮಾಡಿದ್ದರು. ಎಲ್ಲಾ ಕಾನ್‌ಫರೆನ್ಸ್‌ನಲ್ಲಿ ಆಗೋ ಹಂಗೆ, ಇಲ್ಲೂ ಕೂಡಾ ಮೊದಲನೇ ದಿವಸ ಮಾತ್ರ ಡೆಲಿಗೇಟ್ಸ್ ಬಹಳ ಗಂಭೀರವಾಗಿ ಭಾಗವಹಿಸಿದ್ದರು. ಎರಡನೇ ದಿವಸದಿಂದ ಹಾಲ್‌ಗಳೆಲ್ಲಾ ಖಾಲಿಖಾಲಿ. ಎಲ್ರೂ ಸೈಟ್ ಸೀಯಿಂಗ್ ಅಂತಾ ಎದ್ಬಿಡ್ತಾರೆ. ನಾನು ಮೊದಲನೇ ದಿವಸ ಲಂಚ್ ತನಕ ಕೂತ್ಕೊಂಡ್ ಕೇಳ್ದೆ. ಆ ಮೇಲೆ ಪೂರಾ ಸೈಟ್ ಸೀಯಿಂಗ್ ನಲ್ಲೇ ಸಮಯ ಕಳೆದ್ವಿ" ಅಂತಾಇನ್ನೂ ಏನೇನೋ ವಿವರಗಳನ್ನೆಲ್ಲಾ ಹೇಳತೊಡಗಿದ.

ಬಸವನಗುಡಿಯಲ್ಲಿನ ಶ್ರೀಧರನ ಮನೆ ತಲುಪುವ ಹೊತ್ತಿಗೆ ಎಂಟು ಗಂಟೆಯಾಗಿತ್ತು. ನಮಗಾಗಿ ಕಾಯ್ತಾ ಇದ್ದ ಅಂತಾ ಕಾಣಿಸ್ತು. ಅವನ ಮನೆ ಕರೆಗಂಟೆ ಒತ್ತುತ್ತಿದ್ದಂತೆ ಬಾಗಿಲು ತೆರೆದು ನಮ್ಮನ್ನು ಒಳಕ್ಕೆ ಬಿಟ್ಟುಕೊಂಡ. ಮುಂದಿನ ಕೋಣೆಯ ಒಂದು ಪಕ್ಕದಲ್ಲಿ ಶೂ ಶೆಲ್ಫ್ ಮೇಲೆ ಬೂಟುಗಳು, ಚಪ್ಪಲಿ ಎಲ್ಲಾ ಓರಣವಾಗಿ ಕುಳಿತಿದ್ದವು.


ನಮ್ಮ ಶೂಗಳನ್ನು ಅಲ್ಲಿಯೇ ಬಿಟ್ಟು, ಒಳಕ್ಕೆ ಹಜಾರದಲ್ಲಿದ್ದ ಸೋಫಾ ಸೆಟ್ ನಲ್ಲಿ ಕುಳಿತು ಹಜಾರದ ಮೂಲೆಮೂಲೆಗಳನ್ನೆಲ್ಲಾ ನೋಡಿದಾಗ ಎಲ್ಲೆಲ್ಲಿಯೂ ಅಚ್ಚುಕಟ್ಟು ಎದ್ದು ಕಾಣುತ್ತಿತ್ತು. ನಾವು ಕುಳಿತ ಸೋಫಾಕ್ಕೆ ಎದುರಾಗಿ ಶ್ರೀಧರ ಕೂಡುತ್ತಿದ್ದಂತೆ,

"ಶ್ರೀಧರ, ಮೊದಲಿನಿಂದಲೂ ನಿನಗೆ ಎಂದಾದರೂ ಮದುವೆಯಾಗಲು ಸಾಧ್ಯವೇ ಎಂದು ನಾನು ಯೋಚಿಸುತ್ತಿದ್ದೆ......" ಎಂದು ತಮಾಷೆಯಾಗಿ ಹೇಳುತ್ತಿದ್ದಂತೆ, ಶ್ರೀಧರ ಅದೇಕೋ ಬೆಚ್ಚಿಬಿದ್ದಂತೆ ನನ್ನತ್ತ ನೋಡಿದ.

"ಅಲ್ಲಪ್ಪಾ, ನಿನ್ನ ಈ ಅಚ್ಚುಕಟ್ಟಿನ ಹುಚ್ಚಿಗೆ ತಕ್ಕ ಕನ್ಯೆ ಎಲ್ಲಿಯಾದರೂ ದೊರೆಯುವಳೋ ಇಲ್ಲವೋ ಅಂತಾ ಯೋಚನೆ ಆಗಿತ್ತು..." ಎಂದೆ ನಗುತ್ತಾ.

"ಓ, ಅದಕ್ಕಾ, ಸದ್ಯ ಇನ್ನೇನೋ ಹೇಳ್ತಿದ್ದೀಯಾ ಅಂದುಕೊಂಡೆ..." ಎಂದು ಹೇಳಿ ಉಗುಳು ನುಂಗಿಕೊಂಡು,

"ಒಂದ್ನಿಮಿಷ, ಮೊದಲು ನೀರು ಕೊಡ್ತೇನೆ" ಎಂದು ನೀರುತರಲು ಒಳಹೋದ.



ಶ್ರೀಧರ 'ಸದ್ಯ' ಎಂದು ಹೇಳಿದ ರೀತಿ ಯಾಕೋ ವಿಚಿತ್ರವಾಗಿತ್ತು. ಅವನ ಯಾವುದೋ ಒಂದು ಗುಟ್ಟನ್ನು ಬಿಚ್ಚಿಡುತ್ತಿದ್ದೀನಿ ಎಂದು ಬೆಚ್ಚಿದಂತಿತ್ತು. ರಾಘವನೂ ಅದನ್ನು ಗಮನಿಸಿದಂತೆ ಕಂಡಿತು. ರಾಘವ ನನ್ನೆಡೆಗೆ ಪ್ರಶ್ನಾರ್ಥಕವಾಗಿ ನೋಡಿದ. ನಾನು ಸುಮ್ಮನೇ ನನಗೇನೂ ಗೊತ್ತಿಲ್ಲಎಂಬಂತೆ ಭುಜ ಹಾರಿಸಿದೆ.

ಅಡುಗೆ ಮನೆಯಿಂದ ಪುಲಾವ್‌ನ ಭರ್ಜರಿ ಕಂಪು ಸೂಸುತ್ತಿತ್ತು. ಶ್ರೀಧರನ ಪಾಕನೈಪುಣ್ಯ ನಮಗೆ ಹೊಸತೇನೂಅಲ್ಲ. ಹಾಸ್ಟೆಲ್ ನಲ್ಲಿಇದ್ದಾಗರವಿವಾರ ಬೆಳಿಗ್ಗೆ ವಿಶೇಷ ಊಟವಿದ್ದರೂ, ರಾತ್ರಿಊಟವಿರುತ್ತಿರಲಿಲ್ಲ. ಆ ಸಮಯದಲ್ಲಿಒಮ್ಮೊಮ್ಮೆ ಶ್ರೀಧರನ ಅಡುಗೆ ಸವಿಯುವ ಅವಕಾಶ ನಮಗೆ ದೊರೆಯುತ್ತಿತ್ತು. ರಾಘವತಾನು ಲಂಡನ್‌ನಿಂದತಂದಿದ್ದ ವೈನ್ ಬಾಟಲ್‌ನ್ನು ಹೊರತೆಗೆದು ಮೇಜಿನ ಮೇಲಿರಿಸುವುದಕ್ಕೂ, ಶ್ರೀಧರ ನೀರಿನಜೊತೆಗೆ, ತಟ್ಟೆಗಳಲ್ಲಿ ಚೀಸ್ ಪಕೋಡಾ, ಫಿಂಗರ್‌ಚಿಪ್ಸ್‌ತರುವುದಕ್ಕೂ ಸರಿಹೋಯಿತು. ಒಂದುಚೀಸ್ ಪಕೋಡಾಕೈಗೆತ್ತಿಕೊಂಡು ಸವಿದೆ.

"ವಾಹ್! ತುಂಬಾಚೆನ್ನಾಗಿದೆಯಯ್ಯಾ. ನಿನ್ನ ಶ್ರೀಮತಿಯವರು ಏಳೇಳು ಜನ್ಮದಲ್ಲಿ ಪುಣ್ಯ ಮಾಡಿರಬೇಕು. ಕೇವಲ ಕಾಫಿ ಮಾಡಲುಗೊತ್ತಿರುವಗಂಡು ಸಿಕ್ಕುವುದೇ ಅಪರೂಪವಾಗಿರುವಾಗ ನಿನ್ನಂಥಾ ಪಾಕ ಕಲಾವಿದ ಮತ್ತುಅಚ್ಚುಕಟ್ಟು ಪ್ರಿಯ ಪತಿದೊರೆಯುವ ಭಾಗ್ಯಯಾರಿಗಯ್ಯಾಇದೆ? ಯಾವಾಗ ಬರುತ್ತಾರೆ ನಿನ್ನ ಶ್ರೀಮತಿಯವರು? ಇನ್ನೂ ಎಷ್ಟು ದಿನವಪ್ಪಾ ಈ ಬಲವಂತ ಬ್ರಹ್ಮಚರ್ಯ?" ಎಂದೆ

ಪ್ರಾಮಾಣಿಕವಾಗಿ ನನ್ನಅಭಿಪ್ರಾಯ ತಿಳಿಸುತ್ತಾ. ಮತ್ತೊಮ್ಮೆ ಶ್ರೀಧರನ ಮುಖದಲ್ಲಿ ಯಾವುದೋ ನೋವು ಸುಳಿದಂತೆ ಕಂಡಿತು.

"ಹೂಂ, ಬರ್ತಾಳೆ. ಇಂಥಾ ದಿನ ಅಂತಾ ಹೇಳ್ಲಿಲ್ಲ..." ಎಂದು ರಾಘವನ ಕಡೆ ನೋಡಿ "ಓ, ವೈನ್ ತಂದೀದಿಯಾ, ಸ್ವಲ್ಪಇರು. ಗ್ಲಾಸ್‌ಗಳ್ನ ತರ್ತೇನೆ" ಎಂದು ಮತ್ತೆ ಒಳಕ್ಕೆ ಹೋದ.

"ಸಾರಿ, ಮನೇಲಿ ವೈನ್ ಗ್ಲಾಸ್‌ಗಳಿಲ್ಲ. ಇದ್ದುದುರಲ್ಲಿ ಈ ಗ್ಲಾಸ್ ಗಳಲ್ಲೇ ಕೆಲಸ ಜರುಗಿಸೋಣ" ಎಂದ, ಶ್ರೀಧರ ಗ್ಲಾಸ್‌ಗಳನ್ನು ಮೇಜಿನ ಮೇಲಿಡುತ್ತಾ. ರಾಘವ ವೈನ್ ಬಾಟಲಿಯನ್ನುತೆರೆದು ಮೂರುಗ್ಲಾಸ್ ಗಳಲ್ಲಿ ಹುಯಿದ. ಮೂವರೂ ಗ್ಲಾಸ್‌ಗಳನ್ನೆತ್ತಿ 'ನಮ್ಮ ಸ್ನೇಹಕ್ಕೆ' ಎಂದುಟೋಸ್ಟ್ ಮಾಡಿದೆವು.

ವೈನ್‌ಜೊತೆಚೀಸ್ ಪಕೋಡಾ ಮತ್ತು ಫಿಂಗರ್‌ಚಿಪ್ಸ್‌ಅದ್ಭುತವಾದ ಹೊಂದಾಣಿಕೆಯಾಗಿತ್ತು.

"ಈಗ ಹೇಳಪ್ಪಾ, ಹೇಗಿತ್ತು ನಿನ್ನ ಲಂಡನ್‌ಯಾತ್ರೆ?" ಎಂದು ಶ್ರೀಧರ ಕೇಳುವುದನ್ನೇ ಕಾಯುತ್ತಿದ್ದಂತೆ, ರಾಘವ ಮತ್ತೆತನ್ನಯಾತ್ರೆಯ ಸ್ವಾರಸ್ಯಗಳನ್ನು ಹೇಳಲಾರಂಭಿಸಿದ.

"ಲಂಡನ್ ಸೈಟ್ ಸೀಯಿಂಗ್‌ನಲ್ಲಿ ಒಂದು ಬಹಳ ಅನುಕೂಲಕರ ಸಂಗತಿ ಏನು ಗೊತ್ತಾ? ಕೇವಲ ಯಾತ್ರಿಕರ ಅನುಕೂಲಕ್ಕಾಗಿ ನಿರ್ಮಿಸಿದ್ದಾರೆ ಎಂಬಂತೆ, ಲಂಡನ್‌ನ ಬಹಳ ಪ್ರೇಕ್ಷಣೀಯ ಸ್ಥಳಗಳಾದ ಪಾರ್ಲಿಮೆಂಟ್ ಹೌಸ್, ಬಿಗ್ ಬೆನ್, ಟ್ರಫಲ್ಗಾರ್ ಸ್ಕೈರ್, ಲಂಡನ್ ಐ ಮತ್ತು ಬಕಿಂಗ್ ಹ್ಯಾಮ್ ಪ್ಯಾಲೇಸ್‌ಎಲ್ಲವೂ ಹತ್ತಿರ ಹತ್ತಿರದಲ್ಲಿಯೇ ಇವೆ. ಒಂದು ಸೈಕಲ್ ಸವಾರಿ ಮಾಡಿಕೊಂಡೇಇವೆಲ್ಲವನ್ನೂ ನೋಡಿಕೊಂಡುಬರಬಹುದು. ಐತಿಹಾಸಿಕವಾಗಿ ಲಂಡನ್ ನ ಆಕರ್ಷಣೆಯೆಂದರೆ,

ಬ್ರಿಟಿಷರುತಮ್ಮ ಕಳೆದ ಹಲವಾರು ಶತಮಾನಗಳ ಚರಿತ್ರೆಯನ್ನುಕರಾರುವಾಕ್ಕಾಗಿ ಬರೆದಿಟ್ಟಿರುವುದರಿಂದ, ಪ್ರತಿಯೊಂದು ಐತಿಹಾಸಿಕ ಘಟನೆಯನ್ನು ಬೆಟ್ಟು ಮಾಡಿ ಇದು ಇಲ್ಲಿಯೇ ಜರುಗಿತು ಎಂದು ಖಚಿತವಾಗಿ ಹೇಳಬಹುದು. ಬ್ರಿಟಿಷ ಅರಸರ ಹುಟ್ಟು ಸಾವಿನ ಸ್ಥಳಗಳು, ಬ್ರಿಟಿಷ್ ಚರಿತ್ರೆಯಲ್ಲಿಜರುಗಿದ ಕಾರಾಸ್ಥಾನಗಳು ಎಲ್ಲವನ್ನೂ ಗುರುತಿಸಿದ್ದಾರೆ. ಶೇಕ್ಸ್ ಪಿಯರ್ ವಾಸಿಸಿದ್ದ ಮನೆಯನ್ನು ಅವರು ಸಂರಕ್ಷಿಸಿರುವ ಪರಿಯನ್ನು ಬಣ್ಣಿಸುವುದು ಕಷ್ಟ. ಅವನ ಮನೆಯಲ್ಲಿನ ಮಂಚ ಹಾಸಿಗೆಗಳು, ಅಡುಗೆ ಮನೆಯಲ್ಲಿನ ಉಪಕರಣಗಳು, ಅವನ ತಂದೆ ತಯಾರಿಸುತ್ತಿದ್ದ ಚರ್ಮದ ಗವುಸುಗಳು ಇವೆಲ್ಲವನ್ನೂ ಅತ್ಯಂತ ಸುಸ್ಥಿತಿಯಲ್ಲಿ ನೋಡುವಾಗ, ಶೇಕ್ಸ್ ಪಿಯರ್ ತನ್ನ ಕುಟುಂಬದೊಡನೆ ಇಲ್ಲಿ ಈಗಲೂ ವಾಸಿಸುತ್ತಿದ್ದಾನೇನೋ, ಸದ್ಯಕ್ಕೆ ಕುಟುಂಬವೆಲ್ಲಾ ಎಲ್ಲಿಯೋ ಹೊರಕ್ಕೆ ಹೋಗಿದೆಯೇನೋ ಎಂಬ ಭ್ರಮೆ ಮೂಡುತ್ತದೆ" ಎನ್ನುವಷ್ಟರಲ್ಲಿ ಗ್ಲಾಸ್‌ಗಳು ಖಾಲಿಯಾಗಿರುವುದನ್ನು ಗಮನಿಸಿ, ಎರಡನೇ ರೌಂಡ್ ಆರಂಭಿಸಿದೆವು. ರಾಘವ ಮತ್ತೆ ಮುಂದುವರೆದ.

"ಇನ್ನೊಂದು ವಿಷಯ ಗೊತ್ತಾ? ನಾನಲ್ಲಿರುವಾಗಲೇ ಲಂಡನ್‌ನ ಕನ್ನಡಿಗರ ಒಂದು ಕೂಟ ಏರ್ಪಾಡಾಗಿತ್ತು. ಕೇಶವ ಅಲ್ಲಿಯೇ ಇದ್ದಾನಲ್ಲ. ಅವನು ನನಗೆ ಮೊದಲೇ ತಿಳಿಸಿದ್ದ. ಹಾಗಾಗಿ ನಾನೂ ಅವನ ಅತಿಥಿಯಾಗಿ ಹೋಗಿದ್ದೆ. ಅಲ್ಲಿ ನಮ್ಮ ಒಂದೆರಡು ಸೀನಿಯರ್ ಗಳು ಕಂಡರು. ಮತ್ತೆ ಇನ್ಯಾರು ಕಂಡಿರಬಹುದು,

ಶ್ರೀಧರ, ನೀನು ಗೆಸ್ ಮಾಡು ನೋಡೋಣ..." ಎಂದು ಶ್ರೀಧರ ನತ್ತ ನೋಡಿದ. ನಿರೀಕ್ಷಿಸಿದಂತೆಯೇ, ಶ್ರೀಧರಗೆ ಏನೂ ಹೊಳೆಯಲಿಲ್ಲ.

"ನಮ್ಮಕ್ಲಾಸ್ ಮೇಟ್‌ಚಂದ್ರೂಜ್ಞಾಪಕವಿರಬೇಕಲ್ಲ. ಒಂದು ಸಲ ಅವನು ಮತ್ತು ಶ್ರೀಧರ ಕಾಲೇಜ್ ಡಿಬೇಟ್‌ನಲ್ಲಿ ಭಾಗವಹಿಸಿದ್ದರು. ಅದಕ್ಕಾಗಿಯೇ ಶ್ರೀಧರನನ್ನು ಕೇಳಿದ್ದು. ಈಗ ಚಂದ್ರೂ ಅಲ್ಲಿಯೇ ಇದ್ದಾನೆ. ಇನ್ನೂಒಂದು ವಿಶೇಷವೆಂದರೆ...." ಅಲ್ಲಿಗೇ ನಿಲ್ಲಿಸಿ,

"ಶ್ರೀಧರ, ನಿನಗೆ ಆ ಡಿಬೇಟ್‌ನ ವಿಷಯ ಜ್ಞಾಪಕವಿದೆಯಾ?" ಎಂದು ಕೇಳಿದ.

"ಹೂಂ. ಜ್ಞಾಪಕವಿದೆ. 'ವೈದ್ಯರಮಧ್ಯೆ ವೈವಾಹಿಕ ಸಂಬಂಧ, ಅಪೇಕ್ಷಣೀಯವೇ ಅಲ್ಲವೇ' ಎಂದು" ಎಂದ ಶ್ರೀಧರ ನೆನಪಿಸಿಕೊಳ್ಳುತ್ತಾ.

"ಹಾಂ. ಅಪೇಕ್ಷಣೀಯ ಎಂದು ಅವನು ವಾದಿಸಿದ್ದ, ಅಪೇಕ್ಷಣೀಯವಲ್ಲ ಎಂದು ನೀನು ವಾದಿಸಿದ್ದೆ. ಅದರಲ್ಲಿ ಅವನಿಗೇ ಬಹುಮಾನ ದೊರೆಯಿತಲ್ಲವೇ?"

"ಹೌದು...." ಎಂದ ಶ್ರೀಧರ ಯಾವುದೋ ಒಲ್ಲದ ವಿಷಯವನ್ನು ನೆನೆಪಿಸಿಕೊಳ್ಳುವಂತೆ.


"ಇಬ್ಬರೂ ವೈದ್ಯರಾದರೆ, ಅವರಿಬ್ಬರೂ ತಮ್ಮ ವೃತ್ತಿಯಲ್ಲಿ ವ್ಯಸ್ತರಾಗಿ ಪರಸ್ಪರರಿಗಾಗಿ ಸಮಯ ದೊರೆಯದೇ, ವಿವಾಹ ಯಶಸ್ವಿಯಾಗುವುದಿಲ್ಲ ಎಂದು ನಿನ್ನ ವಾದವಾದರೆ, ಇಬ್ಬರೂ ಒಂದೇ ವೃತ್ತಿಯಲ್ಲಿರುವುದರಿಂದ ಒಬ್ಬರಿನ್ನೊಬ್ಬರನ್ನು ಚೆನ್ನಾಗಿ ಅರಿತುಕೊಂಡು ಜೀವನ ಸುಗಮವಾಗಿರುತ್ತದೆ ಎಂದು ಅವನು ವಾದಿಸಿದ್ದ, ಅಲ್ಲವೇ. ಅದರಂತೆಯೇ ಮುಂದೆ ನೀನು ವೈದ್ಯರಲ್ಲದ ನಿನ್ನ ಶ್ರೀಮತಿಯವರನ್ನು ಮತ್ತು ಅವನು ನಮ್ಮ ಕ್ಲಾಸ್‌ಮೇಟ್ ಮಾಧುರಿಯನ್ನೂ ಮದುವೆಯಾದಿರಿ.

ಮುಂದಿನ ಕತೆ ನಿನಗೆ ಗೊತ್ತೇ?" ಎಂದ ಒಂದು ರೀತಿ ಸವಾಲು ಹಾಕುವ ದನಿಯಲ್ಲಿ.

"ನನ್ನಕತೆಯಂತೂ ನನಗೆ ಗೊತ್ತು... ಚಂದ್ರೂನ ಕತೆ ನನಗೆ ಗೊತ್ತಿಲ್ಲ..." ಎಂದ ಶ್ರೀಧರನ ಮುಖದ ಮೇಲೆ ಮತ್ತೊಮ್ಮೆ ಸಂಕೋಚವೋ ವ್ಯಥೆಯೋ ಸುಳಿದಿತ್ತು.

"ಅದನ್ನೇ ನಿನಗೆ ನಾನು ಹೇಳಬೇಕು. ಆ ಕೂಟದಲ್ಲಿ ಚಂದ್ರೂ ಕಂಡಿದ್ದ.

ಮೊದಲ ುಅವನನ್ನು ಗುರುತಿಸುವುದು ಕಷ್ಟವಾಯಿತು. ಬಹಳಷ್ಟು ಬದಲಾಗಿದ್ದಾನೆ. ಅವನೇ ನನ್ನನ್ನು ಗುರುತಿಸಿದ. ಹಾಗೇ ಮಾತನಾಡುವಾಗ, 'ಮಾಧುರಿಎಲ್ಲಿ?' ಎಂದು ಕೇಳಿದೆ. ಯಾಕೋ ಅವನ ಮುಖ ಹುಳ್ಳಗಾಯಿತು. ಅಷ್ಟರಲ್ಲಿ ಬೇರಾರೋ ಅವನನ್ನು ಮಾತನಾಡಿಸಿದ್ದನ್ನೇ ನೆವಮಾಡಿಕೊಂಡು ಅಲ್ಲಿಂದ ಜಾರಿಕೊಂಡ. ಇದನ್ನೆಲ್ಲಾ ಗಮನಿಸುತ್ತಿದ್ದ ಕೇಶವ ನನ್ನ ತೋಳು ಹಿಡಿದು ಸ್ವಲ್ಪದೂರ ಕರೆದೊಯ್ದು, ಚಂದ್ರೂ ಡೈವೋರ್ಸ್ ಆಯಿತೆಂದೂ, ಹೆಂಗಸರ ಗುಂಪಿನಲ್ಲಿದ್ದ ಒಬ್ಬ ಜಮೈಕನ್ ಮಹಿಳೆಯನ್ನು ತೋರಿಸಿ, ಡೈವೋರ್ಸ್ ನಂತರ ಅವಳನ್ನು ಮದುವೆಯಾಗಿದ್ದಾನೆಂದೂ ಪಿಸುಮಾತಿನಲ್ಲಿ ತಿಳಿಸಿದ. ಸೋ, ಡಿಬೇಟ್‌ನಲ್ಲಿ ಅವನು ಗೆದ್ದ. ನಿಜ ಜೀವನದಲ್ಲಿ ನೀನು ಗೆದ್ದೆ" ಎಂದ ರಾಘವ. ಬಲವಂತದ ನಗುವನ್ನು ಮುಖದ ಮೇಲೆ ತಂದುಕೊಂಡು,



"ಹೌದಾ, ಹಾಗಾಯಿತಾ?" ಎಂದ ಶ್ರೀಧರ. ಇದುವರೆಗೂ ಸುಮ್ಮನಿದ್ದ ನನಗೆ ನನ್ನ ಅಭಿಪ್ರಾಯವನ್ನೂ ತಿಳಿಸಬೇಕೆನಿಸಿತು.

"ಯಾವುದೋ ಒಂದೇ ಒಂದು ಅಂಶದ ಮೇಲೆ ನಮ್ಮ ವೈವಾಹಿಕ ಜೀವನದ ಯಶಸ್ಸು ನಿಂತಿದೆ ಎಂದು ಭಾವಿಸುವುದೇ ನಾವು ಮಾಡುವ ಬಹಳ ದೊಡ್ಡ ತಪ್ಪು. ಈಗ ನನ್ನ ಮತ್ತು ರಾಘವನ ಕತೆ ನೋಡೋಣ. ರಾಘವನ ಮಿಸೆಸ್ ವೈದ್ಯರೇ. ಅವರಿಬ್ಬರೂ ಎಷ್ಟು ಅನ್ಯೋನ್ಯವಾಗಿದ್ದಾರೆಂದು ನಮಗೆಲ್ಲರಿಗೂ ಗೊತ್ತು. ಅಂತೆಯೇ ನನ್ನ ಮಿಸೆಸ್ ಶಾಲಿನಿ ವೈದ್ಯಳಲ್ಲ. ಆದರೆ ನಮ್ಮ ಹೊಂದಾಣಿಕೆ ಎಷ್ಟು ಬಲವಾಗಿದೆಯೆಂದರೆ, ನಿಮಗೇ ಗೊತ್ತಿರುವಂತೆ ನಾನೊಬ್ಬ ಪಕ್ಕಾ ನಾಸ್ತಿಕ. ಶಾಲಿನಿ ಬಹಳ ಆಚಾರವಂತ ಮನೆಯಿಂದ ಬಂದವಳು. ಶುರುವಿನಲ್ಲಿ ನಮಗಿಬ್ಬರಿಗೆ ಸ್ವಲ್ಪ ತಿಕ್ಕಾಟವಾಗಿದ್ದುದು ನಿಜ. ಆದರೆ, ಈಗ ನಾವಿಬ್ಬರೂ ಎಷ್ಟು ಹೊಂದಿಕೊಂಡಿದ್ದೇವೆ ಗೊತ್ತಾ? ಹಾಗಂತ, ಅವಳು

ನಾಸ್ತಿಕಳಾಗಿ ಬದಲಾಗಿಲ್ಲ ಅಥವಾ ನಾನು ಆಸ್ತಿಕನಾಗಿಲ್ಲ. ಅಗ್ರೀಟು ಡಿಸಗ್ರೀ ಅಂತಾರಲ್ಲ, ಅಂತಹ ಒಂದು ಒಪ್ಪಂದ ನಮ್ಮದು" ಎಂದೆ ಸ್ವಲ್ಪ ಜಂಭದಿಂದಲೇ. ನಾನು ರಾಘವನ ಬಗ್ಗೆ ಹೇಳುವಾಗ ಅದೇಕೋ ಅವನಿಗೆ ಅದು ಒಪ್ಪಿಗೆಯಾದಂತೆನಿಸಲಿಲ್ಲ. ವೈನ್‌ನ ಮೂರನೇ ರೌಂಡ್‌ನ ಪ್ರಭಾವ ಆರಂಭವಾಗಿತ್ತೆಂದು ಕಾಣುತ್ತದೆ.

"ಅಲ್ಲಪ್ಪಾ, ರಮೇಶಾ, ನನ್ನ ವೈವಾಹಿಕ ಜೀವನದ ಬಗ್ಗೆ ಅಷ್ಟೊಂದು ಖಚಿತವಾಗಿ ಹೇಳಿದೆಯಲ್ಲ. ನಮ್ಮ ವೈವಾಹಿಕ ಸಂಬಂಧದ ಬಗ್ಗೆ ನೀನು ಹೇಗಯ್ಯಾ ಹೇಳಲು ಸಾಧ್ಯ? ಹೇಳಿದರೆ ನಾನು ಹೇಳಬೇಕು ಅಷ್ಟೇ. ಅಲ್ವಾ? ನೀವಂದುಕೊಂಡ ಹಾಗೆ ನಾವೇನೂ ಅಂತಹ ಅನ್ಯೋನ್ಯವಾಗಿಲ್ಲ. ಮದುವೆಯಾಗಿ ಒಂದು ಮೂರು ನಾಲ್ಕು ವರ್ಷ ಚೆನ್ನಾಗಿ ಕಳೆದಿರಬಹುದಷ್ಟೇ. ಆಮೇಲೆ ಶುರುವಾಯ್ತು ನೋಡು ಜಟಾಪಟಿ......"

"ಯಾವುದಕ್ಕೆ ಜಟಾಪಟಿ?" ಎಂದು ನನ್ನ ಪ್ರಶ್ನೆ. ಯಾವ ಸಮಾರಂಭದಲ್ಲಿ ಅವರಿಬ್ಬರನ್ನು ಕಂಡಾಗಲೂ ಅವರ ಅನ್ಯೋನ್ಯತೆ ಬಗ್ಗೆ ನಾವು ಯಾವಾಗಲೂ ಅಸೂಯೆಪಟ್ಟುಕೊಳ್ಳುವುದೇ ಆಗಿತ್ತು. ಈಗ ಅವನು ಹೇಳುವುದನ್ನು ಕೇಳಿದಾಗ, 'ಪರವಾಗಿಲ್ಲ, ಎಲ್ಲರ ಮನೆಯ ದೋಸೆಯೂ ತೂತೇ' ಎಂಬ ವಿಚಿತ್ರ ಸಮಾಧಾನ ತಲೆ ದೋರಿತ್ತು.

"ಅವಳು ಮೊದಲಿನಿಂದಲೂ ಆದರ್ಶವಾದಿ. ನಮ್ಮ ವೃತ್ತಿ ಇರೋದೇ ಸೇವೆಗೆ ಅಂತಾ. ಫೀಸ್ ವಿಷಯದಲ್ಲಿ ಅವಳು ಬಹಳ ಉದಾರಿ. ಫಾರ್ಮಾ ಕಂಪೆನಿಗಳು ಕೊಡೋ ಸ್ಯಾಂಪಲ್‌ಗಳನ್ನ, ಗಿಫ್ಟ್ ಗಳನ್ನ ಅವಳು ಮುಟ್ಟೋದೇ ಇಲ್ಲ. ನನಗೇನೋ ಇದರಲ್ಲೆಲ್ಲಾ ಏನಂಥಾ ತಪ್ಪುಕಾಣೋದಿಲ್ಲಾ. ಫಾರ್ಮಾ ಕಂಪೆನಿಗಳು ನಮ್ಮ ಮೇಲಿನ ಪ್ರೀತಿಗೇ ಅಂತಾ ಏನೂ ಹಾಗೆ ಮಾಡೋಲ್ಲಾ. ಹಾಗೆ ಮಾಡೋದ್ರಿಂದ ಅವರಿಗೆ ಲಾಭ ಇದೇಂತ್ಲೇ ಅವರು ಹಾಗೆ ಮಾಡೋದು. ನನ್ನ ಮೊನ್ನೆಯ ಲಂಡನ್ ಟ್ರಿಪ್ ಕೂಡಾ ಫಾರ್ಮಾ ಕಂಪೆನಿಯಿಂದಾಗಿಯೇ. ಇದುವರೆಗೂ ನಮ್ಮಿಬ್ಬರಲ್ಲಿ ಹೇಳಿಕೊಳ್ಳೋ ಅಂಥಾ ಹೊಂದಾಣಿಕೆ ಏನೂ ಆಗಿಲ್ಲ. ಆದರೆ, ಹೊರಗಡೆ ಮಾತ್ರ ನಾವು ಎಂದೂ ನಮ್ಮ ವಿರಸ ತೋರಿಸಿಕೊಳ್ಳೋದಿಲ್ಲ. ಅದೊಂದು ವಿಷಯದಲ್ಲಿ ದೇವರ ದಯೆಯಿಂದ ನಮ್ಮಲ್ಲಿ ಒಮ್ಮತವಿದೆ."

"ಸುಖ ಸಂಸಾರಕ್ಕೆ ಒಂದು ಸೂತ್ರ ಇದೆ ಅಂತಾ ನಾವು ಭಾವಿಸೋದೇ ತಪ್ಪು. ಒಂದಲ್ಲ. ನೂರು ಸೂತ್ರಗಳ ಒಂದು ಸಂಹಿತೆಯೇ ಇದೆ ಅಂತಾ ಭಾವಿಸೋದು ಕೂಡಾ ಮೂರ್ಖತನ" ಎಂದು ಬಲವಾಗಿ ಹೇಳಿದೆ. ವೈನ್‌ನ ಮೂರನೇ ಸುತ್ತಾದರೂ ನಾನು ಮತ್ತುರಾಘವ ಸ್ಥಿಮಿತದಲ್ಲಿಯೇ ಇದ್ದೆವು. ಆದರೆ, ಒಂದನೇರೌಂಡ್‌ಗೇತನ್ನ




ಮೇಲೆ ಹಿಡಿತ ಕಳೆದುಕೊಳ್ಳುತ್ತಿದ್ದ ಶ್ರೀಧರ, ಮೂರನೇ ಸುತ್ತು ಮುಗಿಯುತ್ತಿದ್ದಂತೆಯೇ ತೂರಾಡಲಾರಂಭಿಸಿದ್ದ. ಮುಖ ವಿಕಾರವಾಗಿತ್ತು. ಇದ್ದಕ್ಕಿದ್ದಂತೆಯೇ, ಗ್ಲಾಸ್ ಕೆಳಗಿಟ್ಟು, ಮುಖ ಮುಚ್ಚಿಕೊಂಡು ಗಟ್ಟಿಯಾಗಿ ಅಳಲಾರಂಭಿಸಿದ. ಅವನ ಈ ವರ್ತನೆ ನಮಗೆ ಅನೀರೀಕ್ಷಿತವಾಗಿತ್ತು. ನಾವಿಬ್ಬರೂ ಅವನ ಪಕ್ಕ ಹೋಗಿ, ಅವನ ಭುಜ ಹಿಡಿದು ಅಲಗಿಸುತ್ತಾ,

"ಏಯ್ ಶ್ರೀಧರ, ಏನಾಯ್ತೋ, ಅಳೋಂಥಾದ್ದು ಏನಾಯ್ತೋ.." ಎಂದೆವು ಆತಂಕದಿಂದ. ಮಧ್ಯೆ ಮಧ್ಯೆ ಬಿಕ್ಕಳಿಸುತ್ತಾ ಶ್ರೀಧರ ಹೇಳಿದ,

"ನೀವೆಲ್ಲಾ ಅಂದುಕೊಂಡ ಹಾಗೆ ಚಂದ್ರೂನ ಅವಸ್ಥೆಗಿಂತ ನನ್ನದೇನೂ ಮಿಗಿಲಾಗಿಲ್ಲ. ಹಾಗೆ ನೋಡಿದರೆ ನನ್ನ ಸ್ಥಿತಿ ಅವನಿಗಿಂತಲೂ ಹೀನಾಯ. ಆ ಮಬ್ಬು ರೆಡ್ಡಿ ಇದೇ ಏರಿಯಾದಲ್ಲಿಯೇ ಜನರಲ್ ಪ್ರಾಕ್ಟೀಸ್ ಮಾಡ್ತಾ ಇದ್ದ. ನನಗಿಂತ಼್ೂ ಅವನು ಪ್ರಾಕ್ಟೀಸ್‌ನಲ್ಲಿ ಬ್ಯುಸಿಯಾಗಿದ್ದ. ಅದ್ಯಾವಾಗ, ಹೇಗೆ ಅವನಿಗೆ ಮತ್ತು ನನ್ನ ನಳಿನಿಗೆ ಪರಿಚಯವಾಯ್ತೋ. ಎರಡು ವಾರದ ಕೆಳಗೆ ನಳಿನಿನನ್ನನ್ನು ಬಿಟ್ಟು ಅವನ ಹಿಂದೆ ಹೋಗಿಬಿಟ್ಳು. 'ನಿಮ್ಮ ಅಚ್ಚುಕಟ್ಟು ಜೀವನದಲ್ಲಿ ನೀವು ನಾಜೂಕಾಗಿಯೇ ಇರಿ. ಬೆಡ್‌ರೂಮಿನಲ್ಲಿಯೂ ನಾನು ನಾಜೂಕು ಬಯಸುವುದಿಲ್ಲ' ಎಂದು ನನ್ನ ಮುಖದ ಮೇಲೆ ಹೊಡೆದಂತೆ ಹೇಳಿ ಹೊರಟೇ ಹೋದ್ಲು" ಎಂದು ಅವನು ಬಿಕ್ಕುತ್ತಿರುವಾಗ ಅವನನ್ನು ಸಮಾಧಾನ ಪಡಿಸುವ ದಾರಿ ಕಾಣದೆ ನಾವು ಕಂಗಾಲಾದೆವು.

# ರಾಜ್ಯ ಐ ಎಂ ಎ ಕನ್ನಡ ವೈದ್ಯ ಬರಹಗಾರರ ಸಮಿತಿ ಮತ್ತು ಕ್ಷೇಮ ಟ್ರಸ್ಟ್ (ರಿ) ಶಿವಮೊಗ್ಗ ಅವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಮಿನಿ ಕಥೆ ಸ್ಪರ್ಧೆಯಲ್ಲಿ ವಿಜೇತರಾದ ಕಥೆಗಳನ್ನು ಪ್ರಕಟಿಸಲಾಗಿದೆ.

## ಮಿನಿ ಕಥೆ ಸ್ಪರ್ಧೆ



ಈ ಕಥಾ ಸ್ಪರ್ಧೆಗೆ ಪ್ರಾಯೋಜಕರು **ಡಾ ಶ್ರೀಧರ ಕೆ ಎಸ್,** ಹಿರಿಯ ಮನೋ ರೋಗ ತಜ್ಞರು, ಅಧ್ಯಕ್ಷರು, ಕ್ಷೇಮ ಟ್ರಸ್ಟ್ (ರಿ) ಶಿವಮೊಗ್ಗ

### ತೀರ್ಪುಗಾರರ ನುಡಿಗಳು

ಬರೆದುದ್ದೆಲ್ಲಾ ಕಥೆಯಾಗಲಾರದು, ಒಂದು ಒಳ್ಳೆಯ ಕಥೆಗೆ ಸಮೃದ್ಧ ಜೀವನಾನುಭವ, ವ್ಯಾಪಕ ಓದಿನ ಹಿನ್ನಲೆ ಹಾಗೂ ತಾಲೀಮು ಅಗತ್ಯ. ಅಂತಿಮ ಸುತ್ತಿನಲ್ಲಿ ಇಪ್ಪತ್ತೊಂದು ಕಥೆಗಳಿದ್ದವು. ಪೂರ್ವಾಗ್ರಹವಿಲ್ಲದೆ ಮುಕ್ತವಾಗಿ ಆಯ್ಕೆ ಮಾಡಲು ಸಮಿತಿಯವರು ಕಥೆಗಾರರ ಹೆಸರನ್ನು ಬೇರ್ಪಡಿಸಿ ಕೇವಲ ಕಥೆಗಳನ್ನು ಕಳುಹಿಸಿದ್ದರು. ತೀರ್ಪುಗಾರರಾದ ನಾವು ಮೊದಲು ಸಾಮಾನ್ಯ ಓದುಗರಾಗಿ ನಂತರ ನಿರ್ಭಾವುಕತೆಯಿಂದ ಆಯ್ಕೆಯ ಪ್ರಕ್ರಿಯೆ ನಡೆಸಿದೆವು. ಸ್ಪರ್ಧೆಗಾಗಿ ಬಂದ ಕಥೆಗಳಲ್ಲಿ ಅರ್ಧದಷ್ಟು ಕೊರೋನವೇ ಕಥಾ ವಸ್ತು. ವರ್ತಮಾನಕ್ಕೆ ಕನ್ನಡಿ ಹಿಡಿಯುವ, ಪ್ರಗತಿಪರ ಚಿಂತನೆ, ಹಾಸ್ಯ ಪ್ರಜ್ಞೆ, ಜೀವನ ಸಂದೇಶ ಒಳಗೊಂಡ ಹಲವಾರು ಕಥೆಗಳು ಇದ್ದಿದ್ದು ವಿಶೇಷ.

ಮೊದಲ ಬಹುಮಾನ ಪಡೆದ "ಭಿನ್ನ ವಿಭಿನ್ನರು" ಮನುಷ್ಯನ ಅಂತಃಕರಣವನ್ನು ಪೊರೆಯುವ ಮಾನವ ನಡವಳಿಕೆಯ ವಿಭಿನ್ನ ನೆಲೆಯಲ್ಲಿ ಸೊಗಸಾದ ನಿರೂಪಣಾ ಶೈಲಿಯಿಂದಾಗಿ ಓದಿಸಿಕೊಂಡು ಹೋಗುತ್ತದೆ.

ಎರಡನೆಯ ಬಹುಮಾನ "ಕಲೆಗಳು" ಒಂದು ರೂಪಕದ ಸುತ್ತ ಹೆಣೆದ ವಿಶೇಷ ವಿನ್ಯಾಸದ ಕಥೆ. ಕೊನೆಯವರೆಗೂ ಕುತೂಹಲ ಉಳಿಸಿಕೊಂಡು ಮನಸ್ಸಿಗೆ ಮುದ ನೀಡುತ್ತದೆ. ಮೂರನೇಯ ಬಹುಮಾನ ಪಡೆದ "ರೂಪಾಂತರಿ" ಮಾನವೀಯ ಅಂತಃಕರಣದ ಸಂವೇದನೆ ಢಾಳಾಗಿ ಕಾಣುವ ಕಥೆ, ಓದುಗರ ಮನ ತಟ್ಟುತ್ತದೆ.



**ಡಾ ಆರ್ ಕೆ ಸರೋಜ**
ರೆಡಿಯೋಲಾಜಿ ಪ್ರಾಧ್ಯಾಪಕರು ಮತ್ತು ನ್ಯೂಕ್ಲಿಯರ್ ಮೆಡಿಸನ್ ತಜ್ಞೆ, ಬೆಂಗಳೂರು

ನನ್ನೆದುರು ಇಪ್ಪತ್ತೊಂದು ಕತೆಗಳಿದ್ದವು. ಓದಿದ ಮೇಲೆ ಕಸುಬುಗಾರಿಕೆ ಬಲ್ಲ ಕತೆಗಾರರು ಹತ್ತು ಜನರೆನ್ನಿಸಿತು. ಅವರಲ್ಲಿ ಅಕ್ಕಿ ಕಾಳಿನಲ್ಲಿ ಚಿತ್ರ ಬಿಡಿಸಬಲ್ಲ ಸೂಕ್ಷ್ಮತೆ, ಹರಿವಾಣದೊಳಗೆ

ನರ್ತಿಸಬಲ್ಲ ಚಾಕಚಕ್ಯತೆ ಇದೆ ಎನ್ನಿಸಿತು. ಉಳಿದವರ ಬರಹಗಳಲ್ಲಿ ಕತೆಗಾರಿಕೆಯ ನವಿರುತನವಿಲ್ಲದಿದ್ದರೂ ಬರಹಗಾರರಾಗುವ ಲಕ್ಷಣ ವಿದೆ ಎನ್ನಿಸಿತು. ಅವರಲ್ಲಿ ನನ್ನ ನಮ್ರ ವಿನಂತಿಯೆಂದರೆ ನೀವು ಸಾಹಿತ್ಯದ ಬೇರೆ ಪ್ರಕಾರಗಳನ್ನು ಆರಿಸಿಕೊಂಡು ಬರೆಯಲು ಪ್ರಯತ್ನಿಸಿ. ಹಾಸ್ಯ, ಹರಟೆ, ಚರ್ಚೆ, ವಿಮರ್ಶೆ, ಪ್ರವಾಸ ಕಥನ ಇತ್ಯಾದಿಗಳಲ್ಲಿ ತೊಡಗಿಸಿಕೊಳ್ಳಬಹುದು. ಅವೆಲ್ಲವೂ ಸಾಹಿತ್ಯ ದೇವಿಯ ಅಲಂಕರಣಗಳೇ. ಒಳ್ಳೆಯ ಬರಹಗಾರ ಒಳ್ಳೆಯ ಓದುಗನೂ ಆಗಿರುತ್ತಾನೆ. ಓದುವ ಮತ್ತು ಬರೆಯುವ ಅಭ್ಯಾಸ ವನ್ನು ನಿರಂತರವಾಗಿಸಿಕೊಳ್ಳಿ. ಅವು ನಿಮ್ಮನ್ನು ಪರಿಷ್ಕರಿಸುತ್ತಾ ಹೋಗುತ್ತವೆ. ಕೆಲವರಿಗೆ ಪ್ರತಿ ದಿನ ಏನನ್ನು ಬರೆಯುವುದು ಎಂದ ಅನಿಸಬಹುದು. ದಿನಚರಿಯ ಸಾಮಾನ್ಯ ಸಂಗತಿ ಗಳನ್ನೇ ರಸವತ್ತಾಗಿ ಬರೆಯುವ ಅಭ್ಯಾಸ ಮಾಡಿಯೇ ಎಷ್ಟೋ ಜನರು ಬರೆಹಗಾರರಾಗಿದ್ದಾರೆ.

ನೀವೆಲ್ಲ ಉತ್ತಮ ಕತೆಗಾರರೂ

ಕತೆಯೇತರ ಬರಹಗಾರರೂ ಆಗುತ್ತೀರಿ ಎಂಬ ಭರವಸೆಯೊಂದಿಗೆ ನಿಮಗೆಲ್ಲರಿಗೂ ಶುಭ ಹಾರೈಸುತ್ತೇನೆ. ಹಾಗೆಯೇಭಾರತೀಯ ವೈದ್ಯಕೀಯ ಸಂಘದ ಸಮಸ್ತ ಪದಾಧಿಕಾರಿಗಳಿಗೆ ನನ್ನನ್ನು ಕತೆಗಳ ತೀರ್ಪುಗಾರಳನ್ನಾಗಿ ಆರಿಸಿದ್ದಕ್ಕೆ ಧನ್ಯವಾದ ಗಳನ್ನು ಅರ್ಪಿಸುತ್ತೇನೆ.



**ಡಾ ಜಯಮ್ಮ ಚೆಟ್ಟಿಮಾಡ**
ಹಿರಿಯ ಸಾಹಿತಿಗಳು, ಸುಳ್ಯ

**ಮಾರ್ಮಿಕ ಮಿನಿಕತೆಗಳು..**

ವೈದ್ಯರಿಂದ ರಚಿತವಾದ ವೈದ್ಯಕೀಯ ವಿಷಯಗಳನ್ನೊಳಗೊಂಡ ಮಿನಿ ಕತೆಗಳು ತುಂಬ ಪರಿಣಾಮ ಬೀರುವಲ್ಲಿ ಸಫಲವಾಗಿವೆ. ವೈದ್ಯಕೀಯದ ಅನುಭವಗಳು, ದಿನನಿತ್ಯ ಆಸ್ಪತ್ರೆಗಳಲ್ಲಿ ಜರುಗುವ ಘಟನೆಗಳು ಹಲವು ಕತೆಗಳಿಗೆ ಸ್ಫೂರ್ತಿಯಾಗಬಲ್ಲಂಥವುಗಳು. ಹಾಗೆ ನೋಡಿದರೆ ಪ್ರತಿ ವೈದ್ಯನೂ ಕೂಡ ತನ್ನ ವೃತ್ತಿ ಬದುಕಿನಲ್ಲಿ ಒಂದು ರೀತಿಯ ಕತೆಗಾರನೇ. ರೋಗಿಗಳಿಗೆ ಅನೇಕ ವಿಷಯಗಳನ್ನು ತಿಳಿಹೇಳುವ ಸಂದರ್ಭಗಳಲ್ಲಿ ಎಂಥ ವೈದ್ಯನೂ ಕತೆಗಾರನಾಗಿ ಮಾರ್ಪಾಟಾಗಿಬಿಡುತ್ತಾನೆ. ಅಂಥದರಲ್ಲಿ ಆತ ಸಾಹಿತಿಯಾಗಿದ್ದರಂತೂ ಮನತಟ್ಟಿದ ಘಟನೆಗಳು ತಂತಾನೆ ಬರೆಯಿಸಿಕೊಂಡು ಸುಂದರ ಕತೆಗಳಾಗಿ ಹೊಮ್ಮುತ್ತವೆ.

ಅತೀ ಕಡಿಮೆ ಶಬ್ದಗಳಲ್ಲಿ ಚೆಂದದ ಕತೆ ಬರೆಯುವಲ್ಲಿ ವೈದ್ಯರು ಸಫಲರಾಗಿದ್ದಾರೆ ಎಂಬುದು ಹೆಮ್ಮೆಯ ವಿಷಯ. ಯಾವುದೇ ಕಟ್ಟುಪಾಡುಗಳಿಲ್ಲದೇ ಬರೆದ ಸಾಹಿತ್ಯಕ್ಕೆ ಹೇಗೆ ಬೇಕೋ ಹಾಗೆ ವಿಸ್ತಾರಗೊಳ್ಳುವ ಸ್ವಾತಂತ್ರ್ಯವಿರುತ್ತದೆ. ಆದರೆ ಶಬ್ದಗಳ ಸಂಖ್ಯೆಯ ಕಟ್ಟುಪಾಡು ಸೃಜನಶೀಲತೆಗೆ ಸವಾಲು ಹಾಕುತ್ತದೆ. ಬಹುತೇಕ ಕತೆಗಾರರು ಈ ವಿಷಯದಲ್ಲಿ ಗೆದ್ದಿದ್ದಾರೆ. ಕಡಿಮೆ ಶಬ್ದಗಳಲ್ಲಿ ಪರಿಣಾಮಕಾರಿ ಕತೆ ಕಟ್ಟುವಲ್ಲಿ ಯಶಸ್ವಿಯಾಗಿದ್ದಾರೆ. ಹಲವಾರು ಕತೆಗಳು ಚೆನ್ನಾಗಿಯೇ ಇದ್ದಾಗ ಮೂರೇ ಬಹುಮಾನಗಳ ಸನ್ಮಾನ ಸ್ವಲ್ಪ ಕಷ್ಟದ ಕೆಲಸವೇ. ಕತೆಗಳು ಕೈ ಕೈ ಹಿಡಿದು ಚಲಿಸುತ್ತಿರುವಾಗ ಕೈಗಳನ್ನು ಒತ್ತಾಯಪೂರ್ವಕವಾಗಿ ಬಿಡಿಸಿದಂಥ ಮನಸ್ಥಿತಿಯನ್ನು ತೀರ್ಪುಗಾರನಾಗಿ ನಾನು ಅನುಭವಿಸಿದ್ದೇನೆ. ಹಲವಾರು ಕತೆಗಳು ಗುಣಾತ್ಮಕತೆಯಲ್ಲಿ ಒತ್ತೊತ್ತಾಗಿ ನಿಂತಿವೆ, ಎನ್ನುವುದನ್ನು ಗಮನಿಸಿದಾಗ ವೈದ್ಯ ಸಾಹಿತಿಗಳ ಒಂದು ಪರಂಪರೆಯೇ ಸಿದ್ಧವಾಗುತ್ತಿದೆ ಎಂಬುದು ಗಮನಾರ್ಹ ಸಂಗತಿ. ಅಷ್ಟು ಮಟ್ಟಿನ ಸಂತೋಷ ಹಾಗೂ ಹೆಮ್ಮೆ ನನಗೆ.

ಇಂಥದೊಂದು ಕಾರ್ಯಕ್ರಮ ಸಂಯೋಜಿಸಿದ ವೈದ್ಯ ಬರಹಗಾರರ ಬಳಗ ಹಾಗೂ ಶಿವಮೊಗ್ಗೆಯ ಹಿರಿಯ ವೈದ್ಯ ಡಾ. ಕೆ.ಎಸ್.ಶ್ರೀಧರ ನೇತೃತ್ವದ ಕ್ಷೇಮ ಟ್ರಸ್ಟ್ ಅಭಿನಂದನಾರ್ಹರು.



**- ಡಾ॥ ಶಿವಾನಂದ ಕುಬಸದ**
ಹಿರಿಯ ಶಸ್ತ್ರ ಚಿಕಿತ್ಸಕರು,
ಕುಬಸದ ಆಸ್ಪತ್ರೆ, ಮುಧೋಳ


**ಪ್ರಥಮ ಬಹುಮಾನ**

# ಛಿನ್ನವಿಛಿನ್ನರು



**ಡಾ. ಕೆ. ಎಸ್. ಗಂಗಾಧರ**
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು,
ಕಿವಿ, ಮೂಗು ಮತ್ತು ಗಂಟಲು ವಿಭಾಗ
ಮತ್ತು ಮಾಜಿ ನಿರ್ದೇಶಕರು
ಪ್ರಾಂಶುಪಾಲರುಮೆಗ್ಗಾನ್ಆಸ್ಪತ್ರೆ,
ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ
ಸಂಸ್ಥೆ, ಶಿವಮೊಗ್ಗ–577201

ರಾಮಯ್ಯತುಂಬಾ ಸಿರಿವಂತನಲ್ಲ.ತಕ್ಕಮಟ್ಟಿನ ಸ್ಥಿತಿವಂತನಾಗಿದ್ದಾನೆ. ಸಣ್ಣಮಟ್ಟದಗುತ್ತಿಗೆದಾರನಾಗಿ ಸಾಕಷ್ಟು ಆಸ್ತಿ ಮಾಡಿದ್ದ. ವಯಸ್ಸಾಗಿರುವುದರಿಂದ ಗುತ್ತಿಗೆ ಕೆಲಸ ನಿಲ್ಲಿಸಿದ್ದಾನೆ.ಅಂಗಡಿ ಮಳಿಗೆಗಳು ಮತ್ತು ನಾಲ್ಕಾರು ಮನೆಗಳಿಂದ ಬರುವ ಬಾಡಿಗೆ ಹಣದಿಂದಲೇ ನೆಮ್ಮದಿಯಜೀವನ ಸಾಗಿಸುತ್ತಿದ್ದಾನೆ.



ಕೊರೊನಾ ಮೊದಲ ಅಲೆಯ ಸಮಯದಲ್ಲಿರಾಮಯ್ಯ ಬಹಳ ಜಾಗರೂಕನಾಗಿದ್ದ.ಆದರೆಎರಡನೆಯಅಲೆಯ ಸಂದರ್ಭದಲ್ಲಿಕೊರೊನಾದಿಂದ ತಪ್ಪಿಸಿಕೊಳ್ಳಲು ಆಗಲಿಲ್ಲ.ಹೇಗೆ ಬಂತೋಗೊತ್ತಿಲ್ಲ, ಪಾಸಿಟಿವ್ ಅಂತ ದೃಢಪಡುತ್ತಿದ್ದಂತೆಯೇ ಕೋವಿಡ್ಆಸ್ಪತ್ರೆಗೆ ದಾಖಲಾದ.

ಸರ್ಕಾರೀ ಆಸ್ಪತ್ರೆಯ ಸಕಲ ಗೋಜಲುಗಳ ನಡುವೆಯೂರಾಮಯ್ಯನಿಗೆ ಹೇಳಿಕೊಳ್ಳುವಂತಹ ಸಮಸ್ಯೆಯೇನೂ ಆಗಲಿಲ್ಲ.ಅಕ್ಕಪಕ್ಕದ ವಾರ್ಡುಗಳಲ್ಲಿ ದಿನನಿತ್ಯಕೊರೊನಾದಿಂದ ರೋಗಿಗಳು ಸಾಯುತ್ತಿದ್ದ ಸುದ್ದಿಗಳು ಬರುತ್ತಿದ್ದರೂಇವನಿದ್ದ ವಾರ್ಡಿನಲ್ಲಿಯಾವ ಸಾವೂ ಸಂಭವಿಸಿರಲಿಲ್ಲ.ಆದ್ದರಿಂದ ಸಾವಿನ ರೋಧನೆ, ತಳಮಳ, ಭಯ ಇತ್ಯಾದಿಗಳು ಇವನನ್ನುಕಾಡಿರಲಿಲ್ಲ.

ವೈದ್ಯರು ಮತ್ತುದಾದಿಯರೆಲ್ಲರೂ ರಕ್ಷಣಾದಿರಿಸುಗಳನ್ನು ಧರಿಸಿದ್ದರಿಂದ ಅವರ ಮುಖ ಸರಿಯಾಗಿಕಾಣಿಸುತ್ತಿರಲಿಲ್ಲ. ಧ್ವನಿಯೂಅಸ್ಪಷ್ಟವಾಗಿ ಕೇಳಿಸುತ್ತಿತ್ತು.ವೈದ್ಯರೊಬ್ಬರಧ್ವನಿ ಮಾತ್ರಅಸ್ಪಷ್ಟತೆಯ ನಡುವೆಯೂಎಲ್ಲೋ ಕೇಳಿದಂತಿತ್ತು.ಪ್ರತಿದಿನ ಬಂದಾಗಅವರನ್ನು ಕೇಳಬೇಕು ಅಂದುಕೊಳ್ಳುತ್ತಿದ್ದ.ಆದರೆ ವಾರ್ಡಿನ ಕೆಲಸಗಳ ಗಡಿಬಿಡಿಯಲ್ಲಿಅವರೊಡನೆ ಮಾತನಾಡುವುದು ಸಾಧ್ಯವಾಗಲೇಇಲ್ಲ.

ಇವನ ಪಕ್ಕದ ಬೆಡ್ಡಿನಲ್ಲಿಒಬ್ಬ ಶ್ರೀಮಂತನಿದ್ದ. ಅವನಿಗೆ ಯಾವಾಗಲೂ ಸಮಾಧಾನವೆಂಬುದೇಇರಲಿಲ್ಲ. ಇಲ್ಲಿನ ವ್ಯವಸ್ಥೆಯೇ ಸರಿಯಿಲ್ಲವೆಂದುಗೊಣಗಾಡುತ್ತಿದ್ದ. ತನ್ನ ಮೊಬೈಲಿನಿಂದಯಾರ್‍ಯಾರಿಗೋಕರೆ ಮಾಡಿ ವೈದ್ಯರನ್ನುದೂರುತ್ತಿದ್ದ.ಅವನನ್ನು ಸಂಭಾಳಿಸುವುದೇ ಅಸ್ಪತ್ರೆಯ ಸಿಬ್ಬಂದಿಗಳಿಗೆ ದೊಡ್ಡತಲೆನೋವಾಗಿತ್ತು.

ಎದುರಿನ ಬೆಡ್ಡಿನಲ್ಲಿ ಹಮಾಲಿಯೊಬ್ಬಇದ್ದ.ನಗುಮುಖದಿಂದ ಮಾತನಾಡುತ್ತಾಆಸ್ಪತ್ರೆಯ ಸಿಬ್ಬಂದಿಗಳನ್ನು ಹುರಿದುಂಬಿಸುತ್ತಿದ್ದ.ಆಸ್ಪತ್ರೆಯಊಟವನ್ನು ಮೃಷ್ಟಾನ್ನವೆಂದು ಹೊಗಳುತ್ತಾ ಸವಿಯುತ್ತಿದ್ದ.ಇವನ ವರ್ತನೆಯನ್ನು ನೋಡಿ ಪಕ್ಕದ ಬೆಡ್ಡಿನ ಶ್ರೀಮಂತ ಉರಿದುರಿದು ಬೀಳುತ್ತಿದ್ದ.

ಇದೇ ವಾರ್ಡಿನ ಮೂಲೆಯಲ್ಲಿ ವೆಂಟಿಲೇಟರ್‌ಇದ್ದ ಬೆಡ್ಡೊಂದುಇತ್ತು.ಅದರಲ್ಲಿ ವಯೋವೃದ್ಧರೊಬ್ಬರಿದ್ದರು.ಯಾವಾಗಲೋಕಾಡಿದ್ದ ಪಾರ್ಶ್ವವಾಯುವಿನಿಂದಅರ್ಧದೇಹ ಸ್ವಾಧೀನಇರಲಿಲ್ಲ. ಮೂತ್ರಕ್ಕೆಕ್ಯಾತೆಟರ್ ಹಾಕಿದ್ದರು.ಅಚಾನಕ್ಕಾಗಿ ಕೋವಿಡ್ ಪಾಸಿಟಿವ್ ಆಗಿದ್ದರಿಂದಕೊರೊನಾದಯಾವ ಲಕ್ಷಣಗಳಿಲ್ಲದಿದ್ದರೂ ಈ ವಾರ್ಡಿನಲ್ಲಿ ಇರಿಸಿದ್ದರು. ಅವರ ಮಕ್ಕಳಿಬ್ಬರೂ ಅವರನ್ನುರಕ್ಷಣಾದಿರಿಸು ಧರಿಸಿ ಒಳಬಂದು ಅತಿಅಕ್ಕರೆಯಿಂದ ನೋಡಿಕೊಳ್ಳುತ್ತಿದ್ದರು. ಮಕ್ಕಳು ತೋರುತ್ತಿದ್ದ ಪ್ರೀತಿಗೆತೃಪ್ತಿಯಿಂದಿದ್ದ ವಯೋವೃದ್ಧರುಇಂತಹ ಸುಖ ಎಷ್ಟು ಜನಕ್ಕೆ ಸಿಕ್ಕೀತು ಅನ್ನುವ ಭಾವದಲ್ಲಿದ್ದರು.

ಸುಖದ ವ್ಯಾಖ್ಯಾನ ವ್ಯಕ್ತಿಯಿಂದ ವ್ಯಕ್ತಿಗೆ ಬೇರೆಯೇರೂಪದಲ್ಲಿರುವುದನ್ನುಕಂಡುರಾಮಯ್ಯನಿಗೆ ವಿಸ್ಮಯವಾಯಿತು.

ಹತ್ತು ದಿನದ ನಂತರರಾಮಯ್ಯನಿಗೆ ಸಂಪೂರ್ಣಗುಣವಾಗಿಆಸ್ಪತ್ರೆಯಿಂದ ಬಿಡುಗಡೆಯಾಗುವ ದಿನ ಬಂತು. ಪರಿಚಿತಧ್ವನಿಯ ವೈದ್ಯರನ್ನು ಕೇಳಿಯೇ ಬಿಟ್ಟ.

"ನಿಮ್ಮಧ್ವನಿಯನ್ನುಎಲ್ಲೋ ಕೇಳಿದಂತೆ ಇದೆಯಲ್ಲಾ ಸಾರ್"

"ನಾನು ಡಾ.ನಾರಾಯಣ.ಕೋವಿಡ್‌ಆಸ್ಪತ್ರೆಯಲ್ಲಿ ಕೆಲಸ ಮಾಡುವಕಾರಣದಿಂದ ಮೊದಲ ಅಲೆಯ ಸಂದರ್ಭದಲ್ಲಿ ನಿಮ್ಮ ಮನೆ ಖಾಲಿ ಮಾಡಿಸಿದ್ದಿರಲ್ಲಾ,ಅವನೆ. ಈಗ ಇಲ್ಲೇ ಸರ್ಕಾರೀ ಕ್ವಾಟರ್ಸಿನಲ್ಲಿ ಇದ್ದೇನೆ"

ರಾಮಯ್ಯನ ಕಣ್ಣಾಲಿಗಳು ತುಂಬಿ ಬಂದವು.


### ದ್ವಿತೀಯ ಬಹುಮಾನ

# ಕಲೆಗಳು



**ಡಾ. ದಿವ್ಯ ಕೆ. ಎನ್.**
ಸಹಪ್ರಾಧ್ಯಾಪಕರು,
ಪೆಥಾಲಜಿ, ವಿಮ್ಸ್, ಬಳ್ಳಾರಿ

ಆಸ್ಪತ್ರೆಗೆ ಹೊರಟಡಾಕ್ಟರ್ ಪವನ್ ಗಕ್ಕನೆ ಗೇಟಿನ ಪಕ್ಕ ನಿಂತು ಬಿಟ್ಟ.ಕಂದು ಬಣ್ಣದಎತ್ತರದ ನಿಲುವಿನ ದಷ್ಟಪುಷ್ಟವಾದ ಪ್ರಾಣಿಯೊಂದುತನ್ನ ಹಿಂದಿನ ಕಾಲಿನ ಮೇಲೆ ಕುಳಿತು ಮುಂದಿನ ನೀಳಕಾಲುಗಳನ್ನು ಇಳಿಬಿಟ್ಟು ಪವನನ್ನೇ ದಿಟ್ಟಿಸುತ್ತಿದೆ. ಅದರ ನಿರ್ಭಾವುಕಆದರೆಆತ್ಮವಿಶ್ವಾಸದ, ಮೇಲರಿಮೆಯ ನೋಟದಿಂದ ಪವನ ವಿಚಲಿತನಾಗಿಬಿಟ್ಟ.ಅದರಎದೆಯ ಭಾಗ ಸಂಪೂರ್ಣ ಪಾರದರ್ಶಕವಾಗಿದೆ.ಅದರ



ಶ್ವಾಸಕೋಶಗಳು ಎಕ್ಸರೇಯಲ್ಲಿಕಾಣುವಂತೆಕಾಣುತ್ತಿದೆ.ಗಾಳಿ ಇರಬೇಕಾದಜಾಗದಲ್ಲಿ ಕೀವು ತುಂಬಿಕೊಂಡ ಕಲೆಗಳಿಂದ ಕೂಡಿದ ಶ್ವಾಸಕೋಶ. ಕೊರೋನ ವಾರ್ಡಗಳಲ್ಲಿ ಕಾಣಸಿಗುವಂತಹ ಎಕ್ಸರೇ.ಹಿಂದೊಮ್ಮೆಉಚ್ವಾಸ ನಿಶ್ವಾಸಗಳಿಂದ ಕ್ರಿಯಾಶೀಲವಾಗಿದ್ದ ಶ್ವಾಸಕೋಶ ಇಲ್ಲಿ ಇತ್ತು ಎನ್ನುವ ಕುರುಹೂ ಉಳಿಯದಂತೆ ಇಡೀ ಎಕ್ಸರೇ ಶೀಟನ್ನೇ ಮುಚ್ಚಿಬಿಡುವ ಕಲೆಗಳು.ಪವನನ ಗಂಟಲೊಣಗಿ ಭಯದ ಸೆಳಕು ನರನಾಡಿಗಳಲ್ಲಿ ಹರಿದಾಡಿತು. ರಭಸದಿಂದ ಓಡಿಬಂದು ಕಾರಿನಲ್ಲಿ ಕುಳಿತುಬಿಟ್ಟ. ಕನ್ನಡಿಯಲ್ಲಿ ಅಲುಗದೇ ತನ್ನತ್ತಲೇ ನೋಡುತ್ತಿದ್ದ ಆ ಜೀವಿ ಕಾಣಿಸಿತು.

ಆಸ್ಪತ್ರೆಯಲ್ಲಿ ತುಂಬಿತುಳುಕುವ ಕೊರೋನ ಐಸಿಯು ಡಾಕ್ಟರ್ ಪವನನ ಉಸ್ತುವಾರಿಯಲ್ಲಿತ್ತು. ಒಬ್ಬರಿಗಿಂತಒಬ್ಬರುಅಸ್ವಸ್ಥರಾಗಿರುವ ರೋಗಿಗಳು. ಎಷ್ಟೇ ಆಕ್ಸಿಜನ್‌ಕೊಟ್ಟರೂಇನ್ನೂ ಬೇಕೆಂಬ ಜೀವಾನಿಲದದಾಹ.ಪ್ರತಿರೋಗಿಯ ಮಾಹಿತಿ ಪಡೆಯುತ್ತಾಚಿಕಿತ್ಸೆಯ ಬಗೆಗೆ ತಿಳಿಸುತ್ತಾ ಪವನ ರೌಂಡ್ಸ್ ಆರಂಭಿಸಿದ.ದಿನಕರನ ಬಳಿ ಬರುತ್ತಲೇ ಹೊಟ್ಟೆಯೊಳಗೆ ಯಾರೋ ಕೈಹಾಕಿ ತೊಳಸಿದಂತಹ ಸಂಕಟ.ದಿನಕರ ಪವನನ ಯುನಿಟ್ಟಿನಲ್ಲಿಯೇ ಸ್ನಾತಕೋತ್ತರ ವಿದ್ಯಾರ್ಥಿ. ಒಳ್ಳೆಯ ನಡತೆ, ರೋಗಿಗಳ ಬಗೆಗೆ ಅಪಾರ ಕಾಳಜಿ, ಹೊಸ ವಿಷಯಗಳನ್ನು ಕಲಿಯುವದಾಹ, ಒಬ್ಬಆದರ್ಶ ವಿದ್ಯಾರ್ಥಿಗಿರಬೇಕಾದಎಲ್ಲಾ ಗುಣಗಳಿದ್ದೂ ಪವನನ ನೆಚ್ಚಿನ ಶಿಷ್ಯನಾಗಿದ್ದ. ಅನೇಕ ತಿಂಗಳಿಂದ ಕೊರೋನ ವಾರ್ಡ್‌ಗಳಲ್ಲಿ ಹನ್ನೆರಡುಗಂಟೆಡ್ಯೂಟಿ ಮಾಡುತ್ತಿದ್ದ."ಇದು ಹೀಗೇ ಮುಂದುವರೆದರೆ, ನನಗೆ ವೈದ್ಯ ಶಾಸ್ತ್ರದಎಂಡಿಅಲ್ಲ. ಕೊರೋನಾಲಜಿಯಎಂಡಿಕೊಡುತ್ತಾರೆ ಅಷ್ಟೆ" ಎಂದು ನಗೆಯಾಡುತ್ತಿದ್ದ.ಒಮ್ಮೆರೌಂಡ್ಸ್ ಮುಗಿಸಿ ಹೊರಬಂದು ಪಿಪಿಇ ಕಿಟ್‌ಅನ್ನುತೆಗೆಯುತ್ತಿದ್ದಂತೆ, ರೋಗಿಯೊಬ್ಬ ಸಿರಿಯಸ್‌ಆಗಿದ್ದಾನೆಂದು ಬರೀ ಮಾಸ್ಕ್‌ನಲ್ಲೇ ಐಸಿಯು ಒಳಗೆ ಧಾವಿಸಿ, ಆ ರೋಗಿಯನ್ನು ಬದುಕಿಸಿ ತಾನು ಪಾಸಿಟೀವ್ ಆಗಿದ್ದ.ಆರೋಗ್ಯತೀರ್ವವಾಗಿ ಹದಗೆಟ್ಟು ವೆಂಟಿಲೇಟರ್‌ನಲ್ಲಿ ಉಸಿರಾಡುತ್ತಿದ್ದ.ಅವನ ಈ ಸ್ಥಿತಿಗೆ ತಾನೂ ಪರೋಕ್ಷವಾಗಿಕಾರಣನಾದೆನೇನೋ ಎಂಬ ತಪ್ಪಿತಸ್ಥ ಭಾವನೆ ಪವನನ್ನು ಮಾನಸಿಕವಾಗಿ ಜರ್ಝರಿತಗೊಳಿಸಿತ್ತು.ಎಲ್ಲಾ ಪ್ರಯತ್ನಗಳ ನಡುವೆಯೂಕಣ್ಮುಂದೇ ಪ್ರತಿದಿನವೆಂಬಂತೆ ಸಾಯುವ ರೋಗಿಗಳನ್ನು ಉಳಿಸಿಕೊಳ್ಳಲಾಗದ ಅಸಹಾಯಕತೆಯಜೊತೆ ದಿನಕರನಅನಾರೋಗ್ಯ ಪವನನ್ನು ಹಿಂಡಿಹಿಪ್ಪೆ ಮಾಡಿತ್ತು.

ಮನೆಗೆ ಮರಳಿದರೆ ಆ ಪ್ರಾಣಿಅದೇ ವಿಲಕ್ಷಣ ಭಂಗಿಯಲ್ಲಿ ಕುಳಿತು ಅವನನ್ನೇ ದಿಟ್ಟಿಸುತ್ತಿದೆ.ಈಗ ಅದರ ಶ್ವಾಸಕೋಶದ ಕಲೆಗಳು ಇನ್ನೂ ಹೆಚ್ಚಾಗಿ ಹೊಟ್ಟೆಯನ್ನೂತುಂಬಿ ಬಿಟ್ಟಿದೆ.ಓಡಿಸಿದರೂ ಓಡದ, ಎಂದಿನಿಂದಲೂಇಲ್ಲಿಯೇ ಬೀಡುಬಿಟ್ಟಿದೆಯೆನೋ ಎಂಬ ಭಾವವನ್ನು ಸ್ಪುರಿಸುತ್ತಾ ಇವನ ಮಗ್ಗುಲಮುಳ್ಳಾಗಿ ಕಾಡುತ್ತಿದೆ.

ಮುಂದಿನ ಮೂರು ದಿನಗಳಲ್ಲಿ ದಿನಕರ ಚೇತರಿಸಿಕೊಂಡು ವಾರ್ಡಗೆ ಸ್ಥಳಾಂತರಗೊಂಡ. ಅವನ ಕಣ್ಣಲ್ಲಿ ಸೂಸಿದ ಕೃತಜ್ಞತೆಯಝುಲಕ್‌ಕತ್ತಲೆಯ ಪಯಣಿಗನಿಗೆ ದಾರಿತೋರುವ ಮಿಂಚಿನ ಬೆಳಕಿನಂತೆ ಪವನನಲ್ಲಿ ಚೈತನ್ಯವನ್ನು ತುಂಬಿತು. ಅಂದು ಮನೆಯ ಮುಂದೆ ಆ ಜೀವಿ ಕಾಣಲೇಇಲ್ಲ. ಇಂದಿಗೂ ಪವನ ಅದನ್ನು ಹುಡುಕುತ್ತಲೇಇದ್ದಾನೆ.

### ತೃತೀಯ ಬಹುಮಾನ

# ರೂಪಾಂತರಿ




**ಡಾ. ಉಷಾ ಎಂ. ಜಿ.**

ಪ್ರಾಧ್ಯಾಪಕರು ಮತ್ತು ವಿಭಾಗದ ಮುಖ್ಯಸ್ಥರು,
ಮೈಕ್ರೋ ಬಯಾಲಜಿ ವಿಭಾಗ,
ಜೆ.ಜೆ.ಎಂ.ವೈದ್ಯಕೀಯ ಕಾಲೇಜು, ದಾವಣಗೆರೆ


ಬುರುಬುರು ನೊರೆಉಕ್ಕಿ, ಘಮಘಮಿಸುತ್ತಿದ್ದ ಕಾಫಿಯನ್ನು ಪತಿಗೆ ಕೊಡಲು ಹೆಜ್ಜೆಹಾಕಿದ ನಿತ್ಯಾಳನ್ನು ರೂಮಿನಿಂದಲೇ ಹರೀಶ್ನನ್ನೆ ಮಾಡಿನಿಲ್ಲಿಸಿದ. " ಪಾಸಿಟಿವ್ " ಎಂದುರೂ ಮಿನಬಾಗಿಲನ್ನು ಸ್ವಲ್ಪಮುಂದೆ ಮಾಡಿದ.






ಅವಕ್ಕಾದ ನಿತ್ಯಾ ಸೋಫಾ ಮೇಲೆ ಕುಸಿದು ಅರೆಕ್ಷಣ ಕಣ್ಣುಮುಚ್ಚಿದಳು. ಮನಸ್ಸು ಭೂತಕಾಲಕ್ಕೆ ಜಾರಿತು.

***

ಒಂದು ವರ್ಷದ ಹಿಂದೆ ಕೊರೊನಾ ಎರಡನೇಅಲೆ ಎಲ್ಲೆಡೆ ಚಾಚಿಕೊಂಡಿದ್ದ ದಿನಗಳವು. ಕೋವಿಡ್–19 ಡೆಲ್ಟಾರೂಪಾಂತರಿ "ಮಾರಿಹಬ್ಬ" ನಡೆಸಿತ್ತು. ನಿತ್ಯಾಳ ತಂದೆ–ತಾಯಿ ಕೊರೋನಾಗೆ ಬಲಿಯಾಗಿದ್ದರು. ಅವರನ್ನುಕಳೆದು ಕೊಂಡ ದುಃಖವೋ, ಕೊರೋನಾ ಭೀತಿಯೋ ಅಥವಾ "ವರ್ಕ್ಫ್ರಮ್‌ಹೋಮ್" ಎಂದೋ ಒಟ್ಟಾರೆ ಸದಾಚಟುವಟಿಕೆಯಿಂದ ಇರುತ್ತಿದ್ದ ನಿತ್ಯಾ ಮನೆಗೆ ಅಂಟಿ ಕೊಳ್ಳುವಂತಾಗಿತ್ತು. ಯಾರನ್ನೂ ಮನೆಗೆ ಆಹ್ವಾನಿಸುತ್ತಿರಲಿಲ್ಲ. ಆಕಸ್ಮಾತ್ತಾನಾಗೆ ಹೊರಹೋದರೂ ಏನನ್ನಾದರೂ ಮುಟ್ಟಲು, ತಿನ್ನಲು ಭಯ ಪಡುವಂತಹಪರಿಸ್ಥಿತಿ. ಇತ್ತೀಚೆಗಷ್ಟೇ ಗಂಡ–ಹೆಂಡತಿ ವಾಕಿಂಗ್ಹುರು ಮಾಡಿದ್ದರು. ನಿನ್ನೆಯಾಕೋ ಸುಸ್ತು ಎಂದ ಹರೀಶ್ವಾಬ್ಟೆಸ್ಟಿಗೆ ಕೊಟ್ಟು ಬಂದಿದ್ದ.

ದುಗುಡ ತುಂಬಿದ ಮನಸ್ಸಿನಿಂದಲೇ ಆಪ್ತ ಗೆಳತಿಗೆ ವಿಚಾರ ತಿಳಿಸಿದಳು. ಮನೆ ಕೆಲಸದವಳಿಂದ ವಿಷಯಮುಚ್ಚಿಡುವುದೆಂದು ನಿರ್ಧರಿಸಿದರು. ಬಾಯಿ ಬಿಟ್ಟು ನಿತ್ಯ ಏನೂ ಹೇಳದಿದ್ದರೂ ಕೆಲಸದ ಕಮಲಮ್ಮನಿಗೆ ಪರಿಸ್ಥಿತಿಯ ಸೂಕ್ಷ್ಮ ಅರ್ಥವಾಗಿತ್ತು ಮನೆಯಲ್ಲಿದ್ದ "ಒಮಿಕ್ರೋನ್" ವಾಸನೆ ಕಮಲಮ್ಮನ ಮೂಗಿಗೆ ಬಡಿದಿತ್ತು. ಆದರೂ ಮುಗುಳ್ನಗುತ್ತಾ ಎಲ್ಲ ಕೆಲಸ ಸಮಾಧಾನದಿಂದ ಮುಗಿಸುತ್ತಿದ್ದಳು. ನಿತ್ಯಾಳಿಗೆ ಪಾಪ ಪ್ರಜ್ಞೆತಡೆಯಲಾಗಲಿಲ್ಲ.

"ಕಮಲಮ್ಮ ಇವರಿಗೆ ಕೋವಿಡ್ಪಾಸಿಟಿವ್. ನೀನು ಬೇಕಾದರೆ ರಜಾ ತೆಗೆದುಕೋ.ಒಂದಷ್ಟು ದಿವಸಗಳ ನಂತರಬಾ."

ಕಮಲಮ್ಮ ನಸುನಕ್ಕು "ಇರಲಿ ಬಿಡಮ್ಮ. ಒಳಗೆ ಇದ್ದಾರೆ. ಸಂಪರ್ಕಕ್ಕೆ ಬರುವುದಿಲ್ಲ. ನಾಬರುತ್ತಾ ಹೋಗುತ್ತಾ ಇದ್ದರೆ ನಿಮಗೂ ತುಸು ಧೈರ್ಯವಿರುತ್ತದೆ.ಅಣ್ಣಾವ್ರನ್ನ ಚೆನ್ನಾಗಿ ನೋಡಿಕೊಳ್ಳಿ." ಎಂದಳು.

ನಿತ್ಯಾಳ ಕಣ್ಣಂಚಿನಲ್ಲಿ ನೀರಾಡಿತ್ತು. ಮನಸ್ಸು 6 ತಿಂಗಳ ಹಿಂದೆ ನಡೆದ ಘಟನೆಯನ್ನು ಮೆಲುಕು ಹಾಕಿತು.

***

ಅದೊಂದು ದಿನ ಕೆಲಸ ಮಾಡುತ್ತಿರುವಾಗ ಕಮಲಮ್ಮ ತುಸು ಕೆಮ್ಮಿದಾಗ "ಕೋವಿಡ್ ಇರಬಹುದು ಪರೀಕ್ಷೆ ಮಾಡಿಸಿಕೋ" ಎಂದಿದ್ದಳು ನಿತ್ಯಾ. ಹಾಗೇನು ಇಲ್ಲಮ್ಮ ಎಂದರೂ ಒಪ್ಪದೇ "ರಿಪೋರ್ಟ್ಬಂದ ನಂತರವೇ ಮುಂದಿನ ಮಾತು"ಎಂದು ಬಾಯಿ ಮಾಡಿದ್ದಳು.

ವಿಧಿ ಇಲ್ಲದೆ ಕಮಲಮ್ಮ ರಜಾ ಹಾಕಿದ್ದು, ನಂತರ ಸ್ವಾಬ್ಟೆಸ್ಟ್ ನೆಗೆಟಿವ್ ಇರುವುದನ್ನು ತಿಳಿಸಿ ಕೆಲಸಕ್ಕೆ ಹಾಜರಾಗಿದ್ದು, ತಿಂಗಳ ಕೊನೆಯಲ್ಲಿ ಸಂಬಳ ಕಟ್ಮಾಡಿ ಕೊಟ್ಟಿದ್ದು ಎಲ್ಲವೂ ಸಿನಿಮಾ ಟ್ರೈಲರ್ನಂತೆ ಕಣ್ಮುಂದೆ ಬಂತು.

***

ನಿತ್ಯಾಗೆ ತಡೆಯಲಾಗಲಿಲ್ಲ. ಕಣ್ಣಿಂದ ನೀರು ಧಾರಾಕಾರವಾಗಿ ಸುರಿಯತೊಡಗಿತು.

"ಕಮಲಮ್ಮ ನನ್ನ ಕ್ಷಮಿಸುವೆಯ?

"ಬಿಡಮ್ಮ ಇದೆಂಥ ಮಾತು ನಿಮ್ಮ ತಪ್ಪೇನೂ ಇಲ್ಲ. ಪರಿಸ್ಥಿತಿ ಹಾಗಿತ್ತು. ಮೂಲೆ ಅಂಗಡಿಯಿಂದ ಹಣ್ಣು–ತರಕಾರಿ ಏನಾದರೂ ತಂದು ಕೊಡಲೇನು" ಎಂದುಕೇಳಿದಳು.

ಛೇ ಆಕೆಗಿರುವ ಹೃದಯವೈಶಾಲ್ಯತೆ ತನಗಿಲ್ಲವಾಯಿತಲ್ಲ ಎಂದು ಕುಗ್ಗಿದಳು ನಿತ್ಯಾ. ಆಕೆಗೆ ತನ್ನನ್ನು ತಾನೇ ಕನ್ನಡಿಯಲ್ಲಿ ನೋಡಿಕೊಳ್ಳಲಾಗಲಿಲ್ಲ.

"ರೂಪಾಂತರಿತವಾಗಿದ್ದು ಬರೀ ವೈರಸ್ಮಾತ್ರವೋ.....!!

ಅಥವಾ ಮನುಷ್ಯನ 'ಮನಸ್ಸೋ...!

ಅಥವಾ ಜೀವಿಗಳ ನಡುವಿನ ಸಂಬಂಧವೋ.....!!"

ತನ್ನಿಂದಾದ ತಪ್ಪಿಗೆ ಕ್ಷಮೆಬೇಡಿಕೊಳ್ಳಲು ದೇವರ ಮನೆಕಡೆ ಹೆಜ್ಜೆ ಹಾಕಿದಳು ನಿತ್ಯಾ!!



**ಡಾ ಗುರುದತ್ತ ಕೆ ಎನ್**
ಅರವಳಿಕೆ ತಜ್ಞರು
381, 3ನೇ ಅಡ್ಡ ರಸ್ತೆ, ರವೀಂದ್ರ ನಗರ, ಶಿವಮೊಗ್ಗ, 94482–38846
drknguruduttt9@gmail.com


ಕೃತಿ ಪರಿಚಯ

# ಕಾಲ: ಡಾ ಎಂ. ಶಿವರಾಂ (ರಾಶಿ)



**ಡಾ. ವಿನಯಾ ಶ್ರೀನಿವಾಸ್**
ವಿಭಾಗೀಯ ಸಂಪಾದಕರು, ಶಿವಮೊಗ್ಗ

ರಾ.ಶಿ. ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಡಾ ಎಂ.ಶಿವರಾಮ್ (1904–1984) ಕನ್ನಡ ಸಾಹಿತ್ಯದ ಹೆಸರಾಂತ ಹಾಸ್ಯ ಸಾಹಿತಿಗಳು. ವೃತ್ತಿಯಿಂದ ವೈದ್ಯರು. ಕನ್ನಡದ ಮೊಟ್ಟ ಮೊದಲ ಹಾಸ್ಯಪತ್ರಿಕೆ ಕೊರವಂಜಿಯ ಸಂಪಾದಕರಾಗಿದ್ದರು. ತನ್ಮೂಲಕ ನಾ.ಕಸ್ತೂರಿ, ಅ.ರಾ.ಸೇ, ಕೇ.ಫ, ಟಿ. ಸುನಂದಮ್ಮ ಮುಂತಾದ ಲೇಖಕರನ್ನು ಖ್ಯಾತ ವ್ಯಂಗ್ಯ ಚಿತ್ರಕಾರ ಆರ್.ಕೆ.ಲಕ್ಷ್ಮಣ್ ಅವರನ್ನು ಸಾರಸ್ವತ ಲೋಕಕ್ಕೆ ಪರಿಚಯಿಸಿದವರು ಡಾ. ಎಂ. ಶಿವರಾಂ, ತುಟಿ ಮೀರಿದುದು, ಕೆಣಕೋಣಬಾ, ತಿಂಗಳ ತಿಳಿಗಾಳು ಅಂತಹ ಹಾಸ್ಯ ಕೃತಿಗಳು, ಜಗ್ಗೋಜಿ, ಬಗ್ಗೋಜಿ, ಅಂಚೆಪೇದೆಯ ಅಂತರ್ ಹೆಂಡತಿ ಎಂಬ ಕಥಾ ಸಂಕಲನಗಳು, "ಸಾಕ್ಷಿ" ಎಂಬ ಕವನ ಸಂಕಲನ, ಪಂಪಾಪತಿಯ ಕೃಪೆ, ಹರಿದ ಉಯಿಲು, ಮಧುವನದಲ್ಲಿ ಮೇಳ, ಕಾರ್ತಿಕ ಸೋಮವಾರ ಎಂಬ ನಾಲ್ಕು ಕಾದಂಬರಿಗಳು, ದೈಹಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ 'ಅಲರ್ಜಿ' 'ಆದರ್ಶ ಮತ್ತು ಆರೋಗ್ಯ' ಎಂಬ ಕೃತಿಗಳು; ಜಿ.ಪಿ.ರಾಜರತ್ನಂ ಮತ್ತು ಟಿ.ಪಿ.ಕೈಲಾಸಂ ಅವರನ್ನು ಕುರಿತು ವ್ಯಕ್ತಿ ಚಿತ್ರಗಳು, ವಿಚಾರ ಸಾಹಿತ್ಯಕ್ಕೆ ಸಂಬಂಧಿಸಿದಂತೆ 'ಕಾಲ' ಎಂಬ ಅನನ್ಯ ಕೃತಿ ಹಾಗು ಆಂಗ್ಲ ಭಾಷೆಯಲ್ಲಿ 1) Kailasam and I 2) Ananda and experience 3) Ananda and the great three Acharayas 4) Death and Nachiketa ಈ ಎಲ್ಲವು ಅವರ ಲೇಖನಿಯಿಂದ ಹೊರಹೊಮ್ಮಿರುವ ಕೃತಿ ರತ್ನಗಳು. ಮನೋವೈದ್ಯಕೀಯಕ್ಕೆ ಸಂಬಂಧಿಸಿದಂತೆ ಅವರು ಬರೆದಿರುವ ಮನೋನಂದನ, ಮನಮಂಥನ ಕನ್ನಡ ವೈದ್ಯ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಕೃತಿಗಳು, ಮನಮಂಥನಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ (1974) ಹಾಗು ಕೇಂದ್ರ ಸಾಹಿತ್ಯ ಅಕಾಡೆಮಿ (1976) ಪ್ರಶಸ್ತಿಗಳು ಸಂದಿದೆ. ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯವನ್ನು ಸಮಾನಮನಸ್ಕ ಗೆಳೆಯರೊಂದಿಗೆ ಸ್ಥಾಪಿಸಿ ಕೆಲ ವರ್ಷಗಳ ನಂತರ ಸರ್ಕಾರಕ್ಕೆ ಬಿಟ್ಟುಕೊಟ್ಟ ಧೀಮಂತ ಜನಾನುರಾಗಿ ವೈದ್ಯರು ಡಾ ಎಂ. ಶಿವರಾಂ (ರಾ.ಶಿ). ಈ ಹೊತ್ತಿನ ಯುವಜನಾಂಗ, ಅದರಲ್ಲೂ, ಬಿ.ಎಂ.ಸಿ.ಯಲ್ಲಿ ವ್ಯಾಸಂಗ ಮಾಡುತ್ತಿರುವ ವೈದ್ಯ ವಿದ್ಯಾರ್ಥಿಗಳಿಗೂ ಡಾ.ಎಂ.ಶಿವರಾಂ ಅವರ ಬಗ್ಗೆ ತಿಳುವಳಿಕೆ ಇಲ್ಲದ ಈ ಕಾಲ ಮಾನದಲ್ಲಿ ಅವರ ಬಗ್ಗೆ ಸ್ವಲ್ಪ ದೀರ್ಘವಾಗಿ ಬರೆಯಬೇಕಾಯಿತು.




ಪ್ರಸ್ತುತ ನಾನು ರಾ.ಶಿ. ಅವರ ಕೃತಿ ರಾಶಿಯಲ್ಲಿ ಆರಿಸಿಕೊಂಡಿರುವ ವೈಚಾರಿಕ ಕೃತಿ – "ಕಾಲ". ಕಾಲ– Time ಅಮೂರ್ತವಾದುದು. ಕಾಲದ ಬಗ್ಗೆ ಭೌತಶಾಸ್ತ್ರಜ್ಞರು, ತತ್ತ್ವಶಾಸ್ತ್ರಜ್ಞರಾದಿಯಾಗಿ ಅನೇಕ ಮಹನೀಯರು ಚಿಂತನ ಮಂಥನ ಮಾಡಿದ್ದಾರೆ. ಕವಿಗಳು ಕಾಲವನ್ನು ಹರಿವ ನೀರಿದು (ಹರಿವ ನೀರಿರು – ಗಂಗಾಧರ ಚಿತ್ತಾಲ) ಹಾರುವ ಹಕ್ಕಿಗೆ(ಹಕ್ಕಿ ಹಾರುತಿದೆ ನೋಡಿದಿರಾ–ಬೇಂದ್ರೆ ) ಹೋಲಿಸಿ ಅಮೂರ್ತಕಾಲವನ್ನು ಮೂರ್ತೀಕರಿಸಿ ಚಿತ್ರಿಸಿದ್ದಾರೆ. ಈ 'ಕಾಲ' ವೆಂಬ ಕಾಲದ ಸ್ವರೂಪವಾದರೂ ಏನು? ಈ ಬಗ್ಗೆ ಪೌರ್ವಾತ್ಯ, ಪಾಶ್ಚಿಮಾತ್ಯ ವಿದ್ವಾಂಸರು, ವಿಜ್ಞಾನಿಗಳು, ದಾರ್ಶನಿಕರ ಚಿಂತನೆಗಳನ್ನು



ಅನೇಕ ಆಯಾಮಗಳಲ್ಲಿ ಇಲ್ಲಿ ಚರ್ಚಿಸಲಾಗಿದೆ. ಬರವಣಿಗೆಯಲ್ಲಿ ಸೂಕ್ಷ್ಮ ಒಳನೋಟಗಳಿವೆ ಗಂಭೀರ ವಿಷಯಗಳನ್ನು ನವಿರು ಹಾಸ್ಯದೊಂದಿಗೆ ಓದುಗರಿಗೆ ಪರಿಚಯಿಸಲಾಗಿದೆ.

ಕಾಲವೆಂದರೆ ಎರಡು ಘಟನೆಗಳ ನಡುವಿನ ಅವಧಿ. ಘಟನೆಗಳೆ ನಡೆಯದಿದ್ದರೆ ಕಾಲಸ್ತಬ್ಧ, ದೇಶ – Space – ಎಂಬುದು ಮೂರು ಆಯಾಮಗಳನ್ನು ಒಳಗೊಂಡಿದ್ದರೆ Time – ಕಾಲವೆಂಬುದು ನಾಲ್ಕನೆಯ ಆಯಾಮವಾಗಿ ಬೇರೆ ಬೇರೆಯಾಗಿ ಇರದೆ ಒಂದಕ್ಕೊಂದು ಅಂಟಿಕೊಂಡಿವೆ. ನೋಬೆಲ್ ಪ್ರಶಸ್ತಿ ಪುರಸ್ಕೃತ ವೈದ್ಯವಿಜ್ಞಾನಿ ಹಾಗು ಚಿಂತಕ ಡಾ ಅಲೆಕ್ಸಿಸ್ ಕೆರಲ್ ತಮ್ಮ Man, The unknown ಎಂಬ ಜಗತ್‌ಪ್ರಸಿದ್ಧ ಕೃತಿಯಲ್ಲಿ ಕಾಲದ ಬಗ್ಗೆ ವಿಶೇಷ ಚಿಂತನೆಗಳನ್ನು ನಡೆಸಿದ್ದಾರೆ. (Physiological Time ಇತ್ಯಾದಿ) Man the unknown ಕೃತಿಯ ಓದಿನಿಂದ ಪ್ರಭಾವಿತರಾದ ರಾ.ಶಿ. ಅವರು ದಶಕಗಳ ಕಾಲ ಈ ಬಗ್ಗೆ ಬಹು ಆಯಾಮಗಳಲ್ಲಿ ಅಧ್ಯಯನಮಾಡಿ ಬರೆದಿರುವ ಕೃತಿಯಿದು. ಲೇಖಕರ ಬಹುಶೃತತ್ತ್ವ, ಅಪಾರ ಅಧ್ಯಯನಶೀಲತೆ ಇಲ್ಲಿನ ಪುಟಪುಟಗಳಲ್ಲಿ ಪ್ರತಿಫಲನಗೊಂಡಿದೆ.

**ಪುರಾಣಗಳಲ್ಲಿ ಕಾಲ:**

1) ಕಾಲದ ಗತಿಯನ್ನು Fast forward ಮಾಡುವ ಬಗೆ : ಜಯ ವಿಜಯರ ಕಥೆ. ಭಕ್ತನಾಗಿ 7 ಜನ್ಮಗಳು ಬೇಕೋ ಅಥವಾ ದುಷ್ಟನಾಗಿ 3 ಜನ್ಮಗಳು ಬೇಕೋ ಎಂಬ ಆಯ್ಕೆಯ ಪ್ರಶ್ನೆ ಬಂದಾಗ ಜಯ ವಿಜಯರು ಆರಿಸಿಕೊಳ್ಳುವುದು 3 ಜನ್ಮಗಳನ್ನು.

**2) ಕಾಲಗತಿಯನ್ನು ನಿಧಾನಿಸುವ ಬಗೆ:** ಮಾರ್ಕಂಡೇಯನ ಕಥೆ. ಹುಟ್ಟು ಮತ್ತು ಸಾವಿನ ನಡುವಿನ ಅವಧಿಯನ್ನು ಅಗಣಿತವಾಗಿ ಹೆಚ್ಚಿಸುವುದೇ ಚಿರಂಜೀವತ್ವ. ಅಂದರೆ ಕಾಲಗತಿಯನ್ನು ನಿಧಾನಿಸಿದಂತೆ.

**3) ಕಾಲವನ್ನು ಸ್ತಬ್ಧಗೊಳಿಸುವ ಬಗೆ :** ಅಹಲ್ಯೆಯ ಕಥೆ ಶಾಪಯುಕ್ತ ಅಹಲ್ಯೆ ಶಿಲೆಯಾಗಿ ಶಾಪವಿಮೋಚನೆಯನಂತರ ಸಜೀವಗೊಂಡಳು. ಅವಳ ಶಿಲಾಸ್ಥಿತಿಯಲ್ಲಿ ಅಹಲ್ಯೆಯ ವೈಯಕ್ತಿಕ 'ಕಾಲ' ಸ್ತಬ್ಧಗೊಂಡಿತ್ತು.

**4) ಕಾಲದ ಹಿಮ್ಮುಖ ಚಲನೆ :** ವೃದ್ಧಾಪ್ಯದಿಂದ ತಾರುಣ್ಯದ ಕಡೆಗಿನ ಹಿಮ್ಮುಖ ಕಾಲಗತಿ ಯಯಾತಿಯ ಕಥೆಯಲ್ಲಿದೆ. ಕಾಲದ ಬಗೆಗಳು: (1) ಭೌತಿಕ ಕಾಲ (Physical) 2) ದೈಹಿಕ ಕಾಲ (Physiological) 3) ಮಾನಸಿಕ ಕಾಲ (4) ಮನೋತೀತ ಕಾಲ ಇತ್ಯಾದಿ. ಕಾಲ– ಅನಾದಿ, ಅನಂತ, ದೇಶ (Space) ಇದ್ದಲ್ಲಿ ಕಾಲ, ದೇಶ ಮತ್ತು ಕಾಲಕ್ಕೆ ಪ್ರತ್ಯೇಕ ಅಸ್ತಿತ್ವವಿಲ್ಲ. ಬ್ರಹ್ಮಾಂಡದಲ್ಲಿರುವುದು Space-Time Continuam – ದೇಶಕಾಲ ನೈರಂತರ್ಯವೇ, ಈ ಕಾಲವನ್ನು ನಿಮಿಷ, ಗಂಟೆ, ದಿನ, ಮಾಸ, ವರ್ಷ, ಜ್ಯೋತಿವರ್ಷ, ಯುಗ, ಕಲ್ಪ ಇವೆಲ್ಲ ಮಾನುಷ ಗಣನೆಗಳು ಮಾತ್ರ.

**ದೇಹ ಮತ್ತು ಕಾಲ:** ನಮ್ಮ ದೇಹದಲ್ಲಿ ಹಲವಾರು ಅಂಗಗಳಿವೆ. ಒಂದೊಂದಕ್ಕೂ ಕಾಲದ ಗತಿ ಇದೆ. ಹೃದಯದ ಮಿಡಿತಕ್ಕೆ ಅದರದ್ದೇ ಆದ ಕಾಲಗತಿ(ನಿಮಿಷಕ್ಕೆ 60–90), ಉಸಿರಾಟಕ್ಕೆ ಅದರದ್ದೇ ಆದ ಕಾಲಗತಿ (ನಿಮಿಷಕ್ಕೆ 14–18) ಹಾಗೆಯೇ ಕರುಳಿಗೂ ಅದರದ್ದೇ ಆದ ಕಾಲಗತಿ. ಕಣ್ಣಿನ ಮಸೂರಕ್ಕೂ ಅಷ್ಟೇ. ಸ್ತ್ರೀಯರ ಅಂಡಾಶಯ–ಗರ್ಭ ಕೋಶಗಳಿಗೆ 28 ದಿನಗಳ ಕಾಲಗತಿ. ಒಂದೇ ಜೀವಕೋಶದಿಂದ ಜೀವ ಪ್ರಾರಂಭಿಸಿದರೂ ಅದರಿಂದ ಕಾಲಾನುಕಾಲದಲ್ಲಿ ಅಭಿವೃದ್ಧಿ ಹೊಂದಿರುವ ವಿವಿಧ ಅಂಗಗಳದ್ದೂ ಅವುಗಳದ್ದೇ ಆದ ಕಾಲಗತಿ ಹೊಂದಿವೆ. ಜ್ವರ ಬಂದಾಗ ದೇಹದ ಕಾಲಗತಿ ವೇಗ ಪಡೆದುಕೊಂಡರೆ, ಹೈಪೋಥೈರಾಯಿಡ್ ಸ್ಥಿತಿಯಲ್ಲಿ ಕಾಲಗತಿ ಕುಂಠಿತವಾಗುತ್ತದೆ. ಕೆಲವು ಜೀವಕೋಶಗಳಿಗೆ

ಸಂಬಂಧಿಸಿದಂತೆ ದೇಹದಲ್ಲಿ ಕಾಲಸ್ತಬ್ಧವಾಗುವುದೂ ಉಂಟು. ಉದಾ: ಪುರುಷರಲ್ಲಿ ಮೀಸೆ. ಗಡ್ಡಗಳು ಪೌಗಂಡವಯಸ್ಸಿನಲ್ಲಿ ಮೂಡುತ್ತವೆಯಷ್ಟೆ. ಈ ಮೀಸೆ, ಗಡ್ಡಗಳ ಬೀಜದಂತಿರುವ ಜೀವಕೋಶಗಳು ಚರ್ಮದ ಒಂದು ಪದರದಿಂದ ಮೂಡುತ್ತವೆ. ತಾರುಣ್ಯವು ಮೂಡುವ ಸಂದರ್ಭದಲ್ಲಿ ಮೀಸೆ, ಗಡ್ಡಗಳು ಬೆಳೆಯಲಾರಂಭಿಸುತ್ತವೆ. ಶೈಶವದಿಂದ ತಾರುಣ್ಯದ ಆ ಸಂದರ್ಭದವರೆಗೂ ಈ ಜೀವಕೋಶಗಳ ಕಾಲಗತಿ ಸ್ತಬ್ಧವಾಗಿರುತ್ತದೆ.

**ಮನಸ್ಸು ಮತ್ತು ಕಾಲ :** ಸುಖದ ಅನುಭವವಾಗುತ್ತಿದ್ದರೆ ಕಾಲವು ಹಗೂರಾಗಿ ತ್ವರಿತವಾಗಿ ಹರಿದಂತೆ ಭಾಸವಾಗುತ್ತದೆ. ಅದೇ ದುಃಖದ/ ಬೇಸರದ ಸಂದರ್ಭದಗಳಲ್ಲಿ ಕಾಲವು ಭಾರವಾಗಿ ಅತಿನಿಧಾನವಾಗಿ ನಡೆಯುತ್ತಿರುವಂತೆ ಅನುಭವವಾಗುತ್ತದೆ, ಪ್ರೇಯಸಿಗಾಗಿ ಕಾಯುತ್ತಿದ್ದಾಗ ಕ್ಷಣವೂಂದು ಯುಗವಾದಂತೆ; ಪ್ರೇಯಸಿ ಜೊತೆಗಿದ್ದಾಗ ಯುಗವೂಂದು ಕ್ಷಣವಾದಂತೆ. ಭ್ರಮೆಕಾರಕ ಔಷಧಗಳನ್ನು ಸೇವಿಸಿದಾಗ ಮನೋಕಾಲದಲ್ಲಿ ವ್ಯತ್ಯಯವಾಗುತ್ತದೆ. ಕೆಲವು ತೀವ್ರತರದ ಮನೋರೋಗಿಗಳಲ್ಲಿ ಕಾಲವೇ ಪಲ್ಲಟವಾದಂತೆ ಅನುಭವವಾಗುತ್ತದೆ. ಕನಸಿನಲ್ಲಿಯೂ ಮನಸ್ಸು ಕಾರ್ಯನಿರ್ವಹಿಸುತ್ತಲೇ ಇರುತ್ತದೆ. ಸ್ವಪ್ನಾವಸ್ಥೆಯೂ, ವೇದಾಂತದ ದೃಷ್ಟಿಯಲ್ಲಿ ಒಂದು ರೀತಿಯ ಜಾಗ್ರದವಸ್ಥೆಯೇ ಕನಸಿನಲ್ಲಿನ ಮನೋಕಾಲಕ್ಕೂ, ಗಡಿಯಾರದ ಭೌತಿಕ ಕಾಲಕ್ಕೂ ಅರ್ಥಾರ್ಥಕ ಸಂಬಂಧವೇ ಇರುವುದಿಲ್ಲ. ಹತ್ತು ವರ್ಷಗಳಲ್ಲಿ ನಡೆದ ಘಟನೆಗಳೆಲ್ಲವೂ ಕೇವಲ ಒಂದೆರೆಡು ನಿಮಿಷಗಳಲ್ಲಿ ನಡೆದಂತೆ ಭಾಸವಾಗುತ್ತದೆ. ಕನಸಿನ ಕಾಲದ ಗತಿ ಅತಿವೇಗವಾದುದು.

**ಮನೋತೀತ ಕಾಲ:** ಮನಸ್ಸಿನ ಎಲ್ಲ ಅವಸ್ಥೆಗಳಲ್ಲಿಯೂ ಕಾಲದನುಭವವು ಒಂದಲ್ಲ ಒಂದು ರೀತಿಯಲ್ಲಿರುತ್ತದೆ. ಆದರೆ ಮನೋತೀತ ಸ್ಥಿತಿಯಲ್ಲಿ ಮನಸ್ಸು ಶೂನ್ಯವಾಗಿದ್ದರೂ ' ಅರಿವು' (Pure consciousness) ಇರುತ್ತದೆ.

ಈ ಕೃತಿಯಲ್ಲಿ ಪಾಶ್ಚಾತ್ಯ ಚಿಂತಕರಾದ ಅರಿಸ್ಟಾಟಲ್, ಪ್ಲೋಟೋ ಅವರ ವಿಚಾರಗಳಿವೆ. ಸರ್ ಐಸಾಕ್ ನ್ಯೂಟನ್, ಆಲ್‌ಬರ್ಟ್ ಐನ್‌ಸ್ಟೀನ್ ಅಂಥವರ ವೈಜ್ಞಾನಿಕ ಸಿದ್ಧಾಂತಗಳು, ಭಾರತೀಯ ದಾರ್ಶನಿಕರ, ಅನುಭಾವಿಗಳ ಚಿಂತನೆಗಳನ್ನು (ಕಾಲೋ ಅಶ್ವೋವಹತಿ ಇತ್ಯಾದಿ) ಚರ್ಚಿಸಲಾಗಿದೆ. ಪ್ರಾರ್ಥನೆ, ಧ್ಯಾನ ಮತ್ತು ಕಾಲ ಎಂಬ ಅಧ್ಯಾಯದಲ್ಲಿ ಪ್ರಾರ್ಥನೆ ಮತ್ತು ಧ್ಯಾನಗಳು, ದೈಹಿಕ ಹಾಗು ಮನೋಕಾಲದ ಮೇಲೆ ಬೀರುವ ಪರಿಣಾಮವನ್ನು ಚರ್ಚಿಸಲಾಗಿದ್ದು, ಕೆಲವು ಸತ್ಯ ಘಟನೆಗಳನ್ನು ವಿಶ್ಲೇಷಿಸಲಾಗಿದೆ.

ಇವೆಲ್ಲ ಸಂಗತಿಗಳಿಗೆ ಕಳಶಪ್ರಾಯವಾಗಿ ಕೊನೆಯ ಅಧ್ಯಾಯದಲ್ಲಿ ಆಚಾರ್ಯಶಂಕರರ 'ಕಾಲಭೈರವಾಷ್ಟಕ' ಸ್ತೋತ್ರವನ್ನು ಈ ವರೆಗೆ ನಡೆಸಿರುವ ವಿಚಾರ ಸರಣಿಯ ಹಿನ್ನಲೆಯಲ್ಲಿ ವ್ಯಾಖ್ಯಾನಿಸಲಾಗಿದೆ. ಉದಾ: "ನಾರದಾದಿಯೋಗಿವೃಂದ ದಿಗಂಬರಂ" ಎಂಬ ಸಾಲಿನ ದಿಗಂಬರ ಶಬ್ಧವನ್ನು ವಿಶ್ಲೇಷಿಸಿರುವ ರೀತಿ ನೋಡಿ. ಕಾಲಬೈರವನು ದಿಕ್ ಅಂಬರನಂತೆ, ದಿಕ್ ಎಂದರೆ ದಿಕ್ಕು ಅಂದರೆ ದೇಶ ಅಥವಾ Space ನ ಗುಣವೊಂದನ್ನು ವಿವರಿಸುವ ಪದ. 'ಕಾಲ'ನು 'ದೇಶ'ವನ್ನು ಕರ್ಣನ ಕವಚದಂತೆ ಧರಿಸಿದ್ದವನು. ಕಾಲ ಮತ್ತು ದೇಶಗಳು ಒಂದಾಗಿದ್ದು –Space –Time Continuam. ಅಂದರೆ ದೇಶ ಕಾಲ ನಿರಂತರತೆಯನ್ನು ಈ ಶಬ್ಧ



ಸಂಕೇತಿಸುತ್ತದೆ. ಬ್ರಹ್ಮಾಂಡದ ಕಲ್ಪನೆಗೆ ಅನ್ವಯಿಸುವಾಗ 'ದಿಗಂಬರ' ಎನ್ನವುದು ವೈಜ್ಞಾನಿಕವಾಗಿಯೂ ಹೆಚ್ಚು ಅರ್ಥಪೂರ್ಣ. ವಿಷ್ಣು ಎಂದರೆ ಸರ್ವವ್ಯಾಪಕ ಇದು ದೇಶ ಸೂಚಕ. ಕಾಲಭೈರವ ಎಂದರೆ ಶಿವ. ದೇಶ ಮತ್ತು ಕಾಲ ಒಂದನ್ನೊಂದು ಬಿಟ್ಟಿರಲು ಸಾಧ್ಯಾವಿಲ್ಲ. ಕಾಲ ಎಂಬುದು ವಿಷ್ಣುವಿನ ಸಹಸ್ರನಾಮಗಳಲ್ಲಿ ಒಂದು "ಶಿವಶ್ಚ ಹೃದಯಮ್ ವಿಷ್ಣುಃ ವಿಷ್ಣೋಶ್ಚ ಹೃದಯಂ ಶಿವಃ"

ಡಾ ಎಂ. ಶಿವರಾಂ ಅವರ ವೈದ್ಯಕೀಯ ಅನುಭವಗಳು, ಹಾಸ್ಯ ಪ್ರಜ್ಞೆ, ಗಂಭೀರ ಚಿಂತನೆಗಳು, ಬಹುಶ್ರುತತ್ವ ಹಾಗು ಅಪಾರ ಅಧ್ಯಯನ ಶೀಲತೆಗಳೆಲ್ಲ ಸಮಹದದಲ್ಲಿ ಬೆರೆತು ಬಡಿಸಿದ ರಸಪಾಕ 'ಕಾಲ' ವೆಂಬ ಈ ಕೃತಿ.



**ಡಾ॥ ಅಪರ್ಣಾ ಶ್ರೀವತ್ಸ**
ಕನ್ಸಲ್ಟೆಂಟ್ ಮೆಡಿಕಲ್ ಆಂಕಾಲಜಿಸ್ಟ್,
ನಂಜಪ್ಪ ಲೈಫ್ ಕೇರ್, ಶಿವಮೊಗ್ಗ

ಕಾಯಿಲೆ–ಚಿಕಿತ್ಸೆ

# ಹೆಸರಲ್ಲೇನಿದೆ?



**ಡಾ॥ ಕೆ. ಎಸ್. ಶುಭ್ರತಾ**
ವಿಭಾಗೀಯ ಸಂಪಾದಕರು

ಕೆಲವು ಹೆಸರುಗಳನ್ನ ಕೇಳಿದರೇ ಭಯ ಆಗತ್ತೆ ಅಲ್ವಾ? "ಕ್ಯಾನ್ಸರ್" ಮತ್ತು "ಕೀಮೋಥೆರಪಿ" ಅಂಥ ಹೆಸರುಗಳು. ತಲೆತಲಾಂತರದಿಂದ "ಕ್ಯಾನ್ಸರ್" ಗುಣಪಡಿಸಲಾಗದಂತಹ ಕಾಯಿಲೆ ಎಂದು (ಕೆಟ್ಟ) ಹೆಸರು ಪಡೆದಿದೆ. ಕುಖ್ಯಾತಿಯೇ ಹಾಗೆ, ತಗೊಳೋದು ಸುಲಭ, ಹೋಗಲಾಡಿಸೋದು ಕಷ್ಟ. ಇಂದಿನ ದಿನಗಳಲ್ಲಿ ಕ್ಯಾನ್ಸರ್ ಅನ್ನು ಸಂಪೂರ್ಣ ಗುಣ ಮಾಡಬಹುದು ಅಂತ ನಾನು ಹೇಳಿದ್ರೂ ರೋಗಿಗಳು ನಂಬೋದೇ ಇಲ್ಲ. "ಕೀಮೋಥೆರಪಿ"ಯೂ ಹಾಗೆಯೇ, ಕೂದಲು ಉದುರುವುದು, ವಾಕರಿಕೆ, ವಾಂತಿ, ಭೇದಿ, ಜ್ವರ ಎಂದು ಹೆದರಿ, ಎಷ್ಟೋ ರೋಗಿಗಳು ಚಿಕಿತ್ಸೆಗೆ ಚಕ್ಕರ್ ಹಾಕುತ್ತಾರೆ. ಕಾಲಾನುಕಾಲದಿಂದ ಕೀಮೋಥೆರಪಿ ಕೊಡುತ್ತಾ ಬಂದಿರುವ ಕ್ಯಾನ್ಸರ್ ಸ್ಪೆಷಲಿಸ್ಟ್ ಡಾಕ್ಟರ್‌ಗಳು, ಇಂದು ಯಾವ ಪ್ರಿಸ್ಕ್ರಿಪ್ಷನ್ ಕೊಟ್ಟರೂ, ರೋಗಿಗಳು ಅದು "ಕೀಮೋಥೆರಪಿ"ಯೇ ಎಂದು ಭ್ರಮಿಸಿ ಹೌಹಾರುತ್ತಾರೆ. ಅದೇ ಹೆಸರಿನ ಮಹಿಮೆ.

65 ವರ್ಷದ ನಿವೃತ್ತ ಸಿವಿಲ್ ಇಂಜಿನಿಯರ್ ಒಬ್ಬರಿಗೆ ಕಿಡ್ನಿಯಲ್ಲಿ ಕ್ಯಾನ್ಸರ್ ಇದೆ ಎಂದು ಪತ್ತೆಯಾಗಿತ್ತು. ಶಸ್ತ್ರ ಚಿಕಿತ್ಸೆಯಿಂದ ಕ್ಯಾನ್ಸರ್‌ಅನ್ನು ನಿರ್ಮೂಲನೆ ಮಾಡಿದ್ದಾಗಿತ್ತು. ಅವರ ಕ್ಯಾನ್ಸರ್ ಮತ್ತೆ ಮರುಕಳಿಸುವ ರಿಸ್ಕ್ ಇದ್ದಿದ್ದರಿಂದ ಅವರಿಗೆ ಕೆಲವು ಮಾತ್ರೆಗಳನ್ನು ಸೇವಿಸಲು ಕ್ಯಾನ್ಸರ್ ವೈದ್ಯರು ಸಲಹೆ ನೀಡಿದ್ದರು. ಆದರೆ ರೋಗಿ ಕೀಮೋಥೆರಿಯ ಬಗ್ಗೆ ಹೆದರಿ, ಡಾಕ್ಟರ್ ಸಲಹೆಯನ್ನು ಗಾಳಿಗೆ ತೂರಿದ್ದರು.



6 ತಿಂಗಳ ನಂತರ ಕ್ಯಾನ್ಸರ್ ಮರುಕಳಿಸಿ, ಮೆದುಳು ಹಾಗೂ ಬೆನ್ನು ಮೂಳೆಗೆ ಹರಡಿ, ಅವರ ಬಲಗೈ ಹಾಗೂ ಬಲಗಾಲಿಗೆ ಪಾರ್ಶ್ವವಾಯು ಬಡಿದು ನಡೆಯುವುದೂ ಅಸಾಧ್ಯವಾಯಿತು. ತೀವ್ರ ತಲೆನೋವು ಹಾಗೂ ಸೊಂಟ ನೋವಿನಿಂದ ನರಳುತ್ತಿದ್ದ ಅವರು ನನ್ನ ಸಲಹೆಹಾಗಿ ಗಾಲಿ ಕುರ್ಚಿಯಲ್ಲಿ ನನ್ನ ಓ.ಪಿ.ಡಿ.ಗೆ ಬಂದಿದ್ದರು. ನಾನು ಅವರನ್ನು ಪರೀಕ್ಷಿಸಿ ಕೆಲವು ಚಿಕಿತ್ಸೆಗಳಿಂದ ಅವರ ಕ್ಯಾನ್ಸರ್‌ಅನ್ನು ನಿಭಾಯಿಸಬಹುದು ಎಂದೆ. ತಕ್ಷಣ ಅವರ ಹೆಂಡತಿ "ಕೀಮೋಥೆರಪಿಯನ್ನು ಇವರು ಸುತರಾಂ ತಗೊಳೋದಿಲ್ಲಾಂತ ಪಟ್ಟು ಹಿಡಿದಿದ್ದಾರೆ ಮೇಡಂ" ಎಂದು ಅಂಜಿದರು.

ಕೆಲವು ರೋಗಿಗಳಿಗೆ ಬೈದು ಬುದ್ಧಿಹೇಳಬೇಕಾಗುತ್ತೆ. ಆದರೆ ಇವರು ಜಾಣ ರೋಗಿ. ಇಂಥವರಿಗೆ ಬೇರೆ ದಾರೀನೇ ಇರತ್ತೆ. ನಾನು, "ನಿಮ್ಮ ಕಾಯಿಲೆಗೆ ನಾನು

ಕೀಮೋಥೆರಪಿ ಪ್ರಿಫರ್ ಮಾಡೋದಿಲ್ಲ. ನೋಡಿ, ಕೀಮೋಥೆರಪಿಗೆ ಕ್ಯಾನ್ಸರ್ ಕಣ ಯಾವುದು, ಆರೋಗ್ಯವಂತ ಕಣ ಯಾವುದು ಅನ್ನೋ ಪರಿಜ್ಞಾನವೇ ಇರೋದಿಲ್ಲ. ಅದು ವೇಗವಾಗಿ ವಿಭಜಿಸುತ್ತಿರುವ ಎಲ್ಲಾ ಕಣಗಳನ್ನೂ ಕೊಂದು, ರೋಗಿಯನ್ನು ಗೋಳಾಡಿಸಿ ಬಿಡತ್ತೆ. ನಾನು ನಿಮಗೆ ಸೂಚಿಸೋದು "ರಾಮಬಾಣ"ದಂಥ "ಟಾರ್ಗೆಟ್ ಥೆರಪಿ"ಯನ್ನ. ನೀವು ಕೇಳೇ ಇರ್ತೀರ ರಾಮಾಯಣದ ಕಥೇನ. ಹೇಗೆ ಶ್ರೀರಾಮ ದೇವರು ಪ್ರಯೋಗಿಸಿದ ರಾಮಬಾಣ ನಿರ್ದಿಷ್ಟ ರಾಕ್ಷಸನಿಗೇ ತಗುಲಿ, ಅವನ ಸಾವು ನಿಶ್ಚಿತವೋ ಹಾಗೇ ಈ "ಟಾರ್ಗೆಟ್ ಥೆರಪಿ" ಬರಿಯ ಕ್ಯಾನ್ಸರ್ ಕಣಗಳನ್ನಷ್ಟೇ ಹತ್ತಿಕ್ಕಿ, ಕ್ಯಾನ್ಸರ್ ಅನ್ನು





ನಿಗ್ರಹಿಸುತ್ತದೇ ಹೊರತು, ದೇಹದ ಆರೋಗ್ಯವಂತ ಕಣಗಳಿಗೆ ಅನಾವಶ್ಯಕವಾಗಿ ಅಡ್ಡಪರಿಣಾಮ (ಸೈಡ್ ಎಫೆಕ್ಟ್) ಉಂಟು ಮಾಡೋದಿಲ್ಲ. ಈ ಚಿಕಿತ್ಸೆ ಪಡೆಯುತ್ತಿರುವ ಅನೇಕ ರೋಗಿಗಳು ತುಂಬಾ ಒಳ್ಳೆಯ ಫಲಿತಾಂಶ ಪಡೆದಿದ್ದಾರೆ" ಎಂದೆ. ಶ್ರೀರಾಮನ ಕಥೆ ಕೇಳಿದ ರೋಗಿಯ ಕಣ್ಣಂಚಿನಲ್ಲಿ ಒಂದು ಹನಿ ಕಣ್ಣೀರು ಮತ್ತು ಆಶಾಭಾವ ಕಾಣಿಸಿತು. ಕ್ಯಾನ್ಸರ್ ರೋಗಿಗಳು ಭಗವಂತನ ಪವಾಡಗಳಲ್ಲಿ ಅತೀವ ನಂಬಿಕೆ ಇಟ್ಟಿರುತ್ತಾರೆ. ಆ ನಂಬಿಕೆಯ ಜೊತೆ ಒಳ್ಳೆಯ ಔಷಧಿಗಳನ್ನು ಪಡೆದರೆ, ಕ್ಯಾನ್ಸರ್ ಅನ್ನು ಅಂತಿಮ ಹಂತಗಳಲ್ಲೂ ಸಹ ನಿಯಂತ್ರಣ ಮಾಡಬಹುದು. ಕೊನೆಗೂ ನನ್ನ ರೋಗಿ ಮಹಾಶಯರು ಟಾರ್ಗೆಟ್ ಥೆರಪಿ ಪ್ರಯೋಗಕ್ಕೆ ಹೂಗುಟ್ಟಿದರು.

ಟಾರ್ಗೆಟ್ ಥೆರಪಿಯಾದ "ಸುನೀಟಿನಿಬ್"(Sunitinib) ಎಂಬ ಮಾತ್ರೆಯ ಪ್ರಿಸ್ಕ್ರಿಪ್ಷನ್ ಗೀಚಿದೆ. ಈ ಮಾತ್ರೆ ಬೇರೆ ಯಾವುದೂ ಅಲ್ಲ, ಅವರ ಮುಂಚಿನ ಕ್ಯಾನ್ಸರ್ ಡಾಕ್ಟರು ಬರೆದಿದ್ದೂ ಇದನ್ನೇ! ಆಗಲೇ ಅವರು ಈ ಮಾತ್ರೆ ನುಂಗಿ ನೀರು ಕುಡಿದಿದ್ದರೆ, ಅವರ ಮೆದುಳಿಗೆ ಕ್ಯಾನ್ಸರ್ ಹರಡುವ ಪ್ರಮೇಯವೇ ಇರುತ್ತಿರಲಿಲ್ಲ. ಆದರೆ ರೋಗಿಯು ಅದು ಕೀಮೋಥೆರಪಿ ಎಂದು ತಪ್ಪು ತಿಳಿದಿದ್ದರು. ಕೆಲವೊಮ್ಮೆ ಡಾಕ್ಟರ ಬಳಿ ಚರ್ಚೆ ಮಾಡಲು ರೋಗಿಗಳು ಹೆದರಿ, ತಪ್ಪು ಮಾಹಿತಿಯನ್ನು ಗ್ರಹಿಸಿರುತ್ತಾರೆ. ನನ್ನ ರಾಮಬಾಣದ ಕಥೆ ಅವರ ತಪ್ಪು ಕಲ್ಪನೆಯನ್ನು ಹೋಗಲಾಡಿಸಿ, ಮಂಕು ಕವಿದಿದ್ದ ಅವರ ಬುದ್ಧಿಯನ್ನು ಚುರುಕು ಮಾಡಿತ್ತು. ಜೈ ಶ್ರೀರಾಮ್.

ಒಂದು ತಿಂಗಳ ಟಾರ್ಗೆಟ್ ಥೆರಪಿ ಮಾತ್ರೆಗಳ ನಂತರ, ರೋಗಿ ಅವರ ಹೆಂಡತಿ ಜೊತೆ ನಡೆದೇ ನನ್ನ ಓ.ಪಿ.ಡಿ.ಗೆ ಬಂದಿದ್ದರು. ನಾನು ಖುಷಿಯಿಂದ ಉಬ್ಬಿ, "ಎಲ್ಲಿ ಹೋಯಿತು ನಿಮ್ಮ ರಥ?" ಚುಡಾಯಿಸಿದೆ. ಅವರು ಮುಗ್ಧ ಮಗುವಿನಂತೆ ನಾಚಿ ನಕ್ಕರು. ಅವರ ತಲೆನೋವು, ಸೊಂಟ ನೋವು ಕ್ರಮೇಣ ನಿಯಂತ್ರಣಕ್ಕೆ ಬಂದಿತು. ಸುಮಾರು ಒಂದೂವರೆ ವರ್ಷದಿಂದ ಪ್ರತಿ ತಿಂಗಳೂ ನನ್ನ ದರ್ಶನಕ್ಕೆ ತಪ್ಪದೇ ಬರುತ್ತಿದ್ದಾರೆ. ಅವರಿಗಿದ್ದ ಅಂತಿಮ ಹಂತದ ಕ್ಯಾನ್ಸರ್ "ಕ್ಯೂರ್" ಅಂದರೆ ಸಂಪೂರ್ಣ ಗುಣವಾಗಿಲ್ಲ. ಟಾರ್ಗೆಟ್ ಥೆರಪಿಯ ದೆಸೆಯಿಂದ ಕ್ಯಾನ್ಸರ್ ಬಲಹೀನವಾಗಿ ಅವರ ಮೆದುಳು ಹಾಗೂ ಬೆನ್ನ ಮೂಳೆಯಲ್ಲಿ ಅಡಗಿ ಕೂತಿದೆ. ಮುಂದೊಂದು ದಿನ ಕ್ಯಾನ್ಸರ್ ತನ್ನ ಬಾಲ ಬಿಚ್ಚಿ ಪ್ರಬಲವಾಗಬಹುದು. ಅದರೆ ಇಲ್ಲಿಯ ತನಕ ಆ ಗಂಡ–ಹೆಂಡತಿ ಶಿವ ಪಾರ್ವತಿಯರಂತೆ ಖುಷಿಯಾಗಿ ಕಾಲ ಹಾಕುತ್ತಿದ್ದಾರೆ.

ಕ್ಯಾನ್ಸರ್ ಡಾಕ್ಟರು ಹೇಳೋದೆಲ್ಲಾ "ಕೀಮೋಥೆರಪಿ" ಅಲ್ಲ. ಕೀಮೋಥೆರಪಿಗಿಂತ ಅತ್ಯುತ್ತಮವಾದ ಅನೇಕ ಚಿಕಿತ್ಸೆಗಳು ಚಾಲ್ತಿಯಲ್ಲಿವೆ. ಟಾರ್ಗೆಟ್ ಥೆರಪಿ ಅಂಥದೊಂದು ಉತ್ಕೃಷ್ಟ ಚಿಕಿತ್ಸೆ ಆಗಿದೆ. "ಕ್ಯಾನ್ಸರ್", "ಕೀಮೋಥೆರಪಿ" ಅಂತ ಹೆಸರು ಕೇಳಿಯೇ ಹೆದರಿ ಬಿಡಬೇಡಿ. ನಿಮ್ಮ ಕ್ಯಾನ್ಸರ್ ಡಾಕ್ಟರ್ ಜೊತೆ ಮುಕ್ತವಾಗಿ ಚರ್ಚಿಸಿ, ನಿಜಾಂಶ ತಿಳಿದುಕೊಳ್ಳಿ.



**ಡಾ. ಸುನಂದಾ ಆರ್ ಕುಲಕರ್ಣಿ**
ಮುಖ್ಯಸ್ಥರು , ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗ
ಚಿನ್ಮಯ ಮಿಷನ್ ಆಸ್ಪತ್ರೆ, ಬೆಂಗಳೂರು, DNB ಸಂಯೋಜಕರು

ಕಾಯಿಲೆ–ಚಿಕಿತ್ಸೆ

# ಅಂಡಕೋಶದಲ್ಲಿ ಪುಂಬೀಜ ತೂರುವಿಕೆ

ಮಕ್ಕಳು ಯಾರಿಗೆ ಇಷ್ಟವಿಲ್ಲ? ಬಂಜೆತನ ಯಾರಿಗೂ ಬೇಡ ಈಗ ಅದೆಷ್ಟೋ ಜನರಿಗೆ ಅನೇಕ ದೋಷಗಳಿದ್ದರೂ ಮಾತಾಪಿತೃಗಳು ಆಗುತ್ತಿದ್ದಾರೆ. ಅಂಡ ಫಲಿತವಾಗಬೇಕಿದ್ದರೆ. ಅವೆರಡರ ಮಿಲನ ಮುಖ್ಯ. ನೈಸರ್ಗಿಕವಾಗಿ ಈ ಮಿಲನ ಹೆಂಗಸರಲ್ಲಿ ಆಗದಿದ್ದಾಗ ಸ್ತ್ರೀಯಿಂದ ಅಂಡ ತೆಗೆದು ಪುರುಷನಿಂದ ಪುಂಬೀಜ ತೆಗೆದು ಸಂಸ್ಕರಿಸಿ ನಂತರ ಟೆಸ್ಟ್ ಟ್ಯೂಬಿನಲ್ಲಿ ಬೇಬಿ ಮಾಡುವ ಪದ್ಧತಿ ಬಂದಿತ್ತು. ಈಗ ಬಂದಿರುವದು ICSI. ಇಲ್ಲಿ ಬಲವಂತವಾಗಿ ಪುಂಬೀಜವನ್ನು ಅಂಡಾಶಯದಲ್ಲಿ ತೂರಿಸಲಾಗುತ್ತದೆ.


ಟೆಸ್ಟ್ ಟ್ಯೂಬಿನ ಬೇಬಿಯಲ್ಲಿ ಅಂಡದ ಪಕ್ಕದಲ್ಲಿ ಪುಂಬೀಜಗಳನ್ನು ಬಿಡಲಾಗುವುದು. ಆಗ ಯಾವುದಾದರೂ ಒಂದು ಪುಂಬೀಜ ಈಜಿಕೊಂಡು ಅಂಡವನ್ನು ಫಲಿತ ಮಾಡುವುದು ಆದರೆ ಪುಂಬೀಜಗಳು ತೀರ ಕಡಿಮೆಯಿದ್ದಾಗ ಈಜುವ ಶಕ್ತಿಯೂ ಕಡಿಮೆಯಿದ್ದಾಗ, ಈ ICSI ಮಾಡಲಾಗುವದು.

ಈ ICSI ಯ ಮೊದಲ ಶಿಶುವು April 1989 ರಲ್ಲಿ ಸಿಂಗಪೂರದಲ್ಲಿ ಜನಿಸಿತು. ಬ್ರುಸೆಲ್ ದೇಶದ ನಿಯಾನೆ ಪಿಯಶೋ ಎಂಬವರು ಪ್ರಪ್ರಥಮ ಪ್ರಯತ್ನ ಮಾಡಿದರು. 1990ರಲ್ಲಿ ಈ ಕ್ರಿಯೆ ಸಂಪೂರ್ಣ ಯಶಸ್ವಿಯಾದರೂ ಶಿಶುವು ಜನಿಸಲಿಲ್ಲ 1993ರಲ್ಲಿ ಶಿಶುವು ಜನಿಸಿತು.



ಈ ICSI ಯಲ್ಲಿ ಸಂಸ್ಕರಿಸಿದ ಪುಂಬೀಜಗಳನ್ನು ಸೂಕ್ಷ್ಮ ದರ್ಶಕ (Microscope) ದಲ್ಲಿ ನೋಡಿ ನಂತರ ಅದರ ಚಿತ್ರಗಳನ್ನು ವರ್ಧಿಸಿ ಮತ್ತೆ ನೋಡಿ ಅದರಲ್ಲಿ ಚೆನ್ನಾಗಿ ಕಾಣುವ ಅಂದರೆ ಯಾವ ನ್ಯೂನ್ಯತೆಯಿಲ್ಲದ ಪುಂಬೀಜವನ್ನು ನೋಡಿ ಅದನ್ನು ಒಂದು ಸೂಕ್ಷ್ಮವಾದ ಗಾಜಿನ ಸೂಜಿಯಿಂದ ಸೆಳೆದುಕೊಳ್ಳುತ್ತಾರೆ. ತದನಂತರ ಅಂಡಾಣುವನ್ನು ಹಿಡಿದು ಅದರ ಒಳಗೆ ತೂರಿಸುತ್ತಾರೆ. ಇದರಿಂದ ಅಂಡಾಣು ಫಲಿತವಾಗಿಯೇ ಆಗುತ್ತದೆ.

ಈ ICSI ಯು IVF ಅಂದರೆ ಟೆಸ್ಟ್ ಟ್ಯೂಬ್ ಬೇಬಿಗಿಂತಲೂ ಸ್ವಲ್ಪ ದುಬಾರಿ. IVF ಗಿಂತ ಇಲ್ಲಿ ಗರ್ಭ ಅಥವಾ ಯಶಸ್ಸು ಸ್ವಾಭಾವಿಕವಾಗಿಯೇ ಜಾಸ್ತಿ. ಆದರೆ ಇಲ್ಲಿ IVF ತರಹ ನೈಸರ್ಗಿಕವಾಗಿ ಪುಂಬೀಜ ಒಂದು ಫಲೋತ್ಪತ್ತಿಯಲ್ಲಿ ನಿಸರ್ಗದ ಆಯ್ಕೆ ಇರದೇ ಪುಂಬೀಜದ ಆಯ್ಕೆ ಮಾನವನದಾಗಿರುತ್ತದೆ. ಇದರಿಂದ ಇಂತಹ ವಿಧಾನದಿಂದ ಹುಟ್ಟುವ ಶಿಶುಗಳಲ್ಲಿ ಕೆಲವು ಸಲ ನ್ಯೂನ್ಯತೆಗಳು ಜಾಸ್ತಿಯಿರಬಹುದೆಂಬ ಒಂದು ಸಂಶಯವಿದೆ. ಗರ್ಭಪಾತಗಳೂ ಸ್ವಲ್ಪ ಜಾಸ್ತಿ.



ಈ ICSI ಯನ್ನು ಕೆಲವರಲ್ಲಿ ಮಾತ್ರ ಮಾಡಲೇ ಬೇಕಾಗುತ್ತದೆ. ಅದು ಯಾರಲ್ಲಿ ಅಂದರೆ ಯಾರಲ್ಲಿ ಪುಂಬೀಜಗಳ ಸಂಖ್ಯೆ ತೀರ ಕಡಿಮೆ ಉತ್ಪತ್ತಿಯಾಗುತ್ತದೆಯೋ ಅವರಲ್ಲಿ ಸಂಖ್ಯೆ ಕಡಿಮೆಯಿದ್ದರೂ ಕೆಲವರಲ್ಲಿ ಪುಂಬೀಜಗಳಿಗೆ ಚಲನೆ ಅಂದರೆ ಈಜುವ ಶಕ್ತಿ ಯಾರಲ್ಲಿ ಇಲ್ಲ, ಅಂತಹವರಲ್ಲಿ ಮತ್ತೆ ಯಾರಲ್ಲಿ ಪುಂಬೀಜಗಳಿಗೆ ಪ್ರತಿರೋಧಕಗಳಿವೆಯೋ ಅವರಲ್ಲಿ. ಇದಲ್ಲದೆ ಹೆಂಗಸರಲ್ಲಿಯ ತೊಂದರೆಗಳಿಗೂ ಮಾಡಲಾಗುತ್ತದೆ. ವಯಸ್ಕ ಹೆಂಗಸರು ತೀರತಡವಾಗಿ ಮದುವೆಯಾಗಿದ್ದಾಗ ಅಥವಾ ಅವರ ಅಂಡಗಳಲ್ಲಿ ದೋಷ ಅಂದರೆ ಅವರ ಅಂಡ ಗಟ್ಟಿಯಿದ್ದು, ಪುಂಬೀಜ ಒಳಸೇರದಂತೆ ಕೋಟೆಯ ಗೋಡೆಯ ತರಹ ಇರುವಾಗ ಹಲವಾರು ಸಲ IVF (Test tube baby) ಪ್ರಯತ್ನ ಮಾಡಿದರೂ ಫಲಕಾರಿಯಾಗದಿದ್ದಾಗ ಮಾಡಲಾಗುವುದು.



ಇದಲ್ಲದೆ ಕೆಲವರಲ್ಲಿ ಗಂಡಸರಲ್ಲಿ ಪುಂಬೀಜಗಳು ಹೊರ ಬರುವುದೇ ಕಷ್ಟ. ಇಂತಹವರಲ್ಲಿ ವಿದ್ಯುತ್ತಿನಿಂದ ಮಥಿಸಿ ತೆಗೆಯಲಾಗುತ್ತದೆ. ಇನ್ನು ಕೆಲವರಲ್ಲಿ ಪುಂಬೀಜಗಳು ಹೊರಬರುವ ಬದಲು ಮೂತ್ರಾಶಯಕ್ಕೆ ಹಿಂಬದಿಗೆ ಹೋಗಿಬಿಡುತ್ತದೆ. ಮೂತ್ರದಿಂದ ಅವನ್ನು ಬೇರ್ಪಡಿಸಿ ಸಂಸ್ಕರಿಸಿ ತೆಗೆಯಲಾಗುತ್ತದೆ.

ಇನ್ನೂ ಕೆಲವು ಸಂದರ್ಭಗಳಲ್ಲಿ ವೃಷಣಗಳಲ್ಲಿ ಪುಂಬೀಜವಿದ್ದರೂ ಅವು ಹೊರಗಡೆ ಬರಲಾಗುವುದಿಲ್ಲ. ಏಕೆಂದರೆ ಹೊರಗಡೆ ಬರಲು ತಡೆಗೋಡೆ ಬರಲಾಗುವುದಿಲ್ಲ. ಏಕೆಂದರೆ ಹೊರಗಡೆ ಬರಲು ತಡೆಗೊಡೆ ತರಹ ಒಳಗಡೆ ಅಡಚಣೆ ಇರುತ್ತದೆ. ಆಗ ಪುಂಬೀಜಗಳನ್ನು ಅವು ಇದ್ದ ಜಾಗಕ್ಕೆ ಸೂಜಿಯನ್ನು ಹಾಕಿ ಹೀರಿ ತೆಗೆಯುವ PESA ಸಣ್ಣದಾಗಿ ಕೊಯ್ದು ಪುಂಬೀಜ ಸಂಗ್ರಹಿಸುವ TESA, TESA ಹಾಗೂ ಸೂಕ್ಷ್ಮದರ್ಶಕ ಸಹಾಯದಿಂದ ಸಣ್ಣ ಶಸ್ತ್ರಚಿಕಿತ್ಸೆ ಮಾಡಿ ತೆಗೆಯುವ MESA ಮಾಡಿ ಪುಂಬೀಜಗಳನ್ನು ಸಂಗ್ರಹಿಸಲಾಗುತ್ತದೆ. ಇತಂಹ ಎಲ್ಲ ಕಷ್ಟಕರವಾದ ಸನ್ನಿವೇಶಗಳಿಗೆಲ್ಲಾ ಉತ್ತರ ICSI.

## ಡಾ ಎಚ್ ಗಿರಿಜಮ್ಮ ಸಂಸ್ಮರಣ ಗ್ರಂಥಕ್ಕೆ ಲೇಖನಗಳ ಆಹ್ವಾನ

**ಕನ್ನಡ ನಾಡಿನ ಪ್ರಸಿದ್ಧ ಸ್ತ್ರೀ ರೋಗ ತಜ್ಞೆ ಮತ್ತು ಸಾಹಿತಿ ಡಾ ಎಚ್ ಗಿರಿಜಮ್ಮ ನಮ್ಮನ್ನಗಲಿ ಎಂಟು ತಿಂಗಳಾಗಿವೆ. ಅವರ ನೆನಪಿನಲ್ಲಿ ಡಾ ಎಚ್ ಗಿರಿಜಮ್ಮ ಸ್ನೇಹ ಬಳಗದಿಂದ ಡಾ ಎಚ್ ಗಿರಿಜಮ್ಮ ಸಂಸ್ಮರಣ ಗ್ರಂಥ ಪ್ರಕಟಿಸಬೇಕೆಂದು ಆಯೋಜಿಸಿದೆ. ಆದುದರಿಂದ ಡಾ ಗಿರಿಜಮ್ಮನವರ ಒಡನಾಟದಲ್ಲಿರುವವರು ಅವರ ಕುರಿತು ಎರಡು ಪುಟಗಳ ಲೇಖನವನ್ನು ಬರೆದುಕೊಡಬೇಕಾಗಿ ಮನವಿ. ಅವರ ಕಥೆ-ಕಾದಂಬರಿ-ಆರೋಗ್ಯ ಸಾಹಿತ್ಯದ ಕುರಿತು ಲೇಖನವನ್ನು ಬರೆದು ಕಳಿಸಬಹುದು. ಡಾ ಗಿರಿಜಮ್ಮನವರೊಂದಿಗೆ ನೀವಿರುವ ಅಥವಾ ಅವರು ಭಾಗವಹಿಸಿದ ಸಮಾರಂಭದ ಚಿತ್ರವಿದ್ದರೆ ಕಳಿಸಿಕೊಡಿ. ಈ ಗ್ರಂಥದ ಪ್ರಧಾನ ಸಂಪಾದಕರಾಗಿ ಡಾ ಸಿ ಆರ್ ಚಂದ್ರಶೇಖರ್, ಸಂಪಾದಕರಾಗಿ ಡಾ ವಸುಂಧರಾ ಭೂಪತಿ ಹಾಗೂ ಆರ್. ಪೂರ್ಣಿಮಾ ಅವರು ಕಾರ್ಯ ನಿರ್ವಹಿಸುವರು. ಲೇಖನಗಳನ್ನು ಮೇ 15 ರೊಳಗೆ ಈ ಕೆಳಗಿನ ವಿಳಾಸಕ್ಕೆ ನುಡಿ ತಂತ್ರಾಂಶದಲ್ಲಿ ಇ ಮೇಲ್ ಮೂಲಕ ಕಳಿಸಬೇಕಾಗಿ ಕೋರಿಕೆ**

ಡಾ ವಸುಂಧರಾ ಭೂಪತಿ
222, 2ನೇ ಇ ಕ್ರಾಸ್, 3ನೇ ಬ್ಲಾಕ್
3ನೇ ಸ್ಟೇಜ್, ಬಸವೇಶ್ವರ ನಗರ, ಬೆಂಗಳೂರು 560079, 9986840477
E-Mail: bhupathivasundhara@gmail.com



**ಡಾ ಬಿ.ಸದಾನಂದ ನಾಯ್ಕ್**
ಹಿರಿಯ ವೈದ್ಯಕೀಯ ತಜ್ಞರು, ಆಳ್ವಾಸ್ ಆಸ್ಪತ್ರೆ, ಮೂಡಬಿದರೆ
ದ.ಕ. ಕರ್ನಾಟಕ. 9845051005.
E-Mail: adanandanaik2@gmail.com

ಅಕ್ಷರ ಶ್ರದ್ಧಾಂಜಲಿ

# ವೈದ್ಯ ಸಮುದಾಯಕ್ಕೆ ಪ್ರಾತಃಸ್ಮರಣೀಯರಾದ ದಿ. ಜಸ್ಟಿಸ್ ಲಹೋಟಿ

ಭಾರತದ ಸುಪ್ರೀಂ ಕೋರ್ಟಿನ ನಿವೃತ್ತ ಮುಖ್ಯ ನ್ಯಾಯಾಧೀಶರಾದ ಜಸ್ಟಿಸ್ ರಮೇಶ್ ಚಂದ್ರ ಲಹೋಟಿಯವರು ದಿನಾಂಕ 23 ಮಾರ್ಚ್ 2022 ರಂದು ತಮ್ಮ 82 ರ ಇಳಿ ವಯಸ್ಸಿನಲ್ಲಿ ಸ್ವರ್ಗಸ್ಥರಾದರು. ಭಾರತೀಯ ವೈದ್ಯ ಸಮುದಾಯದ ಆಪದ್ಬಾಂಧವರಾಗಿದ್ದ ನ್ಯಾಯಾಧೀಶ ಲಹೋಟಿಯವರ ಮರಣ ನಮ್ಮೆಲ್ಲರಿಗೂ ತುಂಬಲಾರದ ನಷ್ಟ.

ಸುಮಾರು ಎರಡು ದಶಕಗಳ ಹಿಂದಿನ ಮಾತು, ಅಂದಿನ ದಿನಗಳಲ್ಲಿ ಭಾರತದಲ್ಲಿ ಯಾವುದೇ ರೋಗಿ ಮರಣ ಹೊಂದಿದಾಗ , ದುಃಖತಪ್ತ ಸಂಬಂಧಿಕರು ಕ್ರಿಮಿನಲ್ ಮೊಕದ್ದಮೆ ಹೂಡಿ , ವೈದ್ಯರುಗಳನ್ನು ಜೈಲಿಗಟ್ಟಲು ಪ್ರಯತ್ನಿಸುವ ಪರಿಪಾಠ ಆರಂಭವಾಗಿತ್ತು. ವೈದ್ಯ ಪ್ರಪಂಚದ ಮೇಲೆ ಜೈಲು ಪಾಲಾಗುವ ದುರ್ವಿಧಿಯ ಕಾರ್ಮೋಡ ಕವಿದಿತ್ತು . ಜೀವನ್ಮರಣ ಪರಿಸ್ಥಿತಿಯಲ್ಲಿ ಒದ್ದಾಡುತ್ತಿರುವ ರೋಗಿಗಳ ಪ್ರಾಣ ರಕ್ಷಣೆಯ ಜೊತೆಗೆ ತಮ್ಮ ಜೀವವನ್ನು ರಕ್ಷಿಸುವ ಅನಿವಾರ್ಯತೆ ವೈದ್ಯರಿಗೆ ಎದುರಾಗಿತ್ತು. ರೋಗಿಗಳು ಮರಣ ಹೊಂದಿದರೆ ಜೈಲುಪಾಲಾಗುವ ಭಯ,ಅವರ ನೆತ್ತಿಯ ಮೇಲೆ ತೂಗು ಕತ್ತಿಯ ಹಾಗೆ ಸದಾ ಇರುತ್ತಿತ್ತು.



ಇಂತಹ, ವಿಷಮ ಪರಿಸ್ಥಿತಿಯಲ್ಲಿ ಭಾರತದ ವೈದ್ಯರನ್ನು ಕೈ ಹಿಡಿದು , ಅಭಯ ನೀಡಿದ ಮಹಾನುಭಾವರೇ ಜಸ್ಟಿಸ್ ಲಹೋಟಿ. 2004 ರಲ್ಲಿ ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿ , ಓರ್ವ ಕ್ಯಾನ್ಸರ್ ರೋಗಿಯು ಮರಣ ಹೊಂದಿದ ಕ್ರಿಮಿನಲ್ ಪ್ರಕರಣದಲ್ಲಿ ಡಾ. ಜೇಕಬ್ ರನ್ನು ಜೈಲಿಗಟ್ಟದಂತೆ ಪಂಜಾಬ್ ಸರಕಾರವನ್ನು ತಡೆದಷ್ಟೇ ಅಲ್ಲ , ಸಮಸ್ತ ಭಾರತೀಯ ವೈದ್ಯರಿಗೆ ಹಿತ ರಕ್ಷಣೆ ಕಾಯುವಂತಹ ಐತಿಹಾಸಿಕ ತೀರ್ಪು ನೀಡಿದ್ದರು. "ವೈದ್ಯರ ಮೇಲೆ ರೋಗಿಗಳ ಸಂಬಂಧಿಗಳು ದೂರು ನೀಡಿದಾಗ , ತಕ್ಷಣ ಕ್ರಿಮಿನಲ್ ಮೊಕದ್ದಮೆ ಹೂಡುವಂತಿಲ್ಲ. ಮೊದಲು ವೈದ್ಯರಿಂದ ದೊಡ್ಡ ರೀತಿಯ ಪ್ರಮಾದವಾಗಿದೆಯಾ ಎಂದು ಸೂಕ್ತ ತಜ್ಞ ವೈದ್ಯಕೀಯ ಸಲಹೆ ಪಡೆಯ ತಕ್ಕದ್ದು" ಎಂದು ಫರ್ಮಾನು ಹೊರಡಿಸಿದರು.

ವೈದ್ಯಕೀಯ ಶಾಸ್ತ್ರ ಇತರ ವಿಜ್ಞಾನ ಶಾಸ್ತ್ರಗಳಿಗಿಂತ ಭಿನ್ನವಾಗಿದ್ದು ,ಕೆಲವೊಮ್ಮೆ ಎಷ್ಟೇ ಪ್ರಯತ್ನ ಪಟ್ಟರೂ ರೋಗಿಯ ಪ್ರಾಣ ಉಳಿಸಲು ಅಸಾಧ್ಯ ವಾಗುತ್ತದೆ. ಯಾವ ವೈದ್ಯನೂ ಉದ್ದೇಶ ಪೂರ್ವಕ ರೋಗಿಗೆ ಪ್ರಾಣ ಹಾನಿ ಮಾಡಿ, ತನ್ನ ಸ್ಥಾನ ಮಾನ ಹಾಳು ಮಾಡಲು ಬಯಸುವುದಿಲ್ಲ. ಅನವಶ್ಯಕ ಕ್ರಿಮಿನಲ್ ಮೊಕದ್ದಮೆ ಹೂಡಿದಾಗ , ವೈದ್ಯರುಗಳು ಭಯ ಭೀತರಾಗಿ ರೋಗಿಯ ಪ್ರಾಣ ಉಳಿಸಲು ಪ್ರಯತ್ನಿಸದೆ ,ರಕ್ಷಣಾತ್ಮಕ ಚಿಕಿತ್ಸೆ ನೀಡಿದರೆ ರೋಗಿಗಳಿಗೆ ಮತ್ತು ಸಮಾಜಕ್ಕೇ ಕೇಡು ಎಂದು ತೀರ್ಪು ನೀಡಿದರು.

ಇಂದಿನ ದಿನಗಳಲ್ಲಿ ವೈದ್ಯರುಗಳು ಜೈಲು ಪಾಲಾಗುವ ಭಯವಿಲ್ಲದೆ ನೆಮ್ಮದಿಯಲ್ಲಿ ವೈದ್ಯಕೀಯ ಸೇವೆ ಸಲ್ಲಿಸುತ್ತಿದ್ದರೆ , ಜಸ್ಟಿಸ್ ಲಹೋಟಿಯವರ ಪಾತ್ರ ಬಲು ದೊಡ್ಡದು. ಭಾರತೀಯ ವೈದ್ಯ ಸಮುದಾಯ ಇವರಿಗೆ ಸದಾ ಚಿರ ಋಣಿಯಾಗಿರಬೇಕು ಮತ್ತು ಅವರ ಸದ್ಗತಿಗೆ ನಾವೆಲ್ಲರೂ ಪ್ರಾರ್ಥಿಸೋಣ.

ವ್ಯಕ್ತಿ ವಿಷಯ




**ಡಾ. ದಿವ್ಯಾ ಕೆ ಎನ್**
ವಿಭಾಗೀಯ ಸಂಪಾದಕರು ಮತ್ತು ಲೇಖಕರು
ಬಳ್ಳಾರಿ

# ಪ್ರಪಂಚದ ಪ್ರಥಮ ಮಹಿಳಾ ಅರಿವಳಿಕೆ ತಜ್ಞೆ ಡಾ. ರೂಪಾಬಾಯಿ ಫರ್ದೂನ್‌ಜಿ

ಅದು ಹತ್ತೊಂಭತ್ತನೇ ಶತಮಾನದ ಬ್ರಿಟೀಷ್ ಭಾರತ. ಮಹಿಳೆಯಿನ್ನೂ ಮುಚ್ಚಿದ ಬಾಗಿಲು ತೆರೆದು ಹೊರಗಡಿಯಿಡದ ಕಾಲ. ತಾಯ್ತನ ಮನೆ ವಾರ್ತೆಗಳಲ್ಲಿ ಕಳೆದು ಹೋಗುವ ಜೀವನ. ಹೆರಿಗೆ ಸುಸೂತ್ರವಾಗಿಆಗದಿದ್ದ ಸಂದರ್ಭದಲ್ಲಿಯೂ, ಪುರುಷ ವೈದ್ಯನಕೈಯಲ್ಲಿಚಿಕಿತ್ಸೆ ಪಡೆಯಲು ನಿರಾಕರಿಸುವ ಹೆಣ್ಮಕ್ಕಳು. ನೋವುಂಡು ಪ್ರಾಣ ಬಿಡಲೂ ಸಿದ್ಧರಿದ್ದರು; ಗಂಡಸಿನ ಮುಂದೆ ಸಮಸ್ಯೆ ಹೇಳಿಕೊಳ್ಳಲು ಸಿದ್ಧರಿರಲಿಲ್ಲ. ವೈದ್ಯರಂಗದ ಸವಲತ್ತುಗಳಿನ್ನೂ ಮಹಿಳೆಯನ್ನು ತಲುಪಿರಲಿಲ್ಲ. ಹೆರಿಗೆಯಲ್ಲಿತಾಯಿ ಮಗುವಿನ ಸಾವು ಸಾಮಾನ್ಯವಾಗಿತ್ತು. ಇಂತಹ ಹೃದಯ ವಿದ್ರಾವಕ ಸಾವುಗಳನ್ನು ನೋಡುತ್ತಾ ಬೆಳೆದ ರೂಪಾಬಾಯಿಯ ಮನದಲ್ಲಿತಾನು ವೈದ್ಯೆಯಾಗಿ ಮಹಿಳೆಯರ ಸೇವೆ ಮಾಡಬೇಕೆಂಬ ಬಯಕೆಚಿಗುರೊಡೆದಿತ್ತು. ಎಲ್ಲಾ ಅಡೆತಡೆಗಳನ್ನೂ ಮೀರಿ ಹೆಮ್ಮರವಾಗಿ ಬೆಳೆಯಲಿತ್ತು.

ಮಹಿಳಾ ವಿದ್ಯಾಭ್ಯಾಸವು ವಿವಾದದ ವಸ್ತುವಾಗಿದ್ದ ದಿನಗಳವು. ಮಹಿಳಾ ಶಾಲೆಗಳು ಆರಂಭವಾಗಿದ್ದರೂ, ಅದರಲ್ಲಿಕಲಿಯುತ್ತಿದ್ದ ಹುಡುಗಿಯರು ಬೆರಳೆಣಿಕೆಯಷ್ಟು. ವಿಶ್ವವಿದ್ಯಾಲಯಗಳಿಗೆ ಮಹಿಳೆಯರಿಗೆ ಪ್ರವೇಶವಿರಲಿಲ್ಲ. ಅಂತಹ ಪರಿಸ್ಥಿತಿಯಲ್ಲೂ ರೂಪಾಬಾಯಿಯಲ್ಲಿ ಕನಸುಗಳಿದ್ದವು. ಅವುಗಳನ್ನು ಸಾಕಾರಗೊಳಿಸುವ ಮನೋಬಲವಿತ್ತು. ಹೈದರಾಬಾದ್ ಮೆಡಿಕಲ್‌ಕಾಲೇಜ್‌ನ ಪ್ರಿನ್ಸಿಪಾಲ್‌ಆಗಿದ್ದ ಸರ್ಜನ್ ಮೇಜರ್‌ಎಡ್ವರ್ಡ್ ಲಾರಿಯಒತ್ತಾಸೆಇತ್ತು. ಇನ್ನೂ ನಾಲ್ಕು ಜನ ಹೆಣ್ಮಕ್ಕಳೊಡನೆ 1885ರಲ್ಲಿ ಮೆಡಿಕಲ್‌ಕಾಲೇಜಿನ ಮೆಟ್ಟಲು ಹತ್ತಿಯೇ ಬಿಟ್ಟಳು! ಅಸಾಧ್ಯವನ್ನು ಸಾಧ್ಯವಾಗಿಸುವ ವಿಶ್ವಾಸದಿಂದ ಮುನ್ನಡಿಯಿಟ್ಟಳು.

ಹೆಣ್ಣು ವೈದ್ಯ ವೃತ್ತಿಗೆಕಾಲಿಟ್ಟಾಗ ರತ್ನಗಂಬಳಿಯ ಸ್ವಾಗತವೇನೂ ಕಾದಿರಲಿಲ್ಲ. ಹೊತ್ತಿಲ್ಲದ ಹೊತ್ತಿನಲ್ಲಿ ಜಾಗವಲ್ಲದ ಜಾಗದಲ್ಲಿ ಎದುರಾಗುವ ಎಮರ್ಜೆನ್ಸಿಯನ್ನು ಹೆಣ್ಣು ನಿಭಾಯಿಸಬಲ್ಲಳೇ? ರಕ್ತ, ಕೀವು, ರೋಗರುಜಿನ, ನೋವು ಸಂಕಟಗಳನ್ನು ಸಹಿಸಬಲ್ಲಳೇ? ತಕ್ಷಣವೇ ಕಾರ್ಯಪ್ರವೃತ್ತಳಾಗುವ, ನಿರ್ಧಾರಗಳನ್ನು ಕೈಗೊಳ್ಳುವ ಛಾತಿಇದೆಯೇ? ಎಂಬ ಸಂಶಯ ವ್ಯಕ್ತ ಪಡಿಸುತ್ತಾ ವಿರೋಧಿಸುವ ನೂರು ಮಂದಿಗಳಿದ್ದರು. ಅವರಾರಿಗೂ ಸೊಪ್ಪು ಹಾಕದೇ ಮುನ್ನುಗ್ಗುವ ಅನಿವಾರ್ಯತೆಇತ್ತು. ಇಂಗ್ಲೀಷ್‌ನಲ್ಲಿ ನಡೆಯುವ ತರಗತಿಗಳು ಕಬ್ಬಿಣದ ಕಡಲೆ ಎನಿಸಿದ್ದವು. ಉರ್ದುವಿನ ಭಾಷಾಂತರಿಗಳ ನೆರವು ಪಡೆಯಬೇಕಿತ್ತು. ವೈದ್ಯಶಾಸ್ತ್ರದತುದಿ ಮೊದಲಿಲ್ಲದ ವಿಷಯಗಳನ್ನೆಲ್ಲಾ ಅರೆದುಕುಡಿಯಬೇಕಿತ್ತು. ರೂಪಾಬಾಯಿಎಲ್ಲಾ ಕಷ್ಟಗಳನ್ನೂ ಮೆಟ್ಟಿನಿಂತಳು.



ಇಂದಿನ ಮೆಡಿಕಲ್ ಪದವಿಗೆ ಪರ್ಯಾಯವಾದ ಹಕೀಮ ಪದವಿಯನ್ನು ಗಳಿಸಿಕೊಂಡಳು.



ಅನಸ್ತೇಷಿಯಾವಿನ್ನೂ ಬೇರೆಯದೇ ವಿಭಾಗವಾಗಿ ಹುಟ್ಟಿರದ ಸಮಯ. ಸರ್ಜನ್ ತಾನೇಅನಸ್ತೇಷಿಯಾವನ್ನುಕೊಟ್ಟು ಪ್ರಜ್ಞೆತಪ್ಪಿದರೋಗಿಯನ್ನು ನರ್ಸಗಳ ಕೈಗೊಪ್ಪಿಸುತ್ತಿದ್ದರು. ರೂಪಾಳಿಗಾದರೋ ಇದರಲ್ಲಿ ವಿಶೇಷ ಆಸಕ್ತಿ. ಎಡ್ವರ್ಡ್ ಲಾರಿಯ ಮಾರ್ಗದರ್ಶನದಲ್ಲಿ ಪ್ರಾಣಿಗಳ ಮೇಲೆ ಕ್ಲೋರೋಫಾರಂಅನ್ನು ಪ್ರಯೋಗಿಸಿ ಅಭ್ಯಸಿಸುತ್ತಿದ್ದರು. ಹೈದರಾಬಾದ್‌ನಕ್ಲೋರೋಫಾರಂ ಕಮಿಷನ್‌ಗಳು ರೂಪಾಳ ಆಸಕ್ತಿಯನ್ನು ಹೆಚ್ಚಿಸಿದ್ದವು. ಅನಸ್ತೇಷಿಯಾದಲ್ಲಿ ವಿಶೇಷ ಪರಿಣತಿ ಪಡೆಯುವ ಬಯಕೆ ಉದಯಿಸಿತ್ತು. ಬಯಕೆಯನ್ನು ಕಾರ್ಯಗತಗೊಳಿಸುವ ಇಚ್ಛಾಶಕ್ತಿ ಜೊತೆಯಲ್ಲಿತ್ತು. 1909ರಲ್ಲಿ ಎಡಿನ್‌ಬರ್ಗಗೆ ಪ್ರಯಾಣ ಬೆಳೆಸಿಬಿಟ್ಟಳು. ವಿದೇಶಯಾತ್ರೆ ಸಂಪ್ರದಾಯಸ್ಥ ಪುರುಷರಿಗೇಕಷ್ಟಸಾಧ್ಯವಾದ ದಿನಗಳಲ್ಲಿ ಮಹಿಳೆಯೊಬ್ಬಳು ಸಮುದ್ರದಾಟುವ ಸಾಹಸ ಮಾಡಿದುದು ನುರಿತ ವೈದ್ಯೆಯಾಗಿಜನಸೇವೆ ಮಾಡಬೇಕೆಂಬ ಆಕೆಯಅಪಾರ ಕಾಳಜಿಯನ್ನು ತೋರಿಸುತ್ತದೆ. ಈ ಪ್ರವಾಸದಲ್ಲಿ ಸೋದರಿ ಅನಿಬೆಸಂಟಳ ಜೊತೆ ಸಿಕ್ಕಿದ್ದು ರೂಪಾಳ ಪಾಲಿಗೆ ವರವಾಗಿ ಪರಿಣಮಿಸಿತು. ತಮ್ಮಆಸಕ್ತಿಯಕ್ಷೇತ್ರದಲ್ಲಿ ಮಹತ್ತರವಾದದ್ದನ್ನು ಸಾಧಿಸುವಛಲವಿದ್ದಇಬ್ಬರು ಮಹಿಳೆಯರು ಪರಸ್ಪರರಿಂದ ಸ್ಫೂರ್ತಿ ಪಡೆದರು. ಅವರಿಂದ ಪಡೆದ ಪರಿಚಯ ಪತ್ರ ಹೊರದೇಶದಲ್ಲಿ ನೆಲೆಸಲು ರೂಪಾಳಿಗೆ ಸಹಾಯವಾಯಿತು. ಗೊತ್ತಿರದ ನಾಡಿನಲ್ಲಿಏಕಾಂಗಿಯಾಗಿ ವಿಷಯದ ಪರಿಣತಿಯನ್ನೂಅನುಭವವನ್ನೂ ಪಡೆದುಕೊಂಡಳು. ಅಲ್ಲಿ ಅವಳು ಗಳಿಸಿಕೊಂಡಿದ್ದು ಫಿಸಿಕ್ಸ್ ಮತ್ತು ಕೆಮೆಸ್ಟ್ರಿಯ ಡಿಪ್ಲಮೊ. ಅವಳ ವಿಷಯ ಪರಿಣತಿಯನ್ನೂ, ರೋಗಿಗಳ ಸೇವೆಯಲ್ಲಿದ್ದ ಕಳಕಳಿಯನ್ನೂ ಗಮನಿಸಿದ ಎಡಿನ್‌ಬರ್ಗ ಮೆಡಿಕಲ್ ಸ್ಕೂಲ್‌ನ ಮುಖ್ಯಸ್ಥರು ಹೈದ್ರಾಬಾದನಆಸ್ಪತ್ರೆಯ ಆಡಳಿತಗಾರರಿಗೆ ಅವಳ ಸೇವೆಯಅಗತ್ಯದ ಮಹತ್ವವನ್ನು ವಿವರಿಸಿ, ಅವಳನ್ನು ಎಡಿನ್‌ಬರ್ಗನಲ್ಲಿಯೇಉಳಿಸಬೇಕೆಂದು ಪತ್ರ ಬರೆದು ವಿನಂತಿಸಿದ್ದರು. ತನ್ನದೇಶದಜನರ ಸೇವೆಯೇಗುರಿಯಾಗಿದ್ದರೂಪಾ ಭಾರತಕ್ಕೆ ಮರಳಿದಳು. ಅನಸ್ತೇಷಿಯಾಡಿಗ್ರಿಯಜನನದ ಪೂರ್ವದಲ್ಲೇ ಪ್ರಪಂಚದ ಪ್ರಪ್ರಥಮ ಮಹಿಳಾ ಅನಸ್ತಟಿಸ್ಟ್ ಎಂಬ ಖ್ಯಾತಿಯನ್ನು ಗಳಿಸಿದಳು. ಅಮೇರಿಕ, ಯುರೋಪ್‌ನ ಅನೇಕ ಮೆಡಿಕಲ್ ಸ್ಕೂಲ್‌ಗಳಲ್ಲಿ ಮಹಿಳೆ ಕಾಲೂರಿರದಿದ್ದ ಕಾಲಕ್ಕೇ ಬ್ರಿಟೀಷ್ ದಬ್ಬಾಳಿಕೆಯ ಬಡ ಭಾರತದ ಮಹಿಳೆಯೊಬ್ಬಳು ಇತಿಹಾಸ ಬರೆದಿದ್ದಳು.

ಭಾರತಕ್ಕೆ ಮರಳಿದ ನಂತರ ಹೈದರಾಬಾದ್‌ನ ಸುಲ್ತಾನ್ ಬಜಾರ್‌ಆಸ್ಪತ್ರೆಯಲ್ಲಿ ಅರಿವಳಿಕೆ ಶಾಸ್ತ್ರದ ವಿಭಾಗವನ್ನು ಆರಂಭಿಸಿದಳು. ಮುಂದೆಅಮೇರಿಕದ ಪ್ರಸಿದ್ಧ ಜಾನ್ ಹಪ್‌ಕಿನ್ಸ್‌ಕಾಲೇಜಿನಲ್ಲಿ ಹೆಚ್ಚಿನ ಪದವಿಯನ್ನೂ ಗಳಿಸಿದಳು. ಹೈದರಾಬಾದ್‌ನಎರಡನೇಕ್ಲೋರೋಫಾರಂಕಮಿಷನ್‌ನ ಯಶಸ್ಸಿನಲ್ಲಿ ರೂಪಾಳ ಪಾತ್ರದೊಡ್ಡದು. ರೋಗಿಗಳ ಸೇವೆಯನ್ನೇತನ್ನಜೀವನದ ಗುರಿಯಾಗಿಸಿದಳು. ಮಹಿಳೆ ವೈದ್ಯೆಯಾಗಲು ಅಸಮರ್ಥಳು ಎಂದು ಹೀಗಳೆದವರೆಲ್ಲರಿಗೂ ತನ್ನಕಾರ್ಯಕ್ಷಮತೆಯಿಂದಲೇ ಉತ್ತರಿಸಿದಳು. ತನ್ನದಕ್ಷತೆಯಿಂದಾಗಿ ಪುರುಷ ಪ್ರಧಾನ ವ್ಯವಸ್ಥೆಯಲ್ಲೂ ಸೂಪರಿಂಟೆಂಡೆಂಟ್ ಸ್ಥಾನವನ್ನು ಅಲಂಕರಿಸಿದಳು.

ಇಂದು ವೈದ್ಯಕೀಯಕ್ಷೇತ್ರದಲ್ಲಿ ಮಹಿಳೆಯ ಪಾತ್ರದೊಡ್ಡದು. ತನಗೆ ಸಹಜವಾಗಿರುವಕರುಣೆ ಸಹನೆಗಳಿಂದ ರೋಗಿಯನ್ನುಗುಣಪಡಿಸುವಲ್ಲಿ ಮಹಿಳೆ ಮಹತ್ತರ ಪಾತ್ರವನ್ನು ವಹಿಸುತ್ತಾಳೆ. ಹೆಜ್ಜೆ ಮೂಡದದಾರಿಯಲ್ಲಿ ಕೈಮರಗಳ ನೆರವಿಲ್ಲದೇ ನಡೆದ ಡಾ. ರೂಪಾಬಾಯಿ ಫರ್ದೂನ್‌ಜಿಯಂತಹ ಹೆಣ್ಣುಮಕ್ಕಳು ವೈದ್ಯಕೀಯ ಸಾಧನೆಯನ್ನಷ್ಟೇ ಅಲ್ಲದೇ ಮಹಿಳಾ ವಿಮೋಚನೆಯ ರುವಾರಿಗಳಾಗಿದ್ದಾರೆ. ಮುಚ್ಚಿದ ಬಾಗಿಲನ್ನುತೆರೆಯಲುಅವರು ಪಟ್ಟ ಶ್ರಮದಅರಿವೂ, ಹೆಣ್ಣೆಂದು ಹೀಗಳೆಯುವವರ ವಿರುದ್ಧ ಹೋರಾಡುತ್ತಲೇಅವರು ಮಾಡಿದ ಸಾಧನೆಯ ಸ್ಮರಣೆಯೂ ನಮ್ಮನ್ನು ಇಂದಿಗೂ ಪ್ರೇರೇಪಿಸುತ್ತವೆ. ಎಲೆಮರೆಯ ಕಾಯಿಯಂತಿರುವ ರೂಪಾಬಾಯಿಯ ಸಾರ್ಥಕ ಜೀವನದ ಮೆಲುಕು ವೈದ್ಯಕೀಯ ಕ್ಷೇತ್ರದಲ್ಲಿ ದುಡಿಯುವ, ರೋಗಿಗಳ ಹಿತವನ್ನು ಬಯಸುವ ಎಲ್ಲರ ಆಶಯವನ್ನು ಅರ್ಥಪೂರ್ಣವಾಗಿಸುತ್ತದೆ.



ಡಾ. ನಾ. ಸೋಮೇಶ್ವರ
ವಿಭಾಗೀಯ ಸಂಪಾದಕರು ಮತ್ತು ಲೇಖಕರು
ಬೆಂಗಳೂರು

ವೈದ್ಯ ಲೋಕದ ವಿಸ್ಮಯಗಳು...


# ಚೇಂಬರ್ಲೆನ್ ಕುಂಟುಂಬ ಮತ್ತು ಪ್ರಸವ ಇಕ್ಕಳದ ಕ(ವ್ಯ)ಥೆ

ಜೀವಜಗತ್ತಿನಲ್ಲಿ ಪ್ರಸವವು ಸಹಜವಾಗಿ ನಡೆಯುತ್ತದೆ. ಪ್ರಸವವನ್ನು ನಡೆಸಲು ಯಾವುದೇ ಸೂಲಗಿತ್ತಿಯರು ಇಲ್ಲವೇ ವೈದ್ಯರು ಇರುವುದಿಲ್ಲ. ಇದಕ್ಕೆ ಬಹುಶಃ ಮನುಷ್ಯ ಮಾತ್ರ ವಿನಾಯತಿ ಎಂದು ಕಾಣುತ್ತದೆ. 'ಪ್ರಸವ ಎಂದರೆ ಅದು ಹೆಣ್ಣಿಗೆ ಒಂದು ಮರು ಹುಟ್ಟು' ಎನ್ನುವ ಮಾತು ಇಂದಿಗೂ ಪ್ರಚಲಿತದಲ್ಲಿದೆ. ಸಹಜ ಪ್ರಸವದಲ್ಲಿ ಮೊದಲು ಶಿಶುವಿನ ತಲೆ ಹೊರಗೆ ಬರುತ್ತದೆ. ನಂತರ ಕುತ್ತಿಗೆ, ಭುಜ, ಒಡಲು ಹಾಗೂ ಕಾಲುಗಳು ಹೊರ ಬರುತ್ತವೆ. ಕೆಲವು ಸಲ ಶಿಶುವಿನ ತಲೆ ಯುಜನನ ಮಾರ್ಗದಲ್ಲಿ ಸಿಕ್ಕಿಹಾಕಿಕೊಳ್ಳುತ್ತದೆ. ಹೀಗಾದಾಗ ಮಗುವಿನ ಉಸಿರಾಟಕ್ಕೆ ತೊಂದರೆಯಾಗಿ, ಸಾಯುವ ಸಾಧ್ಯತೆಯಿರುತ್ತದೆ. ಆದರೆ ತಾಯಿ ಮತ್ತು ಮಗುವಿಗೆ ತೊಂದರೆಯಾಗದಂತೆ, ಶಿಶುವನ್ನು ಸುರಕ್ಷಿತವಾಗಿ ಹೇಗೆ ಹೊರತೆಗೆಯಬೇಕು ಎಂಬುದು ಯಾರಿಗೂ ತಿಳಿದಿರಲಿಲ್ಲ. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಇಂಗ್ಲಂಡಿನ ಚೇಂಬರ್ಲೆನ್ ಕುಟುಂಬದವರು ರೂಪಿಸಿದ ಪ್ರಸವ ಇಕ್ಕಳ ಅಥವ ಆಬ್ಸೆಸ್ಟ್ರಿಕ್ ಫಾರ್ಸೆಪ್ಸ್, ಕ್ಲಿಷ್ಟ ಹೆರಿಗೆಗಳನ್ನು ಸರಾಗವಾಗಿ ನಡೆಸಲು ನೆರವಾಯಿತು.

ಫ್ರಾನ್ಸ್ ದೇಶ. ವಿಲಿಯಂ ಚೇಂಬರ್ಲೆನ್ ಮತ್ತು ಅವನ ಮಡದಿ ಜೆನೆವೀವ್ ವಿಗ್ನನ್. ಇವರುಪ್ರಾಟೆಸ್ಟಾಂಟ್‌ಕ್ರೈಸ್ತರು. ಫ್ರಾನ್ಸಿನಲ್ಲಿಇವರ ಬದುಕುಅಸಹನೀಯವಾಯಿತು. 1560ರ ಆಸುಪಾಸಿನಲ್ಲಿ ತಮ್ಮ ಮಕ್ಕಳಾದ ಪೀಟರ್, ಸೈಮನ್ ಮತ್ತುಜೇನ ್ಜೊತೆಯಲ್ಲಿಇಂಗ್ಲಂಡಿಗೆಬಂದರು. ಇಂಗ್ಲಂಡಿನಲ್ಲಿ ನಾಲ್ಕನೆಯ ಮಗು ಹುಟ್ಟಿತು. ಅದಕ್ಕೂಪೀಟರ್ಎಂದೇ ನಾಮಕರಣವನ್ನು ಮಾಡಿದರು. ಮುಂದೆಇವರುಪೀಟರ್, ದಿ ಎಲ್ಡರ್‌ಮತ್ತುಪೀಟರ್ ದಿ ಯಂಗರ್ಎಂದು ಪ್ರಸಿದ್ಧರಾದರು.

ವಿಲಿಯಂ ಚೇಂಬರ್ಲೆನ್ ವೃತ್ತಿಯಿಂದಕ್ಷೌರಿಕ ಶಸ್ತ್ರವೈದ್ಯನಾಗಿದ್ದ (ಬಾರ್ಬರ್ ಸರ್ಜನ್). ಅಂದಿನ ದಿನಗಳಲ್ಲಿ ಔಷಧಗಳನ್ನು ನೀಡುವವರನ್ನು ಮಾತ್ರ ವೈದ್ಯರುಎಂದು ಪರಿಗಣಿಸಿ, ಅವರನ್ನುಗೌರವದಿಂದ'ಡಾಕ್ಟರ್' ಎಂದು ಸಂಬೋಧಿಸುತ್ತಿದ್ದರು. ಶಸ್ತ್ರವೈದ್ಯವನ್ನು ಮಾಡುವವ ರನ್ನುಡಾಕ್ಟರ್ಎಂದುಕರೆಯುತ್ತಿರಲಿಲ್ಲ. ಎಲ್ಲರನ್ನೂಕರೆಯುವ ಹಾಗೆ 'ಮಿಸ್ಟರ್'ಎಂದೇಕರೆಯುತ್ತಿದ್ದರು. ವಿಲಿಯಂ, ತನ್ನ ಮಕ್ಕಳಾದ ಹಿರಿಯ ಮತ್ತುಕಿರಿಯ ಪೀಟರ್ಇಬ್ಬರಿಗೂಕ್ಷೌರಿಕ ಶಸ್ತ್ರವೈದ್ಯವನ್ನೇ ಕಲಿಸಿದ. ಈ ಇಬ್ಬರು ಮಕ್ಕಳು ಶಸ್ತ್ರವೈದ್ಯಕೀಯದಜೊತೆಯಲ್ಲಿ ಪ್ರಸವವನ್ನು ಮಾಡಿಸುವ ಸೂಲಗಿತ್ತಿಯತರಬೇತಿಯನ್ನೂ ಪಡೆದರು.

ಹಿರಿಯ ಪೀಟರ್ ಲಂಡನ್ನಿನಲ್ಲಿತನ್ನ ವೃತ್ತಿಯನ್ನು ಆರಂಭಿಸಿದ.ಅತ್ಯಲ್ಪಕಾಲದಲ್ಲಿದೊಡ್ಡ ಹೆಸರನ್ನು ಗಳಿಸಿದ. ಇಂಗ್ಲಂಡಿನಅರಸ ಮೊದಲನೆಯಜೇಮ್ಸ್‌ನ ಮಡದಿ ಆ್ಯನ್ ಹಾಗೂ ಮೊದಲನೆಯಚಾರ್ಲ್ಸ್ ನ ಮಡದಿ ಹೆನ್ರಿಟ ಮೇರಿಯಅವರ ಖಾಸಗಿ ಸೂಲಗಿತ್ತಿಯಾದ. ಕಿರಿಯ ಪೀಟರ್ ಸಹ, 1600ರ ಆಸುಪಾಸಿನಲ್ಲಿ ಅಣ್ಣನಜೊತೆಗೂಡಿತಾನೂ ಸೂಲಗಿತ್ತಿಯಾದ.



ಪ್ರಸವ ಇಕ್ಕಳವನ್ನು ಹಿರಿಯ ಪೀಟರ್ ರೂಪಿಸಿದ ಎಂದೇಇತಿಹಾಸಕಾರರ ನಂಬಿಕೆ. ಆದರೆ ವಾಸ್ತವದಲ್ಲಿ ಹಿರಿಯ ಪೀಟರನೇಸ್ವಯಂ ರೂಪಿಸಿದ, ಎಂದು ರೂಪಿಸಿದ ಎನ್ನುವುದಕ್ಕೆಯಾವುದೇದಾಖಲೆಯಿಲ್ಲ. ಆದರೆ ಪ್ರಸವ ಇಕ್ಕಳವನ್ನು ಪರಿಣಾಮಕಾರಿಯಾಗಿ ಮೊದಲು ಬಳಸಿದವರು

ಹಿರಿಯ ಪೀಟರ್‌ಎನ್ನುವುದರಲ್ಲಿಯಾವುದೇಅನುಮಾನವಿಲ್ಲ.

ಅಂದಿನ ದಿನಗಳಲ್ಲಿ ಪೋಲಿಯೊಇಂಗ್ಲಂಡನ್ನುತೀವ್ರವಾಗಿಕಾಡುತ್ತಿತ್ತು. ಹಾಗಾಗಿ ಅನೇಕ ಮಹಿಳೆಯರ ಕಟಿಕುಹರವು (ಪೆಲ್ವಿಸ್) ವಿರೂಪಗೊಂಡು ಸಹಜ ಪ್ರಸವವುಅಸಾಧ್ಯವಾಗುತ್ತಿತ್ತು. ಅಂತಹ ಪ್ರಕರಣಗಳಲ್ಲಿ ಪೀಟರ್‌ದ್ವಯರುತಮ್ಮ ಇಕ್ಕಳದ ನೆರವಿನಿಂದ ಪ್ರಸವವವನ್ನು ಸರಾಗವಾಗಿ ಮಾಡುತ್ತಿದ್ದರು. ದುಬಾರಿ ಶುಲ್ಕವನ್ನು ವಿಧಿಸುತ್ತಿದ್ದರು. ಈ ಪೀಟರ್‌ದ್ವಯರುತಮ್ಮ ಇಕ್ಕಳದ ಗುಟ್ಟನ್ನುಯಾರಿಗೂ ಬಿಟ್ಟುಕೊಡಲಿಲ್ಲ. ಈ ಗುಟ್ಟನ್ನುಕಾಪಾಡಲುಅವರು ತೆಗೆದುಕೊಳ್ಳುತ್ತಿದ್ದ ಕ್ರಮಗಳನ್ನು ಕೇಳಿದರೆ ಇಂದಿಗೆ ನಮಗೆ ನಗು ಬರುತ್ತದೆ.



ಪೀಟರ್‌ದ್ವಯರುತಮ್ಮ ಇಕ್ಕಳವನ್ನು ನಾನಾ ಚಿತ್ತಾರಗಳಿಂದ ಕೂಡಿದಒಂದು ಬೃಹತ್ ಪೆಟ್ಟಿಗೆಯಲ್ಲಿಇಡುತ್ತಿದ್ದರು. ಇಬ್ಬರು ಬಹಳ ಕಷ್ಟಪಟ್ಟು ಆ ಪೆಟ್ಟಿಗೆಯನ್ನುಕುದುರೆಯಗಾಡಿಯಲ್ಲಿಡುತ್ತಿದ್ದರು. ಆ ಕುದುರೆಗಾಡಿಯು, ನೋವು ತಿನ್ನುತ್ತಾ ಮಲಗಿದ್ದಗರ್ಭವತಿಯ ಮನೆಗೆ ಹೋಗುತ್ತಿತ್ತು. ಇಬ್ಬರು ಪೀಟರುಗಳು ಬಹಳ ಕಷ್ಟಪಟ್ಟುಗಾಡಿಯಿಂದಪೆಟ್ಟಿಗೆಯನ್ನುಇಳಿಸುತ್ತಿದ್ದರು. ನೋಡುವವರಿಗೆ ಆ ಪೆಟ್ಟಿಗೆಯಲ್ಲಿಯಾವುದೋದೊಡ್ಡ, ಸಂಕೀರ್ಣ ಹಾಗೂ ನಾಜೂಕಾದಉಪಕರಣವಿರಬೇಕುಎಂದು ಭಾಸವಾಗುತ್ತಿತ್ತು. ಅಣ್ಣತಮ್ಮಂದಿರು ಹೆರಿಗೆಯಕೋಣೆಯಲ್ಲಿದ್ದಎಲ್ಲರನ್ನೂ ಹೊರಗೆ ಕಳುಹಿಸಿ ಚಿಲಕವನ್ನು ಹಾಕುತ್ತಿದ್ದರು. ಕಿಟಕಿಗಳನ್ನು ಸಂಪೂರ್ಣವಾಗಿ ಮುಚ್ಚಿಬಿಡುತ್ತಿದ್ದರು. ಗರ್ಭವತಿಯ ಕಣ್ಣುಗಳಿಗೆ ಬಟ್ಟೆಯನ್ನು ಬಿಗಿಯಾಗಿಕಟ್ಟುತ್ತಿದ್ದರು. ಆಕೆಯು ಇಕ್ಕಳವನ್ನು ನೋಡಿ, ಅದನ್ನುಯಾರಿಗೂ ಹೇಳಬಾರದು ಎನ್ನುವುದುಅವರಉದ್ದೇಶ. ಅಣ್ಣನುಪೆಟ್ಟಿಗೆಯಿಂದ ಇಕ್ಕಳವನ್ನು ತೆಗೆಯುತ್ತಿದ್ದ. ಲೋಹದಇಕ್ಕಳವನ್ನು ಬಳಸುವಾಗ ಬರುವ ಶಬ್ದವು ಹೊರಗೆ ಕೇಳಿಸಬಾರದು ಎಂದುತಮ್ಮನುಜೋರಾಗಿ'ಗಂಟೆ–ಜಾಗಟೆ'ಗಳನ್ನು ಬಾರಿಸುತ್ತಿದ್ದ. ಪ್ರಸವವಾದಕೂಡಲೇ ಇಕ್ಕಳವನ್ನು ಪೆಟ್ಟಿಗೆಯಲ್ಲಿಟ್ಟು, ಬೀಗ ಹಾಕಿ, ಸುರಕ್ಷಿತವಾಗಿ ಮನೆಗೆ ತೆಗೆದುಕೊಂಡು ಹೋಗುತ್ತಿದ್ದರು. ಈ ಚಾಣಾಕ್ಷ ಸೋದರರುತಮ್ಮ ಸಾಮರ್ಥ್ಯವನ್ನು ಜಾಹೀರಾತುಗಳ ಮೂಲಕ ಪ್ರಚಾರ ಮಾಡಿ, ಬೇಗ ಶ್ರೀಮಂತರಾದರು.

ಕಿರಿಯ ಪೀಟರಿಗೆಒಬ್ಬ ಮಗನು ಹುಟ್ಟಿದ. ಅವನಿಗೂ ಪೀಟರ್‌ಎಂದೇ ನಾಮಕರಣವನ್ನು ಮಾಡಿದರು. ಇವನು ವೈದ್ಯಕೀಯ ವಿದ್ಯಾಲಯಕ್ಕೆಸೇರಿಅಧಿಕೃತ ಪದವಿಯನ್ನು ಪಡೆದ. ಇವನು ಮಹಾ ಅಹಂಕಾರಿ. ಬಡವರಿಗೆ ನೆರವಾಗುತ್ತಿರಲಿಲ್ಲ. ತನ್ನ ನಿರೀಕ್ಷಿತ ಶುಲ್ಕವನ್ನು ನೀಡಬಲ್ಲವರನ್ನು ಮಾತ್ರ ಆರಿಸಿಕೊಳ್ಳುತ್ತಿದ್ದ. ಮತ್ತಷ್ಟುಹಾಗಾಗಿ ಇವನು ಮತ್ತಷ್ಟು ಶ್ರೀಮಂತನಾದ. ಈ ಮೂರನೆಯ ಪೀಟರಿಗೆ ಹ್ಯೂ, ಪಾಲ್ ಮತ್ತುಜಾನ್ ಎಂಬ ಮಕ್ಕಳು. ಇವರಲ್ಲಿ ಹ್ಯೂಸಹ ಸೂಲಗಿತ್ತಿಯಾದ. ಇವನಿಗೆತಾನು ದಿಢೀರ್ ಶ್ರೀಮಂತನಾಗಬೇಕೆಂಬ ಆಸೆ. ಫ್ರಾನ್ಸಿನಅರಸ ಲೂಯಿ–14 ಯನ್ನು ಭೇಟಿಯಾದ. ತನ್ನಉಪಕರಣಕ್ಕೆ 10,000 ಕ್ರೌನ್‌ಗಳ ಬೆಲೆಯನ್ನಿಟ್ಟ.'ಫ್ರಾನ್ಸ್ವ ಮಾರಿಷ'ಎನ್ನುವ ವೈದ್ಯನು ಈ ಉಪಕರಣದ ಪ್ರಾಯೋಗಿಕ ಉಪಯುಕ್ತತೆಯನ್ನು ಮೊದಲು ನಿರೂಪಿಸಬೇಕು ಎಂದ. 8 ದಿನಗಳಿಂದ ಹೆರಿಗೆ ನೋವನ್ನುತಿನ್ನುತ್ತಿದ್ದ, ಕಟಿಕುಹರವುಪೋಲಿಯೊದಿಂದವಿರೂಪಗೊಂಡಿದ್ದ 38 ವರ್ಷದಗರ್ಭವತಿಗೆ ಹೆರಿಗೆಯನ್ನು ಮಾಡಿಸಬೇಕೆಂದ. ಹ್ಯೂ ಮೂರುಗಂಟೆಗಳ ಕಾಲ ಪ್ರಯತ್ನಿಸಿದ. ಹೆರಿಗೆಯಾಗಲಿಲ್ಲ. ಆದರೆಆಕೆಯಗರ್ಭಾಶಯವುಛಿದ್ರವಾದಕಾರಣ ಆಕೆ ಮರಣಹೊಂದಿದಳು.

ಹ್ಯೂ ಲಂಡನ್ನಿಗೆ ಹಿಂದಿರುಗಿದ. ಇವನಿಗೆ ಒಬ್ಬ ಮಗ ಹುಟ್ಟಿದ. ಕಿರಿಯ ಹ್ಯೂ. ಇವನು ಎಂ.ಡಿ ಪದವಿಯನ್ನು ಪಡೆದು ವೈದ್ಯನಾದ. ಇವನಿಗೆ ಹುಟ್ಟಿದ ಮಕ್ಕಳೆಲ್ಲ ಹೆಣ್ಣುಗಳಾದವು. ಗಂಡುಸಂತಾನವಿಲ್ಲದಕಾರಣ, ಇವನು ತನ್ನಕುಟುಂಬದಗುಟ್ಟನ್ನುಕಾಪಾಡಿಕೊಂಡು ಬರುವುದರ ಬಗ್ಗೆ ನಿರ್ಲಕ್ಷ್ಯವನ್ನುತೋರಿ, 1728ರಲ್ಲಿ ಮರಣಿಸಿದ. 1733ರಲ್ಲಿ ಎಡ್‌ಮಂಡ್‌ಚಾಪ್‌ಮನ್ ಎಂಬುವವನು ಈ ಇಕ್ಕಳವನ್ನುಕುರಿತುಒಂದುಸಚಿತ್ರ ಲೇಖನವೊಂದನ್ನು ಪ್ರಕಟಿಸಿದ. ಇಕ್ಕಳದ ಪೂರ್ಣ ವಿವರ ಮೊದಲ ಬಾರಿಗೆಇಡೀ ವೈದ್ಯಜಗತ್ತಿಗೆ ಪರಿಚಯವಾಯಿತು. ಹಾಗಾಗಿ ಇಂದಿಗೂ ಸಹ ಈ ಚೇಂಬರ್ಲೆನ್ ಇಕ್ಕಳವು ಸುಧಾರಿತರೂಪದಲ್ಲಿ ಬಳಕೆಯಲ್ಲಿದೆ.



**ವಿಶಾಲ್ ಹುಷಾರೆ**
ವೈದ್ಯಕೀಯ ವಿದ್ಯಾರ್ಥಿ
ಬಳ್ಳಾರಿ


ವಿದ್ಯಾರ್ಥಿ ಲೋಕ

# ಆಧುನಿಕತೆ



**ಡಾ ಉಮಾಮಹೇಶ್ವರಿ**
ವಿಭಾಗೀಯ ಸಂಪಾದಕರು

**ಭಾ**ರತೀಯ ಸಮಾಜವು ಬಹಳ ಹಳೆಯದಾಗಿದೆ ಮತ್ತು ಅನೇಕ ಏರಿಳಿತಗಳೊಂದಿಗೆ ಉಳಿದುಕೊಂಡಿದೆ. ಆದರೆ ಕೈಗಾರಿಕರಣ, ನಗರೀಕರಣದಿಂದ ಇಡಿ ವ್ಯವಸ್ಥೆಯನ್ನು ಹೊಸ ಸಿದ್ಧಾಂತಗಳು ನಿಧಾನವಾಗಿ ಬದಲಾಯಿಸುತ್ತಿವೆ. ಆದ್ದರಿಂದ ಆಧುನೀಕರಣವು ವಿವಿಧ ಸಾಮಾಜಿಕ ಬದಲಾವಣೆಗಳ ಕಡೆಗಿನ ಪ್ರಕ್ರಿಯೆಯಾಗಿದೆ. ಆಧುನೀಕರಣವು ಪ್ರಗತಿಯನ್ನು ಸಂಕೇತಿಸುತ್ತದೆ, ಪ್ರಗತಿ ಎಂದರೆ ಸುಧಾರಣೆ ಮತ್ತು ಸಕರಾತ್ಮಕ ಅರ್ಥದಲ್ಲಿ ಮುನ್ನಡೆಯುವುದು, ಇದು ಯಾವುದೇ ತತ್ವಶಾಸ್ತ್ರ ಅಥವಾ ಚಲನೆಯನ್ನು ಸೂಚಿಸುವುದಿಲ್ಲ. ಇದು ಕೇವಲ ಬದಲಾವಣೆಯ ಪ್ರಕ್ರಿಯೆಯನ್ನು ಮಾತ್ರ ಸಂಕೇತಿಸುತ್ತದೆ. ಇದರ ಸಾಮಾನ್ಯ ಅರ್ಥವೆಂದರೆ ಜೀವನ ಮಟ್ಟ, ಕೆಲಸದ ಶೈಲಿ, ನಡವಳಿಕೆ, ತಂತ್ರಜ್ಞಾನ, ಶಿಕ್ಷಣ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ಪ್ರಗತಿ ಹೊಂದುವುದು.




ಮೊದಲು ಆಧುನೀಕರಣವನ್ನು ಆರ್ಥಿಕತೆಯ ಬದಲಾವಣೆ, ಸಾಮಾಜಿಕ ಮೌಲ್ಯಗಳು ಮತ್ತು ಆಚರಣೆಗಳ ಮೇಲೆ ಅದರ ಸಂಬಂಧಿತ ಪರಿಣಾಮವನ್ನು ಉಲ್ಲೇಖಿಸಲು ಮಾತ್ರ ಬಳಸಲಾಗುತ್ತಿತ್ತು. ಅಲಟಾಸ ಅವರ ಪ್ರಕಾರ ಆಧುನಿಕತೆ ಎನ್ನುವುದು “ಸಮಾಜದಲ್ಲಿ ಆಧುನಿಕ ವೈಜ್ಞಾನಿಕ ಜ್ಞಾನವನ್ನು ಪರಿಚಯಿಸುವ ಪ್ರಕ್ರಿಯೆಯಾಗಿದ್ದು ಮತ್ತು ಸಮಾಜ ಒಪ್ಪಿಕೊಳ್ಳುವಂತೆ ಉತ್ತಮ ಮತ್ತು ಹೆಚ್ಚು ತೃಪ್ತಿಕರವಾದ ಜೀವನವನ್ನು ಸಾಧಿಸುವುದೇ ಅಂತಿಮ ಉದ್ದೇಶವಾಗಿದೆ”.

ಆಧಿನೀಕರಣ ಪ್ರಕ್ರಿಯೆಯು ಕೆಳಗಿನ ಹುಣ ಲಕ್ಷಣಗಳನ್ನು ಒಳಗೊಂಡಿದೆ. ಅವುಗಳೆಂದರೆ ವೈಚಾರಿಕತೆ, ಜಾತ್ಯಾತೀತತೆ, ಹೆಚ್ಚಿನ ಆಕಾಂಕ್ಷೆ, ಸಾಧನೆಯ ದೃಷ್ಟಿಕೋನ, ಒಟ್ಟಾರೆ ವರ್ತನೆಗಳ ರೂಡಿಗಳ ರೂಪಾಂತರ ಮತ್ತು ಮೌಲ್ಯಗಳು, ಹೊಸ ಕ್ರಿಯಾತ್ಮಕ ರಚನೆ, ಮಾನವ ಸಂಪನ್ಮೂಲಗಳು, ಬೆಳವಣಿಗೆ ಆಧಾರಿತ ಆರ್ಥಿಕತೆ, ಪ್ರದೇಶ ಅಥವಾ ಭಾಷೆ ಆಧಾರಿತ ಆಸಕ್ತಿಗಳು ಇತ್ಯಾದಿ.

ಆಧಿನೀಕರಣದ ಮುಖ್ಯ ಲಕ್ಷಣಗಳೆಂದರೆ ಶಿಕ್ಷಣ, ಸಮೂಹ ಸಂವಹನ, ರಾಷ್ಟ್ರೀಯತೆಯ ಆಧಾರದ ಮೇಲೆ ಸಿದ್ಧಾಂತ, ವರ್ಚಸ್ವಿ ನಾಯಕತ್ವ, ಬಲವಂತದ ಸರಕಾರಿ ಅಧಿಕಾರ.

ಉನ್ನತ ಶಿಕ್ಷಣವು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಆಧುನಿಕರಣಕ್ಕೆ ಮುಖ್ಯ ಆಧಾರವಾಗಿದೆ. ಇದು ಜನರು ಏನು ಮಾಡಬಹುದು ಮತ್ತು ಅವರು ಏನನ್ನು ಬಯಸಬಹುದು ಎಂಬುದರ ಮೇಲೆ ಕೇಂದ್ರೀಕರಿಸುತ್ತದೆ.

ಮಪ್ತರಿಕೆಯಂತಹ ಸಮೂಹ ಸಂವಹನದ ಅಭಿವೃದ್ಧಿ, ನಿಯತಕಾಲಿಕಗಳು, ದೂರ ದರ್ಶನ, ಆಕಾಶವಾಣಿ, ದೂರವಾಣಿ, ಚಲನ ಚಿತ್ರ ಇತ್ಯಾದಿಗಳು ಆಧುನಿಕ ಪರಿ ಕಲ್ಪನೆಗಳು ವೇಗದ ದೂರದಲ್ಲಿ ಹರಡುವ ಪ್ರಮುಖ ಸಾಧನಗಳಾಗಿವೆ, ಸಮೂಹ ಮಾಧ್ಯಮವು ಹೊಸ ಮಾಹಿತಿ ಸಮಾಜದಲ್ಲಿನ ದೊಡ್ಡ ಜನ ಸಮೂಹದ ಆಕಾಂಕ್ಷೆಗಳು ಅವರನ್ನು ಹೊಸ ಸಾಧನೆಯತ್ತ ಕೊಂಡೊಯ್ಯುತ್ತದೆ.

ರಾಷ್ಟ್ರೀಯತೆ ಮತ್ತು ಪ್ರಜಾ ಪ್ರಭುತ್ವ ತುಂಬ ಹೆಚ್ಚು ಆಧುನೀಕರಣದೊಂದಿಗೆ ಸಂಬಂಧ ಹೊಂದಿದೆ. ರಾಷ್ಟ್ರೀಯತೆಯು ರಾಷ್ಟ್ರೀಯ ಜಾಗೃತಿಯೊಂದಿಗೆ ಸಂಪರ್ಕ ಹೊಂದಿದೆ. ಇದು ಜನ ಸಾಮಾನ್ಯರ ನಡವಳಿಕೆಯನ್ನು ಬದಲಾಯಿಸುವಲ್ಲಿ ರಾಜಕೀಯ ಗಣ್ಯರಿಗೆ ಸಹಾಯ ಮಾಡಿತು. ವರ್ಚಸ್ವಿ ನಾಯಕನು ಆಧುನಿಕ ನಂಬಿಕೆಗಳು, ಮೌಲ್ಯಗಳು ಆಚರಣೆಗಳು ಮತ್ತು ನಡವಳಿಕೆಯ ಮಾದರಿಯನ್ನು ಅಳವಡಿಸಿಕೊಳ್ಳಲು ಜನರ ಮೇಲೆ ಪ್ರಭಾವ

ಬೀರಲು ಉತ್ತಮ ಸ್ಥಾನದಲ್ಲಿರುತ್ತಾನೆ.

ಆಧುನಿಕರಣದ ಸಕರಾತ್ಮಕ ಪರಿಣಾಮಗಳು:

1. ಉದ್ಯೋಗವು ಹೆಚ್ಚು ನುರಿತ ಮತ್ತು ವಿಶೇಷವಾಗಿದೆ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸುತ್ತದೆ.

2. ದ್ವಿತೀಯ ಮತ್ತು ತೃತೀಯ ವಲಯದ ಉದ್ಯೋಗದಲ್ಲಿ ತೊಡಗಿರುವ ಜನರ ಸಂಖ್ಯೆ ಹೆಚ್ಚಾಗುತ್ತದೆ.

3. ವಿನಿಮಯ ವ್ಯವಸ್ಥೆಯು ಹಣದ ವ್ಯವಸ್ಥೆಯಿಂದ ಬದಲಾಯಿಸಲ್ಪಟ್ಟಿದೆ.

4. ಭೌಗೋಳಿಕ ದೂರ ಕಡಿಮೆಯಾಗುತ್ತಿದೆ ಮತ್ತು ಗ್ರಾಹಕರ ಅನುಭವವನ್ನು ಸುಧಾರಿಸುತ್ತದೆ.

5. ಹಳೆಯ ಕೃಷಿ ಉಪಕರಣಗಳನ್ನು ಹೊಸ ಸುಧಾರಿತ ಉಪರಣಗಳಿಂದ ಬದಲಾಯಿಸಲಾಗಿದೆ.

6. ಆರೋಗ್ಯ ಸೌಲಭ್ಯಗಳು ಮತ್ತು ಶಿಕ್ಷಣ ಸೌಲಭ್ಯಗಳಲ್ಲಿ ಪ್ರಗತಿ ಕಾಣಿಸುತ್ತಿದೆ.

7. ಕುಟುಂಬದಲ್ಲಿ ಬದಲಾವಣೆ ಮತ್ತು ಮಧ್ಯಮ ಕುಟುಂಬದ ಪರಿಚಯ.

8. ನಮ್ಮ ಸಮಾಜದಲ್ಲಿ ಪ್ರಚಲಿತದಲ್ಲಿರುವ ಸಾಮಾಜಿಕ ಅನಿಷ್ಟಗಳ ನಿರ್ಮೂಲನೆ, ಇದು ಜ್ಞಾನ ಆಧಾರಿತ ಸಮಾಜದ ರಚನೆಗೆ ಕಾರಣವಾಗುತ್ತದೆ.

9. ಆಧುನೀಕರಣವು ಜನರಲ್ಲಿ ತರ್ಕ ಬದ್ಧ ಚಿಂತನೆ ಮತ್ತು ವೈಜ್ಞಾನಿಕ ಮನೋಭಾವ ಬೆಳೆಸಲು ಸಹಾಯ ಮಾಡುತ್ತದೆ.

10. ಆಧುನೀಕರಣವು ಸಮಾಜಕ್ಕೆ ತರಬೇತಿ ಪಡೆದ ಮತ್ತು ನುರಿತ ನಾಗರಿಕರನ್ನು ಸಿದ್ಧ ಮಡಿಸುತ್ತದೆ ಜೊತೆಗೆ ಭದ್ರತೆಯ ವರ್ಧನೆ ಮತ್ತು ಆದಾಯವನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ.

**ಆಧುನೀಕರಣದ ನಕರಾತ್ಮಕ ಪರಿಣಾಮಗಳು:**

1. ಆಧುನೀರಣವು ಹೆಚ್ಚು ಕೈಗಾರಿಕರಣಕ್ಕೆ ಕಾರಣವಾಗುತ್ತಿದೆ. ಇದರಿಂದ ವಾಯ ಮಾಲಿನ್ಯ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ

2. ಆಧುನೀಕರಣವು ನಗರೀಕರಣಕ್ಕೆ ಕಾರಣವಾಗುತ್ತಿದೆ. ಇದು ಗ್ರಾಮೀಣ ಪ್ರದೇಶದ ಸಂಸ್ಕೃತ ಮತ್ತು ವಿಶೇಷವಾಗಿ ಕೃಷಿಯ ಮೇಲೆ ನೇರವಾಗಿ ಪರಿಣಾಮ ಬೀರುತ್ತಿದೆ.

3. ಐಷಾರಾಮಿ ಜೀವನವನ್ನು ಆನಂದಿಸಲು ಹೆಚ್ಚಿನ ಗಳಿಕೆಯ ಹಂಬಲ, ಒತ್ತಡ, ಸ್ವಾರ್ಥತೆ ಮತ್ತು ಅಹಂಕಾರ ಹೆಚ್ಚಾಗುತ್ತದೆ.

4. ಆಧುನೀಕರಣವು ಬಹಳ ಸಮಯ ತೆಗೆದುಕೊಳ್ಳುವ ಮತ್ತು ನಿಧಾನ ಗತಿಯ ಪ್ರಕ್ರಿಯೆಯಾಗಿದೆ.

5. ಆಧುನೀಕರಣಕ್ಕೆ ದುಬಾರಿ ಮತ್ತು ಅನುಭವ ಸಂಪನ್ಮೂಲಗಳ ಅವಶ್ಯಕತೆ ಇದೆ.

6. ಆಧುನೀಕರಣವು ಹಣಕಾಸಿನ ತೊಂದರೆಗೆ ಕಾರಣವಾಗಬಹುದು. ಏಕೆಂದರೆ ಹಾರ್ಡ್ವೇರ್ ಮತ್ತು ನಾವಿನ್ಯತೆಗಳ ಪ್ರಗತಿಯು ಮಾನವ ಕೆಲಸದ ಅಗತ್ಯವನ್ನು ಕಡಿಮೆ ಮಾಡುತ್ತದೆ.

7. ಅದೇನೇ ಇರಲಿ ಬೃಹತ್ ಸಂಸ್ಥೆಗಳು ಮತ್ತು ಜೋಡಿಸುವ ಕಛೇರಿಗಳ ಚಿಕ್ ರಚನೆಯನ್ನು ಬದಲಿಸುವದರಿಂದ ಗೃಹ ಸಂಕೀರ್ಣ, ಪೇಸ್ಟ್ರಿ ಕಿಚನ್ ಗಳು ಮತ್ತು ಡ್ರೆಸ್ ಗಳು ಮೊತ್ತಕ್ಕೆ ಸಂಬಂಧಿಸಿದಂತೆ ಕಡಿಮೆ ಆದ್ಯತೆಯನ್ನು ಪಡೆದುಕೊಳ್ಳುತ್ತವೆ.

8. ಸಣ್ಣ ಮತ್ತು ಸಾಂಪ್ರದಾಯಿಕ ಸಮುದಾಯಗಳ ಅವನತಿ ಮತ್ತು ಧಾರ್ಮಿಕ ಸಂಸ್ಥೆಗಳ ಪ್ರಾಮುಖ್ಯತೆಯಲ್ಲಿ ಕುಸಿತ ಕಂಡು ಬರುತ್ತದೆ.

ಸಮಾಜದ ಜನರು ತಮ್ಮ ಜೀವನ ಸಂಸ್ಥೆಗಳು, ಆಲೋಚನಾ ಮನೋಭಾವ ಮತ್ತು ಸಂಬಂಧಗಳಿಗೆ ಸಂಬಂಧಿಸಿದ ಎಲ್ಲಾ ಅಂಶಗಳಲ್ಲಿ ಉತ್ತಮ ಮತ್ತು ಮುಂದುವರೆದಾಗ ಮಾತ್ರ ಸಮಾಜವು ಆಧೂನೀಕರಿಸಲ್ಪಟ್ಟಿದೆ ಎಂದು ಹೇಳಲಾಗುತ್ತದೆ.

ಆಧುನೀರಣದಲ್ಲಿ ಸಮಾಜವು ತನ್ನ ಪ್ರಸ್ತುತ ಮತ್ತು ಹಳೆಯ ಜ್ಞಾನ ಮಾದರಿಗಳು, ತಂತ್ರಗಳು ಮತ್ತು ಸಂಪನ್ಮೂಲಗಳನ್ನು ಬಳಸಿಕೊಂಡು ಹೊಸತನಕ್ಕೆ ಪ್ರಯತ್ನಿಸುತ್ತದೆ. ಇದು ಸಮಾಜವನ್ನು ಹೆಚ್ಚು ಆತ್ಮ ವಿಶ್ವಾಸ, ಸ್ವತಂತ್ರ, ಬಹುಮುಖ ಮತ್ತು ಸ್ವಾವಲಂಬಿಯನ್ನಾಗಿ ಮಾಡುತ್ತದೆ. ಆಧುನೀಕರಣವು ಸಮಾಜವನ್ನು ತನ್ನ ಅನನ್ಯತೆಯನ್ನು ಅರಿತುಕೊಳ್ಳುವಂತೆ ಮಾಡುತ್ತದೆ.

ಆಧುನಿಕ ಜಗತ್ತಿನ ಕಾರಣದಿಂದ ರೂಡಿಗತ ರಚನೆ, ಸಾಂಸ್ಕೃತಿಕ ಲಕ್ಷಣಗಳು, ಮೌಲ್ಯ ವ್ಯವಸ್ಥೆ, ಉಡುಗೆ ತೊಡುಗೆಗಳ ಬದಲಾಗುವದರಿಂದ ಸಮಾಜ ಪರಿವರ್ತನೆ ಹಂತದಲ್ಲಿದೆ ಎಂದು ಹೇಳಬಹುದು. ಸಾಂಪ್ರದಾಯಿಕ ಮತ್ತು ಸಾಂಸ್ಕೃತಿಕ ಲಕ್ಷಣಗಳನ್ನು ಯಾವುದೇ ರಾಷ್ಟ್ರದ ಗುರುತಿನ ಸಂಕೇತವೆಂದು ಪರಿಗಣಿಸಲಾಗುತ್ತದೆ. ಇದನ್ನು ಪಾಶ್ಚಿಮಾತ್ಯ ಪ್ರಪಂಚವು ಶಾಶ್ವತವಾಗಿ ಬದಲಾಯಿಸುತ್ತಿದೆ. ಆದ್ದರಿಂದ ನಮ್ಮ ಸಂಸ್ಕೃತಿಯನ್ನು ಉಳಿಸುವ ಮತ್ತು ಸಂರಕ್ಷಿಸುವ ಅವಶ್ಯಕತೆಯೂ ಇದೆ. ಆದ್ದರಿಂದ ಸಂಶೋಧಕರು ಮತ್ತು ಸಮಾಜದ ವಿಜ್ಞಾನಿಗಳು ಗುರುತನ್ನು ಉಳಿಸಲು ಕಾಳಜಿವಹಿಸಬೇಕು.

ಅನಿವಾಸಿ ಲೋಕ



# ಆಸ್ಟ್ರೇಲಿಯಾ ವೈದ್ಯಕೀಯ ಶಿಕ್ಷಣದ ಒಂದು ಪಕ್ಷಿ ನೋಟ

**ಡಾ ವಿಷ್ಣು ಹಿರೇಮಠ**
ಎಂಡೋಕ್ರೈನೋಲಾಜಿಸ್ಟ
ನಾರ್ತಲೇಕ್ಸ್ ಡ್ರೈವ್, ನಾರ್ತ ಲೇಕ್ಸ್, ಕ್ವೀನ್ಸ್ ಲ್ಯಾಂಡ್, ಆಸ್ಟ್ರೇಲಿಯ.



**ಡಾ ಕೇಶವ ಕುಲಕರ್ಣಿ**
ವಿಭಾಗೀಯ ಸಂಪಾದಕರು

ಆಸ್ಟ್ರೇಲಿಯ ನಮ್ಮ ಭಾರತದಂತೆ ಒಂದು ಸಂಯುಕ್ತ ಪ್ರಜಾಪ್ರಭುತ್ವ ದೇಶ, ಹೀಗಾಗಿ ಇಲ್ಲಿನ ಅನೇಕ ದೈನಂದಿನ ಆಡಳಿತ ವ್ಯವಸ್ಥೆ ನಮ್ಮ ದೇಶದಂತೆಯೇ ಇಲ್ಲಿನ ರಾಜ್ಯಗಳಿಗೆ ಸಂಬಂಧಿಸಿದ ವಿಷಯ. ಇಲ್ಲಿನ ಶೈಕ್ಷಣಿಕ ಆಡಳಿತದ ಜವಾಬ್ದಾರಿ ಕೂಡ ಆಯಾ ರಾಜ್ಯಗಳಿಗೆ ಸೇರಿದ ವಿಚಾರ. ಹೀಗಾಗಿ ಇಡೀ ದೇಶದ ವ್ಯದಕೀಯ ಪ್ರವೇಶನೀತಿ ಒಂದೇ ತೆರನಾಗಿ ಇರುವುದಿಲ್ಲ. ಆದರೂ ಅರ್ಹತಾ ಪ್ರಕ್ರಿಯೆಯಲ್ಲಿ ಒಂದು ರೀತಿಯ ಸಾಮ್ಯತೆ ಇರುವುದು ಸತ್ಯ.

ಆಸ್ಟ್ರೇಲಿಯ ದೇಶದಲ್ಲಿ ಸರಿ ಸುಮಾರು 20 ವೈದ್ಯಕೀಯ ಶಾಲೆಗಳಿವೆ. ಈ ಶಾಲೆಗಳು ದೇಶದ ಅನೇಕ ಭಾಗದಲ್ಲಿ ಚದುರಿದ್ದರೂ ಇಲ್ಲಿನ ಆಗ್ನೇಯ ತೀರದ ಮೂರು ಪ್ರದೇಶಗಳಲ್ಲಿ ಕೇಂದ್ರೀಕೃತವಾಗಿವೆ. ಈ ಮೂರು ಭಾಗದ ಮುಖ್ಯ ನಗರಗಳಾದ ಸಿಡ್ನಿ, ಮೆಲ್ಬೋರ್ನ್ ಮತ್ತು ಬ್ರಿಸ್ಬೇನ್ನಲ್ಲೆ ಬಹಳಷ್ಟು ಶಾಲೆಗಳು ಇರುವುದು. ಪಶ್ಚಿಮ ತೀರದ ಪರ್ತ್ ನಗರದಲ್ಲೂ ವೈದ್ಯಕೀಯ ಶಾಲೆಗಳು ಇವೆ.




ವೈದ್ಯಕೀಯ ಶಾಲಾ ಪ್ರವೇಶ ಪಡೆಯ ಬಯಸುವ ವಿದ್ಯಾರ್ಥಿಗಳ ತಯಾರಿ ಸರಿಸುಮಾರು 8ನೇ ತರಗತಿಯಿಂದಲೇ ಶುರುವಾದರೂ, ಇದರ ಗಂಭೀರ ತಯಾರಿ 11ನೇ ತರಗತಿಯ ಕೊನೆಯ ಸೆಮಿಸ್ಟರ್ನಿಂದ ಶುರುವಾಗುತ್ತದೆ.

11ನೇ ತರಗತಿಯ ಕೊನೆಯ ಸೆಮಿಸ್ಟರ್ನಿಂದ 12ನೇ ತರಗತಿಯ ಕೊನೆಯವರೆಗೆ ಅವರವರ ಶೈಕ್ಷಣಿಕ ಪ್ರದರ್ಶನದ ಆಧಾರದ ಮೇಲೆ ವಿದ್ಯಾರ್ಥಿಗಳು ಅಂಕಪಟ್ಟಿ ಅಥವಾ ಶ್ರೇಯಾಂಕಪಟ್ಟಿಯನ್ನು ಪಡೆಯುತ್ತಾರೆ. ಇದು ಅವರು ಓದುವ ಶಾಲೆಯ ಶಿಕ್ಷಕರು ನೀಡುವ 50% ಮತ್ತು ಹೊರಗಿನ ಸ್ವತಂತ್ರ ಮೌಲ್ಯಮಾಪಕರ 50% ಅಂಕಗಳ ಮೇಲೆ ಅವಲಂಬಿತವಾಗಿರುತ್ತದೆ. ಈ ಅಂಕಗಳ ಆಧಾರದ ಮೇಲೆ ಪ್ರತಿಯೊಬ್ಬ ವಿದ್ಯಾರ್ಥಿಗೂ ಒಂದು ಶ್ರೇಯಾಂಕ (ATOR) ಅಂಕಪಟ್ಟಿ ನೀಡುತ್ತಾರೆ. ಸಾಮಾನ್ಯವಾಗಿ ATOR ನಲ್ಲಿ 99.0 ಅಥವ ಹೆಚ್ಚು ಅಂಕ ಪಡೆದವರಿಗೆ ಮಾತ್ರ ವೈದ್ಯಕೀಯ ಶಾಲೆಯಲ್ಲಿ ಭರ್ತಿಯಾಗುವ ಅವಕಾಶವಿರುತ್ತದೆ. ಈ ಶ್ರೇಯಾಂಕದ ಪ್ರಕ್ರಿಯೆ ಸ್ವಲ್ಪಮಟ್ಟಿಗೆ ಅಷ್ಟೊಂದು ತಿಳಿ ಇಲ್ಲವೆಂಬುದು ನನ್ನ ಸ್ವಂತ ಅಭಿಪ್ರಾಯ. ಇದು ಅನೇಕ ಪಠ್ಯ ಮತ್ತು ಪಠ್ಯೇತರ ಪ್ರದರ್ಶನದ ಆಧಾರದ ಮೇಲೆ ನಿರ್ಧಾರವಾಗುತ್ತದೆ. ಒಂದು ಸೂಕ್ಷ್ಮ ವಿಚಾರವೆಂದರೆ ಅಂಕಗಳ ಲೆಕ್ಕ 11ನೇ ತರಗತಿಯ ಕೊನೆಯ ಸೆಮಿಸ್ಟರಿನಿಂದ ಶುರುವಾದರೂ ಕೆಲ ಸಮಯ ಆ ವಿದ್ಯಾರ್ಥಿಯ 8ನೇ ತರಗತಿಯಿಂದ 12 ನೇ ತರಗತಿಯ ಪರಿಪೂರ್ಣ ಪ್ರದರ್ಶನ ಕೂಡ ಸ್ವಲ್ಪ ಮಟ್ಟಿಗೆ ಪೂರಕವಾಗಬಹುದು.

ಇನ್ನು ಅಸಲಿ ಪ್ರವೇಶ ಪೂರ್ವ ಪರೀಕ್ಷೆ 12ನೆ ತರಗತಿಯ ಮಧ್ಯದಲ್ಲಿ ಅಂದರೆ ಜುಲೈ ತಿಂಗಳಿನಲ್ಲಿ ನಡೆಯುವ UCAT ಎಂಬುದು. ಇದು ವಿಧ್ಯಾರ್ಥಿಗಳ ಒಂದು ಸಂಪೂರ್ಣ ಯೋಗ್ಯತಾ ಪರೀಕ್ಷೆ. ಇದನ್ನು ಯಾವುದೇ 12ನೇ ತರಗತಿಯ (ಕೆಲ ಸಮಯ ಮೊದಲನೇ ವರ್ಷದ ಸ್ನಾತಕೋತ್ತರ) ವಿದ್ಯಾರ್ಥಿಯೂ ನೀಡಬಹುದು. ಇದು ಅತೀ ಮುಖ್ಯವಾದ ಪರೀಕ್ಷೆ ಅನೇಕ ವಿಶ್ವವಿದ್ಯಾಲಯಗಳು UCAT ಪರಿಕ್ಷೆ ಒಂದೇ ಆಧಾರದ ಮೇಲೆ ವೈದ್ಯಕೀಯ ಶಾಲಾ ಭರ್ತಿ ಮಾಡಿಕೊಳ್ಳುತ್ತವೆ. ಆದರೆ ಬಹುಪಾಲು ವಿಶ್ವವಿದ್ಯಾಲಯಗಳು ATOR ಮತ್ತು UCAT ಎರಡರ ಒಟ್ಟು ಪ್ರದರ್ಶನದ ಆಧಾರದ ಮೇಲೆ ತಮ್ಮ ತಮ್ಮ ವೈದ್ಯಕೀಯ ಶಾಲಾ ಭರ್ತಿಯನ್ನು

ನಿರ್ಧರಿಸುತ್ತವೆ. ಮತ್ತೆ ಕೆಲ ವಿಶ್ವವಿದ್ಯಾಲಯಗಳು ATOR ಮತ್ತು ಲಿಖಿತ ಮತ್ತು ಮೌಖಿಕ ಆಧಾರದ ಮೇಲೆ ತಮ್ಮ ಭರ್ತಿ ಪ್ರಕ್ರಿಯೆ ನಡೆಸುತ್ತವೆ.

ಪ್ರತಿಯೊಬ್ಬ ವಿದ್ಯಾರ್ಥಿಯೂ ನವೆಂಬರ್ ಅಥವಾ ಡಿಸೆಂಬರ್ ತಿಂಗಳಿನಲ್ಲಿ ತಮ್ಮ ಇಚ್ಛೆಯ ಒಟ್ಟು 5 ವಿಶ್ವವಿದ್ಯಾಲಯಾಗಳಲ್ಲಿ 1ರಿಂದ 5ನೆ ಆದ್ಯತೆಯಯನ್ನು ಲಿಖಿತವಾಗಿ ವ್ಯಕ್ತಪಡಿಸಬಹುದು. ಒಬ್ಬ ವಿದ್ಯಾರ್ಥಿಗೆ ಪ್ರತೀ ರಾಜ್ಯದ 5 ವಿಶ್ವವಿದ್ಯಾಲಯಾಗಳ ಆಯ್ಕೆ ಮಾಡುವ ಅವಕಾಶ ಇರುತ್ತದೆ. ಮತ್ತು ತಮ್ಮ ಆದ್ಯತೆಯನ್ನು, ಪ್ರವೇಶ ಪ್ರಕ್ರಿಯೆ ಪೂರ್ಣವಾಗುವರೆಗೂ ಬದಲಾಯಿಸುವ



ಅವಕಾಶವಿರುತ್ತದೆ.

ಇನ್ನು ಹೊಸ ವರ್ಷದ ಆರಂಭದಲ್ಲಿ ಅಂದರೆ ಜನವರಿ ತಿಂಗಳಿನಿಂದ ಪ್ರತೀ ವಿಶ್ವವಿದ್ಯಾಲಯಾಗಳು ತಾವು ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳಿಗೆ ಲಿಖಿತ ಸಂದೇಶ ಕಳಿಸುತ್ತಾರೆ. ವಿದ್ಯಾರ್ಥಿಗಳು ಈ ಆಯ್ಕೆಯನ್ನು ಒಪ್ಪಿಕೊಂಡು ಆಯಾ ವಿದ್ಯಾರ್ಥಿಯೂ ನೀಡಬಹುದು. ಇದು ಅತೀ ಮುಖ್ಯವಾದ ಪರೀಕ್ಷೆ ಅನೇಕ ವಿಶ್ವವಿದ್ಯಾಲಯಗಳು UCAT ಪರಿಕ್ಷೆ ಒಂದೇ ಆಧಾರದ ಮೇಲೆ ವೈದ್ಯಕೀಯ ಶಾಲಾ ಭರ್ತಿ ಮಾಡಿಕೊಳ್ಳುತ್ತವೆ. ಬಹುಪಾಲು ವಿಶ್ವವಿದ್ಯಾಲಯಗಳು ATOR ಮತ್ತು UCAT ಎರಡರ ಒಟ್ಟು ಪ್ರದರ್ಶನದ ಆಧಾರದ ಮೇಲೆ ತಮ್ಮ ತಮ್ಮ ವೈದ್ಯಕೀಯ ಶಾಲಾ ಭರ್ತಿ ನಿರ್ಧರಿಸುತ್ತವೆ. ಮತ್ತೆ ಕೆಲ ವಿಶ್ವವಿದ್ಯಾಲಯಗಳು ATOR ಮತ್ತು ಲಿಖಿತ ಮತ್ತು ಮೌಖಿಕ ಆಧಾರದ ಮೇಲೆ ತಮ್ಮ ಭರ್ತಿ ಪ್ರಕ್ರಿಯೆ ನಡೆಸುತ್ತವೆ.

ಪ್ರತಿಯೊಬ್ಬ ವಿದ್ಯಾರ್ಥಿಯೂ ನವೆಂಬರ್ ಅಥವಾ ಡಿಸೆಂಬರ್ ತಿಂಗಳಿನಲ್ಲಿ ತಮ್ಮ ಇಚ್ಛೆಯ ಒಟ್ಟು 5 ವಿಶ್ವವಿದ್ಯಾಲಯಾಗಳಲ್ಲಿ 1ರಿಂದ 5ನೇ ಆದ್ಯತೆಯಯನ್ನು ಲಿಖಿತವಾಗಿ ವ್ಯಕ್ತಪಡಿಸಬಹುದು. ಒಬ್ಬ ವಿದ್ಯಾರ್ಥಿಗೆ ಪ್ರತೀ ರಾಜ್ಯದ 5 ವಿಶ್ವವಿದ್ಯಾಲಯಾಗಳ ಆಯ್ಕೆ ಮಾಡುವ ಅವಕಾಶ ಇರುತ್ತದೆ. ತಮ್ಮ ಆದ್ಯತೆಯನ್ನು ಪ್ರವೇಶ ಪ್ರಕ್ರಿಯೆ ಪೂರ್ಣವಾಗುವರೆಗೂ ಬದಲಾಯಿಸುವ ಅವಕಾಶವಿರುತ್ತದೆ.

ಇನ್ನು ಹೊಸ ವರ್ಷದ ಆರಂಭದಲ್ಲಿ ಅಂದರೆ ಜನವರಿ ತಿಂಗಳಿನಿಂದ ಪ್ರತೀ ವಿಶ್ವವಿದ್ಯಾಲಯಾಗಳು ತಾವು ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳಿಗೆ ಲಿಖಿತ ಸಂದೇಶ ಕಳಿಸುತ್ತಾರೆ. ವಿದ್ಯಾರ್ಥಿಗಳು ಈ ಆಯ್ಕೆಯನ್ನು ಒಪ್ಪಿಕೊಂಡು ಆಯಾ ಶಾಲಾ ಪ್ರವೇಶ ಪಡೆಯಬಹುದು ಅಥವಾ ಇದನ್ನು ತಿರಸ್ಕರಿಸಿ ಮುಂದಿನ ಆಯ್ಕೆಗಾಗಿ ಕಾಯಬಹುದು. ಇದು ಸ್ವಲ್ಪ ಮಟ್ಟಿಗೆ ಒಂದು ಕಠಿಣ ವಿಚಾರ ಏಕೆಂದರೆ ಎರಡನೇ ಆಯ್ಕೆಯ ಫಲಿತಾಂಶ ಪೂರಕವೋ, ಮಾರಕವೋ ಎನ್ನುವುದು ಅದು ಬಂದ ಮೇಲೆಯೇ ತಿಳಿಯುವುದು.

ಇನ್ನು ಕೆಲ ಆಯ್ದ ವಿಶ್ವವಿದ್ಯಾಲಯಗಳು ಸ್ನಾತಕೊತ್ತರ ವೈದ್ಯಕೀಯ ಶಾಲಾ ಪ್ರವೇಶಕ್ಕೆ ಅವಕಾಶ ನೀಡುತ್ತವೆ. ಇದರ ಪ್ರವೇಶ ಪರೀಕ್ಷೆ GMSAT ಎಂಬುದು. ಇದು ಸಂಪೂರ್ಣ ಪತ್ಯಾಧಾರಿತ ಪರೀಕ್ಷೆ. ಇದನ್ನು ಯಾವುದೇ ಸ್ನಾತಕ ವಿಧ್ಯಾರ್ಥಿ ನೀಡಬಹುದು. ಬಹುಮಟ್ಟಿಗೆ ಇದು GMSAT ಶ್ರೇಯಾಂಕ ಆಧಾರದ ಮೇಲೆಯೆ ಅವಲಂಬತವಾಗಿರುತ್ತವೆ.



ಒಮ್ಮೆ ವೈದ್ಯಕೀಯ ಶಾಲೆ ಸೇರಿದ ಮೇಲೆ ಇದರ ಒಟ್ಟು ಸಮಯ, ತಾವು ಸೇರಿರುವ ವಿಶ್ವವಿದ್ಯಾಲಯದ ನಿಯಮ ದನುಸಾರ ಸುಮಾರು 4.5 ರಿಂದ 7 ವರ್ಷದವರೆಗೂ ಇರುತ್ತದೆ. ಅನ್ಯದೇಶಗಳ ವಿದ್ಯಾರ್ಥಿಗಳು ಇಲ್ಲಿನ ವೈದ್ಯಕೀಯ ಶಾಲೆ ಸೇರಲು ಕೂಡ UCAT ಪ್ರವೇಶ ಪರೀಕ್ಷೆಯ ನೀಡಬೇಕು. ಜೊತೆಯಲ್ಲಿ ಇಂಗ್ಲೀಷ್ ಸಾಮರ್ಥ್ಯ ಪರೀಕ್ಷೆ ಕೂಡಾ ನೀಡಬೇಕು. ಇದು ಬಿಟ್ಟರೆ ಎಲ್ಲಾ ಅನ್ಯ ವಿಚಾರಗಳಲ್ಲಿ ಏನೂ ವ್ಯತ್ಯಾಸ ವಿರುವುದಿಲ್ಲ (ಹಣಕಾಸಿನ ವಿಚಾರ ಇದ್ದೆ ಇದೆ). ಅನ್ಯದೇಶದ ವಿದ್ಯಾರ್ಥಿ ಶಾಲಾ ಶುಲ್ಕ ಪ್ರತೀ ವರ್ಷಕ್ಕೆ ಸರಿಸುಮಾರು ಒಂದು ಲಕ್ಷ ಆಸ್ಟೇಲಿಯನ್ ಡಾಲರ್. ಹಾಗಾಗಿ ಇಲ್ಲಿನ ಈ ವೈದ್ಯಕೀಯ ಶಾಲಾ ಪ್ರವೇಶ ಪ್ರಕ್ರಿಯೆ ಅರ್ಥೈಸಿಕೊಳ್ಳುವುದು ಬಹು ಕ್ಲಿಷ್ಟಕರವಾದ ಮತ್ತು ಒಂದು ರೀತಿಯ ನಿಗೂಢತೆ ವಿಚಾರ ಎನ್ನುವುದರಲ್ಲಿ ಎರಡು ಮಾತಿಲ್ಲ.



ಸಾಂಸ್ಕೃತಿಕ

# ಬಳಗದ ವಿಶೇಷ ಕಾರ್ಯಕ್ರಮಗಳ ಪಕ್ಷಿನೋಟ

**ಡಾ ವೀಣಾ ಎನ್**
ವಿಭಾಗೀಯ ಸಂಪಾದಕರು
ಸ್ತ್ರೀ ರೋಗ ತಜ್ಞರು, ಕಶ್ಯಪ ಸಂಕೀರ್ಣ, ಶ್ರೀರಾಮಪೇಟೆ, ಸುಳ್ಯ

ಮಾರ್ಚ್–ಏಪ್ರಿಲ್ 2022 ತಿಂಗಳ ಅವಧಿಯಲ್ಲಿ ವಾಸವಿ ಸಾಹಿತ್ಯ ಕಲಾ ವೇದಿಕೆಯ ಸಹಯೋಗದಲ್ಲಿ ಕನ್ನಡ ವೈದ್ಯ ಬರಹಗಾರರ ಬಳಗ ಪ್ರಸ್ತುತ ಪಡಿಸಿದ ಕಾರ್ಯಕ್ರಮಗಳು ವೈವಿಧ್ಯಮಯ. ಪುರಾಣ , ಇತಿಹಾಸ ಹಾಗೂ ವರ್ತಮಾನದ ಬಗ್ಗೆ, ಪಕ್ಷಿಲೋಕ, ಮಹಾಕಾವ್ಯ, ಕಲೆ ಮತ್ತು ವಿಜ್ಞಾನ ಬಗೆಗೆ ವೈದ್ಯರಿಂದ / ಕತೆಗಾರರಿಂದ ಹಾಗೂ ವಿಜ್ಞಾನಿಗಳು ನಡೆಸಿ ಕೊಟ್ಟ ಉಪನ್ಯಾಸಗಳು ಜ್ಞಾನವರ್ಧಕವಾಗಿದ್ದವು.

ದಿನಾಂಕ 27–02–2022 ರಂದು ಹಿರಿಯ ಮೂಳೆ ತಜ್ಞರಾದ ಡಾ. ಭಾಸ್ಕರಾನಂದರವರು "ಭಾಸ್ಕರಾನಂದರ ಆನಂದದ ಪಯಣ" ಎಂಬ ವಿಷಯದ ಕುರಿತು ಮಾತನಾಡಿದರು. ವೈದ್ಯಕೀಯ ಕ್ಷೇತ್ರ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಮತ್ತು ಯಕ್ಷಗಾನ ಕ್ಷೇತ್ರದಲ್ಲಿ ಅವರ ಪಯಣ ಹೇಗಿತ್ತು ಎನ್ನುವುದನ್ನು ವಿವರಿಸಿದರು. ಅವರ ವೈದ್ಯಕೀಯ ವೃತ್ತಿಯ ಮೊದಲ ರೋಗಿಯ ಜೊತೆ ಮಾತನಾಡುವ ಮೂಲಕ ಅವರ ಅನುಭವ ಹಂಚಿಕೊಂಡರು. 7 ಬೆರಳಿದ್ದ ಬೆಂಗಳೂರಿನ ಒಂದು ಮಗುವಿಗೆ ಚಿಕಿತ್ಸೆ ನೀಡಿ ಹೆಬ್ಬೆರಳಿನ ಆಕಾರ ನೀಡುವ ಸಮಯದಲ್ಲಿ ಅವರು ಯಾವ ರೀತಿ ಆ ಸವಾಲನ್ನು ಎದುರಿಸಿದರು ಅನ್ನುವುದನ್ನು ತಿಳಿಸಿದರು. ಹಲವಾರು ಭಾಷೆಗಳಿಗೆ ಅನುವಾದಿಸಲ್ಪಟ್ಟ "ಭೀಷ್ಮರ ಕೊನೆಯ ದಿನಗಳು" ನಾಟಕ ದ ಬಗ್ಗೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಯಕ್ಷಗಾನದ ಎರಡು ಪ್ರಾಕಾರಗಳಲ್ಲಿಯೂ ಸಾಧನೆ ಮಾಡಿದ ಭಾಸ್ಕರಾನಂದ ಸರ್ ತನ್ನ ಕಲಾವಿದನಾದ ಸುಖವನ್ನು ಸ್ಮರಿಸಿಕೊಂಡರು.

https://youtu.be/6aqHWD3IlnQ

ದಿನಾಂಕ 06–03–2022 ರಂದು ಶಸ್ತ್ರಚಿಕಿತ್ಸರು, ಲೇಖಕರು ಹಾಗೂ ನಿಸರ್ಗಶಾಸ್ತ್ರಜ್ಞರಾದ ಡಾ.ಸಂಜಯ್ ಎಚ್.ಆರ್.ರವರು "ಪಕ್ಷಿಲೋಕದೊಳಗೆ ಇಣುಕು ನೋಟ" ಎಂಬ ವಿಷಯದ ಸಾರವನ್ನು ಉಣಬಡಿಸಿದರು. ಪಕ್ಷಿಗಳ ಆಹಾರ ಕ್ರಮ ಹೇಗೆ ಇರುತ್ತದೆ, ಅವುಗಳ ಬೆಳವಣಿಗೆಯ ಕ್ರಮ ಯಾವ ರೀತಿ ಇದೆ ಹಾಗೂ ಪಕ್ಷಿಗಳ ಪ್ರಭೇದವನ್ನು ವಿವರಿಸುವ ಮೂಲಕ ಪಕ್ಷಿಗಳ ಸಂಪೂರ್ಣ ಪರಿಚಯವನ್ನು ಮಾಡಿಕೊಟ್ಟರು. ಹಲವಾರು ಪಕ್ಷಿಗಳ ಚಿತ್ರಗಳನ್ನು ತೋರಿಸುವ ಮೂಲಕ ಅವುಗಳ ಹೆಸರುಗಳನ್ನು ಪರಿಚಯಿಸಿದರು. ಹಾಗೆಯೇ ಪಕ್ಷಿಗಳ ಬಗೆಗೆ ಕುತೂಹಲ ಮೂಡಿಸುವ ಅನೇಕ ವಿಷಯಗಳನ್ನು ಅದರ ಜೊತೆಗೆ ವಿವಿಧ ಪಕ್ಷಿಗಳು ಯಾವ ರೀತಿ ಶಬ್ದ ಮಾಡುತ್ತವೆ ಅನ್ನೋದನ್ನು ಕೇಳಿಸುವ ಮೂಲಕ ಕೇಳುಗರ ಕಿವಿಗಳಿಗೆ ಅಚ್ಚರಿ ಉಣಬಡಿಸಿದರು. ಅಷ್ಟೇ ಅಲ್ಲದೇ ಪಕ್ಷಿಲೋಕದೊಳಗೆ ಇಣುಕು ನೋಟ ಅನ್ನೋದಕ್ಕಿಂತ ಪಕ್ಷಿಗಳ ದೊಡ್ಡ ಲೋಕದ ನೋಟವೊಂದನ್ನು ತೋರಿಸುವ ಮೂಲಕ ನೋಡುಗರ ಕಣ್ಮನಗಳನ್ನು ತಂಪುಗೊಳಿಸಿದರು.

https://youtu.be/z7IYHr9-b4I

ದಿನಾಂಕ 13–03–2022 ರಂದು ಕನ್ನಡ ಬರಹಗಾರರು ಹಾಗೂ ಪುಸ್ತಕ ಪ್ರಕಾಶಕರಾದ ವಸುಧೇಂದ್ರ ರವರು "ಪುರಾಣ, ಇತಿಹಾಸ ಮತ್ತು ವರ್ತಮಾನ" ಎಂಬ ವಿಷಯದ ಬಗ್ಗೆ ಮಾತನಾಡಿದರು. ಪುರಾಣ ಮತ್ತು ಇತಿಹಾಸಕ್ಕೂ ಇರುವ ವ್ಯತ್ಯಾಸ ಹೇಗಿದೆ ಎಂಬುದನ್ನು ವೀರಪ್ಪನ್ ಹಾಗೂ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ರವರ ಚಿಕ್ಕವೀರರಾಜೇಂದ್ರ ನ ಉದಾಹರಣೆಗಳನ್ನು ಕೊಡುವ ಮೂಲಕ ತಿಳಿಸಿದರು. ರಾಮನ ವ್ಯಕ್ತಿತ್ವವನ್ನು ಇತಿಹಾಸ ಮಾಡದೆ ಯಾವಾಗ ಪುರಾಣ ಮಾಡುತ್ತಾರೋ ಆಗ ಆ ಪುರಾಣಗಳು ಹೆಚ್ಚು ಪ್ರಸಿದ್ಧಿ ಆಗುತ್ತದೆ ಎನ್ನುವುದು ಭಾರತೀಯರ ಕಲ್ಪನೆಯಾಗಿತ್ತು. ಹಾಗಾಗಿ ಪುರಾಣಗಳು ಕಾಲಾತೀತವಾದದ್ದು ಎಂದು ಹೇಳುವ ಮೂಲಕ ಪುರಾಣದ ಮಹತ್ವವನ್ನು ಹೇಳಿದರು. ಹಾಗೆಯೇ ಇತಿಹಾಸವನ್ನು ಯಾವಾಗಲು ರಾಜರ ಕಣ್ಣುಗಳಿಂದ ನೋಡಬಾರದು ಬದಲಾಗಿ ಜನ ಸಾಮಾನ್ಯರ ಕಣ್ಣುಗಳಿಂದ ನೋಡಿ ಏಕೆಂದರೆ ಜನಸಾಮಾನ್ಯರೇ ವರ್ತಮಾನವಾಗಿದ್ದಾರೆ ಎನ್ನುವ ಮೂಲಕ ಕೇಳುಗರ ಪ್ರಶ್ನೆಗಳಿಗೆ ಉತ್ತರವನ್ನು ನೀಡಿದರು.

https://youtu.be/_R-BrvKD5cA

ದಿನಾಂಕ 20–03–2022 ರಂದು ಸ್ತ್ರೀರೋಗ ಹಾಗೂ ಪ್ರಸೂತಿ ತಜ್ಞೆಯಾದ ಡಾ.ಸುನಂದಾ ಆರ್. ಕುಲಕರ್ಣಿಯವರು "ಭಾರತೀಯ ಪುರಾಣದ ಕತೆಗಳು ಮತ್ತು ವಿಜ್ಞಾನ ಎಂಬ ವಿಷಯದ ಬಗ್ಗೆ ಮಾತನಾಡಿದರು. "ಇತಿಹಾಸ ಅಂದರೆ ಅದಕ್ಕೆ ಡಾಕ್ಯುಮೆಂಟ್ ಇದೆ ಆದರೆ ಪುರಾಣಕ್ಕೆ ಡಾಕ್ಯುಮೆಂಟ್ ಇಲ್ಲ" ಎಂಬ ಹೇಳಿಕೆ ಮುಖಾಂತರ ಇವರ ಮಾತನ್ನು ಶುರು ಮಾಡಿದರು. ಅಲ್ಲದೇ ಪುರಾಣದಲ್ಲಿ ಎಷ್ಟು ಸತ್ಯ ಹಾಗೂ ಎಷ್ಟು ಸುಳ್ಳು ಇದೆ ಅನ್ನೋದರ ಹಲವಾರು ವಿಚಾರಗಳನ್ನು ಉದಾಹರಣೆಯ ಮೂಲಕ ತಿಳಿಸಿದರು. ಇತಿಹಾಸ ಹಾಗೂ ಪುರಾಣಗಳಲ್ಲಿ ಬರುವಂತಹ ವಿಶೇಷ ವ್ಯಕ್ತಿಗಳ, ಪ್ರಾಣಿಗಳ ಪರಿಚಯವನ್ನು ಮಾಡಿಕೊಡುವ ಮೂಲಕ ಅವುಗಳಲ್ಲಿ ಯಾವ ರೀತಿಯ ವ್ಯತ್ಯಾಸ ಇದೆ ಅನ್ನೋದನ್ನು ತಿಳಿಸಿದ್ರು. ರಾಮಾಯಣ ಹಾಗೂ ಮಹಾಭಾರತದ ಕೆಲವು ಪಾತ್ರಧಾರಿಗಳ ಕಟು ಸತ್ಯಗಳು ಹಾಗೂ ಪುರಾಣಗಳಲ್ಲಿ ಎಷ್ಟನ್ನ ನಂಬಬೇಕು ಹಾಗೂ ಎಷ್ಟನ್ನು ನಂಬಬಾರದು ಅನ್ನೋ ವಿಚಾರದ ಬಗ್ಗೆ ಕೂಡಾ ಕೆಲವು ಘಟನೆಗಳನ್ನು ನೆನೆಸಿದರು. ಕಾರ್ಯಕ್ರಮದ ಕೊನೆಯಲ್ಲಿ ಪ್ರಶ್ನಾವಳಿ ಕೂಡಾ ಇತ್ತು. ನಂತರದಲ್ಲಿ ಕೇಳುಗರು ಕೂಡಾ ಕಾರ್ಯಕ್ರಮಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

https://youtu.be/4BKnz1WRQiI

ದಿನಾಂಕ 27/03/2022 ರಂದು ಪ್ರೊ.ಕೆ.ಎನ್ ಗಣೇಶಯ್ಯ ಕೃಷಿ ವಿಜ್ಞಾನಿ ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ "ಕಲೆ ಮತ್ತು ವಿಜ್ಞಾನ" ಎಂಬ ವಿಷಯದಲ್ಲಿ ವಿದ್ವತ್ಪೂರ್ಣ ಉಪನ್ಯಾಸ ನೀಡಿದರು. ಕಲೆ ಮತ್ತು ವಿಜ್ಞಾನದ ಉದ್ದೇಶ ಹಾಗೂ ಗುರಿ ಒಂದೇ ಎನ್ನುವುದನ್ನು ವಿವರಿಸುತ್ತಾ ಸತ್ಯ ಹಾಗೂ ಸೌಂದರ್ಯದ ಬಗ್ಗೆ ಉದಾಹರಣೆಗಳನ್ನು ಕೊಡುತ್ತಾ ವಿಶ್ಲೇಷಣೆ ಮಾಡಿದರು.

ಚಾರಿತ್ರಿಕ ಘಟನೆಗಳನ್ನಾಧರಿಸಿ ತುಸು ಕಲ್ಪನೆ ಕುತೂಹಲ ಬೆರೆಸಿ ವಿಜ್ಞಾನ ಜೀವವೈವಿಧ್ಯ ಪರಿಸರದ ಕುರಿತ ಸರಳ ಭಾಷೆಯಲ್ಲಿ ಇವರು ಬರೆಯುತ್ತಿರುವ ಕಾದಂಬರಿಗಳು ಓದುಗರ ಗಮನ ಸೆಳೆಯುತ್ತಿದೆ.

https://youtu.be/8f--edfLgQA

ದಿನಾಂಕ 10/04/2022 ರಂದು ವೈದ್ಯ ವೃತ್ತಿಯಲ್ಲಿ ಮಾತ್ರವಲ್ಲದೆ ಭಾರತೀಯ ವೈದ್ಯಕೀಯ ಸಂಘದಲ್ಲಿ ಪೂರ್ಣಪ್ರಮಾಣದಲ್ಲಿ ತೊಡಗಿಸಿಕೊಂಡಿರುವ 2019–20 ರಲ್ಲಿ ರಾಜ್ಯ ಐ ಎಂ ಎ ಅಧ್ಯಕ್ಷರಾಗಿದ್ದ ಬಳ್ಳಾರಿ ಜಿಲ್ಲೆಯ ಸಿರಿಗುಪ್ಪ ತಾಲೂಕಿನ ಡಾ. ಮಧುಸೂಧನ ಕಾರಿಗನೂರು "ನಮ್ಮೂರಿನ ಆರೋಗ್ಯ ಜಾಗೃತಿ ಕಾರ್ಯಕ್ರಮಗಳು" ಎಂಬ ವಿಷಯದಲ್ಲಿ ತನ್ನೂರಿನ ಹಳ್ಳಿ ಹಳ್ಳಿಗಳಲ್ಲಿ ಆರೋಗ್ಯ ಮಾಹಿತಿಯನ್ನು ಹಾಡು, ನಾಟಕ, ಪ್ರಾತ್ಯಕ್ಷಿಕೆ, ಹಾಸ್ಯ ಪ್ರಹಸನ ಗಳ ಮೂಲಕ ಕೊಡುತ್ತಾ ಬಂದಿರುವುದನ್ನು ವಿವರಿಸಿದರು. ಸಮಾಜದ ಪ್ರತಿಭಾವಂತರನ್ನು ಒಟ್ಟು ಸೇ ರಿಸಿಕೊಂಡು ಡಾ. ಮಧುಸೂಧನ್ ಸರ್ ಅವರ ಈ ತರಹದ ಕಾರ್ಯಕ್ರಮಗಳು ಎಲ್ಲರಿಗೂ ಸ್ಫೂರ್ತಿ ನೀಡುವಂತಿತ್ತು.

https://youtu.be/oKBEgkJh_WM

17/04/2022 ರಂದು ಸಾಹಿತ್ಯೋಪಾಸಕರಾದ ಶ್ರೀ ಹೆಚ್.ಎ ವಾಸುಕಿಯವರು ಕವಿಕುಲಗುರು ಕಾಳಿದಾಸ ಮಹಾಕವಿಯ ಕುಮಾರಸಂಭವ ಮಹಾಕಾವ್ಯದ ಬಗ್ಗೆ ಉಪನ್ಯಾಸ ನೀಡಿದರು. ಎಂಟು ಸರ್ಗಗಳಲ್ಲಿ ಕಥೆ ವಿಸ್ತಾರವಾದ ಬಗೆ , ವರ್ಣನಾ ಚತುರತೆ, ಸನ್ನಿವೇಶಗಳನ್ನು ದೃಶ್ಯಕಾವ್ಯ ವಾಗಿಸಿದ ರೀತಿ, ಇಂದ್ರ–ಮನ್ಮಥ ಸಂಭಾಷಣೆಯ ಪ್ರಸ್ತುತತೆ, ಶಿವ–ಪಾರ್ವತಿಯ ಭೇಟಿಯ ಸಂಧರ್ಭಗಳಲ್ಲಿ ಮಾನವ ಸಹಜ ಭಾವಗಳನ್ನು/ಅವುಗಳನ್ನು ಮೀರಿದ ಪರಿಯನ್ನೂ ವಿಸ್ತರಿಸಿದರು. ಕಾವ್ಯವನ್ನು ಓದಲು ಪ್ರೇರಣೆ ನೀಡುವಂತೆ ಉಪನ್ಯಾಸ ಮೂಡಿಬಂತು

https://youtu.be/H6eM7FN9-wE

ದಿನಾಂಕ 24/04/2022 ರಂದು ಡಾ. ವಸುಂಧರಾ ಭೂಪತಿ ಯವರು "ಎಂ ಕೆ ಇಂದಿರಾ ಹಾಗೂ ಕೊಡಗಿನ ಗೌರಮ್ಮ ಅವರ ಬದುಕು ಮತ್ತು ಬರಹ" ದ ಬಗ್ಗೆ ವಿವರವಾದ ಉಪನ್ಯಾಸ ನೀಡಿದರು. ಕೊಡಗಿನ ಗೌರಮ್ಮ ಬದುಕಿದ ರೀತಿ, ತೋರಿದ ದಿಟ್ಟತನ. ತ್ಯಾಗಮನೋಭಾವ ಕತೆಗಳಲ್ಲಿ ಹೆಣ್ಣಿನ ನೋವು/ಸಮಾಜದಲ್ಲಿನ ಅನ್ಯಾಯದ ವಿರುದ್ಧ ಎತ್ತಿದ ಧ್ವನಿಯ ಬಗ್ಗೆ ವಿವರಿಸಿದರು. ಎಂ ಕೆ ಇಂದಿರಾ ಅವರ ಸಮೃದ್ಧ ಜೀವನದಿಂದ ಮೂಡಿದ ಸಮೃದ್ಧ ಸಾಹಿತ್ಯದ ಬಗ್ಗೆ ವಿಸ್ತರಿಸಿ ಮಾತಾಡಿದರು. ಬೇರೆ ಬೇರೆ ಸ್ತರಗಳಲ್ಲಿ ಮಹಿಳೆಯರ ಬವಣೆ ಸಂಕಟಗಳನ್ನು ವಿಶದವಾಗಿ ಬರೆದ ರೀತಿ ಅನನ್ಯ. ಡಾ. ವಸುಂಧರಾ ಭೂಪತಿ ಯವರೂ ಸಹ ಸಾಹಿತ್ಯ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವ ಬಗೆ ಯಾರಿಗೆ ಆದರೂ ಅಚ್ಚರಿ ಮೂಡಿಸುವಂತಹುದು ಹಾಗೂ ಅನುಕರಣೀಯವೂ ಹೌದು.

https://youtu.be/XQMIDky1G44



**ಡಾ. ವೀಣಾ ಭಟ್**
ವಿಭಾಗೀಯ ಸಂಪಾದಕರು ಮತ್ತು ಲೇಖಕರು
ಸ್ತ್ರೀರೋಗ ತಜ್ಞರು, ನಯನ ಆಸ್ಪತ್ರೆ ಭದ್ರಾವತಿ

ಸಾಂಸ್ಕೃತಿಕ

# ಶಾಖೆಗಳಲ್ಲಿ ಕನ್ನಡ ಕಾರ್ಯಕ್ರಮಗಳು




20/03/2022 ರಂದು ಐ.ಎಂ.ಎ ರಾಜ್ಯ ಶಾಖೆಯ ಸಭಾಂಗಣದಲ್ಲಿ ಬಳ್ಳಾರಿಯ ಜನಪ್ರಿಯ ವೈದ್ಯರೂ ಹಾಗೂ ಸಾಹಿತಿಗಳು ಮತ್ತು ಐ.ಎಂ.ಎ ಬರಹಗಾರರ ಬಳಗದ ಅಧ್ಯಕ್ಷರು ಆದ ಡಾ ಅರವಿಂದ್ ಪಟೇಲರ ಕವಿತಾ ಸಂಕಲನ "ಹಾಲು ಚೆಲ್ಲಿದ ಹೊಲ" ಖ್ಯಾತ ಸಾಹಿತಿಗಳಾದ ಶ್ರೀಯುತ ಬರಗೂರು ರಾಮಚಂದ್ರಪ್ಪರವರಿಂದ ಲೋಕಾರ್ಪಣೆಗೊಂಡಿತು. ಡಾ ಪಟೇಲರ ಬಳ್ಳಾರಿಯ ಅಭಿಮಾನಿ ಬಳಗದವರು ಹಲವು ಸಮಾನ ಮನಸ್ಕರು ಹಾಗೂ ಕಾವ್ಯಪ್ರೀತಿಯುಳ್ಳ ಜನರಿಂದ ಕಿಕ್ಕಿರಿದ ಸಭಾಂಗಣದಲ್ಲಿ ಕೃತಿಯ ಬಗ್ಗೆ ಪ್ರಾಧ್ಯಾಪಕಿ ಸೌಮ್ಯಾರವರು ಕೃತಿಯಲ್ಲಿರುವ ಕವಿತೆಗಳನ್ನ ಎಳೆಎಳೆಯಾಗಿ ಬಿಡಿಸಿ, ಒಳಗಿನ ಹೂರಣವನ್ನು ಬಡಿಸಿ ಶ್ರೋತೃಗಳ ಹೃದಯವನ್ನು ಆರ್ದ್ರಗೊಳಿಸಿದರು. ಐ.ಎಂ.ಎ ಬರಹಗಾರರ ಬಳಗದ ವತಿಯಿಂದ ಡಾ ಅರವಿಂದ್ ಪಟೇಲರವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಅರಸಿಕೇರೆಯ "ಕುರಿತೋದದೆಯುಂ.." ಸಾಹಿತ್ಯಾಸಕ್ತರ ಬಳಗ ಮಾರ್ಚ 20 ರಂದು ಹುಬ್ಬಳ್ಳಿಯ ಅರಿವಳಿಕೆ ತಜ್ಞ, ಗಜಲ್ ಕವಿ, ಡಾ ಗೋವಿಂದ ಹೆಗಡೆಯವರ ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಿತ್ತು. ಈ ಕಾರ್ಯಕ್ರಮದಲ್ಲಿ ಡಾ ಗೋವಿಂದ ಹೆಗಡೆಯವರು ಕನ್ನಡದಲ್ಲಿ ಗಜಲ್ ಕುರಿತಾಗಿ ವಿವರಿಸಿದರು. ಗಜಲ್ ನ ಹುಟ್ಟು, ವಿಕಾಸ, ಭಾರತಕ್ಕೆ ಕನ್ನಡಕ್ಕೆ ಬಂದ ಬಗೆ, ಗಜಲ್ ನ ಸ್ವರೂಪ, ಅಲ್ಲಿ ಬಳಸಲಾಗುವ ಲಾಕ್ಷಣಿಕ ಶಬ್ದಗಳು, ವಿವಿಧ ಪ್ರಕಾರಗಳು, ಇತ್ತೀಚಿನ ಬೆಳವಣಿಗೆಗಳು, ತಮ್ಮ ಗಜಲ್ ಒಡನಾಟ, ಗಜಲ್ ನಲ್ಲಿ ನಡೆಸಿದ ಪ್ರಯೋಗಗಳು ಹೀಗೆ ವಿವಿಧ ಆಯಾಮಗಳನ್ನು ತೆರೆದಿಟ್ಟರು. ಕೊನೆಯಲ್ಲಿ ನಡೆದ ಪ್ರಶ್ನೋತ್ತರ ಚರ್ಚೆ ತುಂಬ ಸತ್ವ ಪೂರ್ಣವಾಗಿತ್ತು. ಬರಹಗಾರರ ಸಮಿತಿಯಿಂದ ವೈದ್ಯ ಬರಹಗಾರರಿಗೆ ಗಜಲ್ ಕಾರ್ಯಾಗಾರವನ್ನು ಜೂನನಲ್ಲಿ ಆಯೋಜಿಸಲು ನಿರ್ಧರಿಸಲಾಗಿದ್ದು ಡಾ ಗೋವಿಂದ ಹೆಗಡೆಯವರಿಗೆ ನೇತೃತದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗುವುದು.

ಸಿರಗುಪ್ಪಾ ತಾಲ್ಲೂಕಿನ ಜನಪ್ರಿಯ ಶಸ್ತ್ರಚಿಕಿತ್ಸಾ ತಜ್ಞರು ಮತ್ತು ಜನಪರ ಕಾಳಜಿಯುಳ್ಳ ವೈದ್ಯರು ಹಾಗೂ ಐ.ಎಂ.ಎ ರಾಜ್ಯ ಶಾಖೆಯ ಮಾಜಿ ರಾಜ್ಯಾಧ್ಯಕ್ಷರು ಆದ ಡಾ ಮಧುಸೂದನ ಕಾರಿಗನೂರು ರವರು ಕನ್ನಡ ಸಾಹಿತ್ಯ ಪರಿಷತ್ತು, ತಾಲ್ಲೂಕು ಘಟಕ ಶಿರಗಿಪ್ಪಾದ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವುದು ನಮ್ಮೆಲ್ಲರಿಗೆ ಹೆಮ್ಮೆಯ ವಿಷಯ. ಅವರ ಜನಪರ ಹಾಗು ಸಾಹಿತ್ಯಿಕ ಚಟುವಟಿಕೆಗಳು ಇನ್ನಷ್ಟು ವಿಸ್ತೃತರೂಪ ಪಡೆಯಲಿ ಎಂಬುದು ಎಲ್ಲರ ಆಶಯ.

ಡಾ ಉಮೇಶ್ ಪುತ್ರನ್‌ರವರು ಜನಪ್ರಿಯ ತಜ್ಞ ವೈದ್ಯರು ಮತ್ತು ಸಾಹಿತಿಗಳು ಕ.ಸಾ.ಪ ಕುಂದಾಪುರ ತಾಲ್ಲೂಕು ಘಟಕದ ಅಧ್ಯಕ್ಷರಾಗಿದ್ದು ಹಲವು ಜನಪರ ಸಾಹಿತ್ಯಿಕ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿರುವುದು, ಉಡುಪಿ ಜಿಲ್ಲಾ 15ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡಿರುವುದು ಶ್ಲಾಘನೀಯ. ಅವರ ಕಾರ್ಯಚಟುವಟಿಕೆಗಳು ಇನ್ನು ವಿಸ್ತಾರವಾಗಲಿ ಎಂದು ನಮ್ಮೆಲ್ಲರ ಆಶಯ.

ವೈದ್ಯ ಬರಹಗಾರರ ಮೂಲ ಸಂಘಟಕರಾದ ಹಾಗೂ ಇತ್ತೀಚೆಗೆ ಮಂಗಳೂರು ಕುಟುಂಬ ವೈದ್ಯರ ಸಂಘಟನೆಯ ನೂತನ ಅಧ್ಯಕ್ಷರಾಗಿಯೂ ಆಯ್ಕೆಯಾದ ಡಾ ಅಣ್ಣಯ್ಯ ಕುಲಾಲ್ ಉಳ್ತೂರ್ ರವರು ಇತ್ತೀಚೆಗೆ ಮುಲ್ಕಿ ಸಮೀಪದ ಕೊಲ್ನಾಡಿನಲ್ಲಿ ರಾಜ್ಯಮಟ್ಟದ ಕೃಷಿಮೇಳದ ಸಂಚಾಲಕರಾಗಿ ಅತ್ಯುತ್ತಮವಾಗಿ ಸಮ್ಮೇಳನ ನಡೆಸಿಕೊಟ್ಟರು ಮತ್ತು "ಕೃಷಿ ಮತ್ತು ಆರೋಗ್ಯ" ಎನ್ನುವ ವಿಚಾರಗೋಷ್ಠಿಯಲ್ಲಿ ಹೃದಯಕ್ಕೆ ಬಿದ್ದ ಅಕ್ಷರ, ಭೂಮಿಗೆ ಬಿದ್ದ ಬೀಜ ಮತ್ತು ಭೂಮಿಗೆ ಬಿದ್ದ ಕೃಷಿಕನ ಬೆವರು ಎಂದಿಗೂ ವ್ಯರ್ಥವಾಗುವುದಿಲ್ಲ ಎನ್ನುವುದನ್ನು ಉದ್ಧರಿಸುತ್ತಾ ನಾವು ಪ್ರಕೃತಿಯೊಡನೆ ಸಹಜೀವನ ನಡೆಸಬೇಕೆಂದು ಅಭಿಪ್ರಾಯಪಟ್ಟರು ಮತ್ತು ಅಧ್ಯಕ್ಷತೆ ವಹಿಸಿದ ಡಾ ಪ್ರಶಾಂತ್‌ಭಟ್‌ರವರು ನಾವು ಸಾವಯವ ಗೊಬ್ಬರ ಬಳಸಿ ಕೃಷಿ ಮಾಡುವ ಮೂಲಕ ಮಕ್ಕಳ ಆರೋಗ್ಯವನ್ನು ರಕ್ಷಿಸಬೇಕು. ವಿಷಕಾರಿ ಕೀಟನಾಶಕ ಬಳಸಿ ಉತ್ಪತ್ತಿ ಮಾಡಿರುವ ತರಕಾರಿ ಮತ್ತು ಹಣ್ಣು ಸೇವನೆಗಳಿಂದ ಆರೋಗ್ಯ ಹದಗೆಡುತ್ತದೆ. ಸಾವಯವ ಕೃಷಿಯಿಂದ ಆರೋಗ್ಯ ರಕ್ಷಿಸಿಕೊಳ್ಳಬೇಕು ಎಂದು ತಿಳಿಸಿದರು.

ಹೊನ್ನಾವರ ಐ.ಎಂ.ಎ ಹಾಗೂ ಮಹಿಳಾ ವೈದ್ಯ ಘಟಕದ ವತಿಯಿಂದ ಮಾರ್ಚ್ 20ರಂದು ಮಹಿಳಾ ದಿನಾಚರಣೆಯನ್ನು ಆಚರಿಸಿ ವಿವಿಧ ಕ್ಷೇತ್ರಗಳಲ್ಲಿ ಅಮೋಘ ಸೇವೆ ಸಲ್ಲಿಸಿದ 8 ಮಹಿಳಾ ಮಣಿಗಳನ್ನು ಸನ್ಮಾನಿಸಲಾಯಿತು. ಜೊತೆಗೆ ಹೊಸ ಕಾನೂನಿನಡಿಯಲ್ಲಿ ಮಹಿಳಾ ಹಕ್ಕುಗಳು ಮತ್ತು ಶಿಶು ನಿಂಧನೆಯ ಬಗ್ಗೆ ಶ್ರೀಮತಿ ಶರಾವತಿ ಹೆಗ್ಗಡೆಯವರ ಉಪನ್ಯಾಸ ಜೊತೆಗೆ ಡಾ.ಹೆಚ್.ಎಸ್ ಅನುಪಮಾ ರವರು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಬಗ್ಗೆ ಮತ್ತು ಡಾ ಮಂಜುಳಾ ಯುವರಾಜ್‌ರವರು ಲೈಂಗಿಕ ಸಮಾನತೆಯಲ್ಲಿ ಹೊಸತಿರುವುಗಳು ಎನ್ನುವ ವಿಷಯದ ಕುರಿತು ಉಪನ್ಯಾಸ ನಡೆಸಿಕೊಟ್ಟರು. ಡೌನ್‌ಸಿಂಡ್ರೋಮ್ ಬಗ್ಗೆ ಕಾಸರಗೋಡಿನಲ್ಲಿ ಹಮ್ಮಿಕೊಂಡ ಮಾಹಿತಿ ಕಾರ್ಯಕ್ರಮದಲ್ಲಿ ಡೌನ್‌ಸಿಂಡ್ರೋಮ್‌ಗೆ ಕಾರಣಗಳು ಜೊತೆಗೆ ಕ್ಷಯರೋಗ ನಿರ್ಮೂಲನೆಯ ಬಗ್ಗೆ, ರೋಗಲಕ್ಷಣ ಹಾಗೂ ತಡೆಗಟ್ಟುವ ಕ್ರಮಗಳ ಬಗ್ಗೆ ಮಾಹಿತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ವಿಶ್ವ ಆರೋಗ್ಯ ದಿನ ಹಾಗೂ ಆರೋಗ್ಯಪೂರ್ಣ ತಾಯ್ತನದ ಜಾಗೃತಿದಿನದ ನಿಮಿತ್ತ ಹೊನ್ನಾವರ ಹಾಗೂ ಸುತ್ತಮುತ್ತಲಿನ ಮಹಿಳೆಯರಿಗೆ ಗರ್ಭಿಣಿ ಸ್ತ್ರೀಯರ ಆರೈಕೆ ಪ್ರಸವಪೂರ್ವ ಹಾಗೂ ನಂತರ ತೆಗೆದುಕೊಳ್ಳಬೇಕಾದ ಸುರಕ್ಷತೆಯ ಬಗ್ಗೆ ಪೌಷ್ಟಿಕ ಆಹಾರದ ಮಹತ್ವದ ಬಗ್ಗೆ ಅರಿವು ಮೂಡಿಸುವ ಕಾರ್ಯಾಗಾರವನ್ನು ಕೂಡ ಭಾರತೀಯ ವೈದ್ಯಕೀಯ ಸಂಘ ಹೊನ್ನಾವರ ಮಹಿಳಾ ಘಟಕವು ದುರ್ಗಾಕೇರಿ ದಂಡಿನ ಸಭಾ ಭವನದಲ್ಲಿ ಸ್ತ್ರೀರೋಗ ತಜ್ಞರಾದ ಡಾ ಸಾಬೂರ ಬಿ.ವಿ ಅವರ ನೇತೃತ್ವದಲ್ಲಿ ನಡೆಸಿದರು.

27/03/2022 ರಂದು ಭದ್ರಾವತಿಯ ನಯನ ಸಭಾಂಗಣದಲ್ಲಿ ಭಾರತೀಯ ವೈದ್ಯಕೀಯ ಸಂಘ, ಭದ್ರಾವತಿ ಶಾಖೆಯ "ಕನ್ನಡಬಳಗ"ವನ್ನು ಮಿಸ್ ಸುಪ್ರಾ ನ್ಯಾಷನಲ್ ಆದ ಭದ್ರಾವತಿಯ ಕುಮಾರಿ ಆಶಾಭಟ್ ರವರು ಉದ್ಘಾಟಿಸಿದರು. ಬಳಗದ ಗೌರವಾಧ್ಯಕ್ಷರಾದ ಡಾ ಕೃಷ್ಣ ಎಸ್ ಭಟ್ ಹಾಗೂ ಕಾರ್ಯದರ್ಶಿಗಳಾದ ಡಾ ವೀಣಾ ಭಟ್, ಐ.ಎಂ.ಎ ಅಧ್ಯಕ್ಷರಾದ ಡಾ ಕುಮಾರಸ್ವಾಮಿ ಪಿ.ಆರ್ ಹಾಗೂ ಉಪಾಧ್ಯಕ್ಷರಾದ ಡಾ ಕವಿತಾ, ಹಿರಿಯ ವೈದ್ಯರಾದ ಡಾ ಆರ್.ಸಿ.ಬೆಂಗಳೂರು, ಡಾ ಸ್ವರ್ಣಲತಾ, ಡಾ ರಾಮಕೃಷ್ಣ, ಡಾ






ಕೆ.ಜಿ.ಭಟ್ ರವರು ಉಪಸ್ಥಿತರಿದ್ದರು. ಚಿತ್ರನಟ ಹಾಗೂ ನಿರ್ದೇಶಕರಾದ ಶ್ರೀ ಎಂ.ಡಿ.ಕೌಶಿಕ್‌ರವರು "ಜೀವನವೆಂಬ ಮಾಂತ್ರಿಕತೆಯಲ್ಲಿ ಹಾಸ್ಯ/ಅಪಹಾಸ್ಯ ಎಂಬ ವಿನೂತನ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ವಿಶ್ವ ಆರೋಗ್ಯ ದಿನದ ಸಲುವಾಗಿ ಭದ್ರಾವತಿ ಐ.ಎಂ.ಎ ಯಿಂದ ಉತ್ತಮ ಆರೋಗ್ಯಕ್ಕಾಗಿ ಉತ್ತಮ ದಿನಚರಿ ಹೇಗಿರಬೇಕೆಂದು ಕರಪತ್ರಗಳನ್ನು ಸಾರ್ವಜನಿಕರಿಗೆ ಹಂಚಲಾಯಿತು.

03/04/2022 ರಂದು ಸಾಗರದಲ್ಲಿ ಖ್ಯಾತ ನೇತ್ರ ತಜ್ಞರು ಹಾಗೂ ಸಾಹಿತಿಗಳು ಆದ ಡಾ ಹೆಚ್.ಎಸ್. ಮೋಹನ್‌ರವರ "ಕರೋನ–ವಿವಿಧ ಮುಖಗಳು" ಎನ್ನುವ ಕೃತಿಯನ್ನು ಖ್ಯಾತ ತಜ್ಞ ವೈದ್ಯರಾದ ಡಾ ಶ್ರೀಕಾಂತ್ ಹೆಗ್ಗಡೆ ಶಿವಮೊಗ್ಗ ಇವರು ಬಿಡುಗಡೆಗೊಳಿಸಿದರು. ಡಾ ಕೆ.ಶುಭ್ರತಾ ಕೃತಿಪರಿಚಯ ಮಾಡಿದರು, ಡಾ ಜಿ.ಎಸ್ ಭಟ್ ಅತಿಥಿಗಳಾಗಿ ಆಗಮಿಸಿದ್ದರು ಹಾಗೂ ಡಾ ಕೆ.ಸ್.ಶ್ರೀಧರ್ ಅಧ್ಯಕ್ಷತೆ ವಹಿಸಿದ್ದರು.


## ಕನ್ನಡ ಸಾಹಿತ್ಯ ಪರಿಷತ್ತು ತಾಲ್ಲೂಕು ಘಟಕ ಸಿರುಗುಪ್ಪ



ಸಿರುಗುಪ್ಪ ತಾಲ್ಲೂಕಿನ ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಘಟಕಕ್ಕೆ ಸಿರುಗುಪ್ಪದ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಶ್ರೀ ಡಾ.ಮಧುಸೂದನ ಕಾರಿಗನೂರು ಅವರಿಗೆ ಅಭಿನಂದನೆಗಳು


03/04/2022 ರಂದು ಖ್ಯಾತ ವೈದ್ಯ ಬರಹಗಾರರಾದ ಡಾ ನಾ.ಸೋಮೇಶ್ವರ ರವರ "ಹೊಟ್ಟೆಯೊಳಗೊಂದು ಮಿದುಳು" ಹಾಗೂ ಡಾ ವಿನೋದ್ ಕುಲಕರ್ಣಿಯವರ "ತಲ್ಲಣಿಸದಿರು ಮನವೇ" ಎಂಬ ಪುಸ್ತಕಗಳು ವಿಕ್ರಂ ಪ್ರಕಾಶನದಿಂದ ಲೋಕಾರ್ಪಣೆಗೊಂಡವು. ನಿಕಟಪೂರ್ವ ಸಚಿವರಾದ ಶ್ರೀಯುತ ಸುರೇಶ್ ಕುಮಾರ್ ಅವರು ಬಿಡುಗಡೆ ಮಾಡಿದರು. ಶ್ರೀಯುತ ನಾಗಾಭರಣರವರು ಅಧ್ಯಕ್ಷತೆ ವಹಿಸಿದ್ದರು.

ಡಾ ಕುಶ್ವಂತ್ ಕೋಳಿಬಯಿಲ್ ಅವರ ಕೂರ್ಗ್ ರೆಜಿಮೆಂಟ್ ಪುಸ್ತಕಕ್ಕೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರತಿರುವುದು ಅಭಿನಂದನೀಯ. ಹಾಗೂ ಡಾ ಎಸ್.ಪಿ.ಯೋಗಣ್ಣ ರವರ ಅಧ್ಯಾತ್ಮಿಕ ಆರೋಗ್ಯದರ್ಶನಕ್ಕೆ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗೆ ಅಭಿನಂದನೆಗಳು.

ಐ.ಎಂ.ಎ ಯ ಹಲವು ಶಾಖೆಗಳಿಂದ ವಿಶ್ವ ಆರೋಗ್ಯ




ದಿನಾಚರಣೆ ಹಾಗೂ ಸುರಕ್ಷಿತ ಮಾತೃತ್ವ ದಿನಗಳನ್ನು ಆಚರಿಸಲಾಗಿದೆ. ವೈದ್ಯ ಸಮುದಾಯದಿಂದ ಹಲವು ಕೃತಿಗಳು ಹೊರಹೊಮ್ಮಲಿ. ಕನ್ನಡಕ್ಕಾಗಿ ದುಡಿಯುವ, ಕನ್ನಡ ಸಾಹಿತ್ಯವನ್ನ, ವೈದ್ಯಸಾಹಿತ್ಯವನ್ನು ಹೆಚ್ಚು ಹೆಚ್ಚು ಪೋಷಿಸಿ, ಪುರಸ್ಕರಿಸುವ ಕನ್ನಡಪರ ಮನಸ್ಸುಗಳು ಹೆಚ್ಚಲಿ ಎಂದು ಆಶಿಸುತ್ತಾ...



ಆರೋಗ್ಯ ದಿನಾಚರಣೆ

# ವಿಶ್ವ ಅಧಿಕ ರಕ್ತದೊತ್ತಡ ದಿನಾಚರಣೆ ೨೦೨೨


**ಡಾ ಪ್ರಿಯ ಭಾಲ್ಕಿ**
ಎಂ ಡಿ (ವೈದ್ಯ ಶಾಸ್ತ್ರ), ಚಿಕಿತ್ಸಕ ವೈದ್ಯರು
ರಾಯಚೂರು ವೈದ್ಯ ವಿಜ್ಞಾನಗಳ ಸಂಸ್ಥೆ, ರಾಯಚೂರು



**ಡಾ. ರಶ್ಮಿ ಕುಂದಾಪುರ**
ವಿಭಾಗೀಯ ಸಂಪಾದಕರು

ವಿಶ್ವ ಅಧಿಕ ರಕ್ತದೊತ್ತಡ ಲೀಗನ ನೇತೃತ್ವದಲ್ಲಿ ಪ್ರತಿ ವರುಷ ಮೇ 17 ರಂದು ವಿಶ್ವ ಅಧಿಕ ರಕ್ತದೊತ್ತಡ ದಿನವನ್ನು 2005 ರಿಂದ ಆಚರಿಸಲಾಗುತ್ತಿದೆ. 1984 ರಲ್ಲಿ ಸ್ಥಾಪಿತವಾದ ಸುಮಾರು 85 ರಾಷ್ಟ್ರೀಯ ಸಂಘ ಸಂಸ್ಥೆಗಳನ್ನು ಹೊಂದಿರುವ ಲೀಗನ ಉದ್ದೇಶ ಅಧಿಕ ರಕ್ತದೊತ್ತಡದ ಕುರಿತು ಅರಿವನ್ನು ಮೂಡಿಸುವುದಾಗಿದೆ. 2005 ರಲ್ಲಿ "ಅಧಿಕ ರಕ್ತದೊತ್ತಡದ ಕುರಿತು ಅರಿವು" ಎಂಬ ಘೋಷಣೆಯೊಂದಿಗೆ ಆರಂಭಿಸಲಾದ ಈ ಜಾಗೃತಿ ಅಭಿಯಾನ 2013–18 ರ ವರೆಗೆ ನಿಮ್ಮ ಸಂಖ್ಯೆ (ರಕ್ತದೊತ್ತಡ) ಅರಿಯಿರಿ ಎನ್ನುವುದರ ಮೂಲಕ ವಿಶ್ವದಾದ್ಯಂತ ರಕ್ತದೊತ್ತಡ ಅಳೆಯಲು ಮತ್ತು ಅಧಿಕ ರಕ್ತದೊತ್ತಡದ ದುಷ್ಪರಿಣಾಮಗಳ ಕುರಿತು ಅರಿವನ್ನು ಮೂಡಿಸಲು ಪ್ರಯತ್ನಿಸಿತು. "ನಿಮ್ಮ ರಕ್ತದೊತ್ತಡವನ್ನು ಅಳೆಯಿರಿ, ನಿಯಂತ್ರಿಸಿರಿ, ದೀರ್ಘಕಾಲ ಜೀವಿಸಿ" ಎನ್ನುವುದು ಈ ವರುಷದ ಘೋಷಣೆಯಾಗಿದೆ.

ಭಾರತದಲ್ಲಿ ಶೇ 30 ರಷ್ಟು ಮಧ್ಯ ವಯಸ್ಸಿನ ವ್ಯಕ್ತಿಗಳು ಅಧಿಕ ರಕದತದೊತ್ತಡದಿಂದ ಬಳಲುತ್ತಿದ್ದಾರೆಂದು ಅಂಕಿ ಅಂಶಗಳು ಸೂಚಿಸುತ್ತಿವೆ. ಅದರಲ್ಲಿ ಶೇ 60 ರಷ್ಟು ಜನರಿಗೆ ಅರಿವಿರುವುದಿಲ್ಲವಂತೆ. ಶೆ 30 ರಷ್ಟು ರೋಗಿಗಳು 30 ರಿಂದ 45 ವರುಷದೊಳಿಗಿನವರು ಎಂಬುದು ಕಳವಳಕಾರಿ ವಿಷಯ. ಶೇ 10.8 ರಷ್ಟು ಸಾವಿಗೆ ಅಧಿಕ ರಕ್ತದೊತ್ತಡ ಕಾರಣವೆಂದು ಕಂಡು ಬಂದಿದೆ. ಶೇ 57 ರಷ್ಟು ಪಾರ್ಶ್ವವಾಯುವಿನಿಂದ ಮತ್ತು ಶೇ 24 ರಷ್ಟು ಹೃದಯಾಘಾತದಿಂದ ಸಂಭವಿಸುವ ಸಾವಿಗೂ ಅಧಿಕ ರಕ್ತದೊತ್ತಡ ಕಾರಣ. ಅಧಿಕ ರಕ್ತದೊತ್ತಡದಿಂದ ಪಾರ್ಶ್ವವಾಯು, ಹೃದಯಾಘಾತ, ಬಲ ಹೀನ ಹೃದಯ ಮೂತ್ರಕೋಶದ ವೈಫಲ್ಯ, ದೃಷ್ಠಿ ಹೀನತೆ ಉಂಟಾಗುವ ಸಾಧ್ಯತೆ ಹೆಚ್ಚಾಗುತ್ತದೆ.




ಅಧಿಕ ರಕ್ತದೊತ್ತಡಕ್ಕೆ ಪ್ರಮುಖ ಕಾರಣ 90 ಕ್ಕೂ ಹೆಚ್ಚು ಜನರಲ್ಲಿ ಕಂಡು ಬರುವುದಿಲ್ಲ. ಆದರೆ ಕೆಲವರಲ್ಲಿ ರಕ್ತನಾಳಗಳ ಸಂಕುಚನದಿಂದ, ಮೂತ್ರಕೋಶಗಳ ವೈಫಲ್ಯದಿಂದ, ಗ್ರಂಥಿಗಳ ಕಾರ್ಯದಲ್ಲಿ ವ್ಯತ್ಯಯದಿಂದ ಅಧಿಕ ರಕ್ತದೊತ್ತಡ ಉಂಟಾಗಬಹುದು. ಅಂತಹ

ತೊಂದರೆಯಿಂದ ಬಳಲುವವರನ್ನು ಪೂರ್ಣವಾಗಿ ಗುಣಪಡಿಸಬಹುದು. ಆದರೆ ಅಧಿಕ ರಕ್ತದೊತ್ತಡವಿರುವ ಬಹಳಷ್ಟು ರೋಗಿಗಳು ನಿರಂತರ ಜೀವನ ಪರ್ಯಂತ ಮಾತ್ರೆಗಳನ್ನು ಸೇವಿಸಬೇಕಾಗುತ್ತದೆ.

ಅಧಿಕ ರಕ್ತದೊತ್ತಡ ಜೀವನ ಶೈಲಿಗೆ ಸಂಬಂಧಿಸಿದ



Getty/indianexpress.com

ಸಮಸ್ಯೆಯಾಗಿದ್ದು ಬೊಜ್ಜುತನ, ಮಧುಮೇಹ, ಅಧಿಕ ಕೋಲೆಸಟ್ರಾಲ ಸಮಸ್ಯೆಗಳೊಂದಿಗೆ ಕಂಡು ಬರುತ್ತದೆ.

ಜೀವನ ಶೈಲಿಯ ಬದಲಾವಣೆಯಿಂದ ಅಧಿಕ ರಕ್ತದೊತ್ತಡವನ್ನು ನಿಯಂತ್ರಿಸಬಹುದು ಮತ್ತು ಸೇವಿಸುವ ಮಾತ್ರೆಗಳ ಪ್ರಮಾಣವನ್ನು ಕಡಿಮೆಮಾಡಬುಹುದು. 1 ಕೆಜಿ ದೇಹದ ತೂಕ ಕಡಿಮೆ ಮಾಡುವದರಿಂದ 1 ಎಮೆಮ್ ಹೆಚ್ ಜಿ ರಕ್ತದೊತ್ತಡ ಕಡಿಮೆಯಾಗುವುದು. ಡಾಶ್ ಆಹಾರ ಬಳಕೆಯಿಂದ (ತಾಜಾ ಹಣ್ಣು, ತರಕಾರಿಗಳು, ಸಂಪೂರ್ಣ ಧವಸ ಧಾನ್ಯಗಳಿಂದ ಸಿದ್ಧ ಪಡಿಸಿದ ಆಹಾರ, ಅತಿ ಕಡಿಮೆ ಉಪ್ಪು, ಕಡಿಮೆ ಸಾಟುರೆಟೆಡ ಕೊಬ್ಬಿನ ಬಳಕೆ) ಮೂಲಕ 11 ಎಮೆಮ್ ಹೆಚ್ ಜಿ ರಕ್ತದೊತ್ತಡ ಕಡಿಮೆಯಾಗುವುದು. ನಿತ್ಯ ಉಪ್ಪಿನ ಬಳಕೆಯನ್ನು 1.5 ಗ್ರಾಂ ಗಿಂತ ಕಡಿಮೆ ಮಾಡಿದರೆ 5 ಎಮೆಮ್ ಹೆಚ್ ಜಿ ರಕ್ತದೊತ್ತಡ ಕಡಿಮೆಯಾಗುವುದು. ಹಾಗೆಯೆ ಪೊಟ್ಯಾಸಿಯಮ್ ಬಳಕೆಯನ್ನು 1.5 ರಿಂದ 3 ಗ್ರಾಂ ಹೆಚ್ಚಿಸಿದರೆ 5 ಎಮೆಮ್ ಹೆಚ್ ಜಿ ರಕ್ತದೊತ್ತಡ ಕಡಿಮೆಯಾಗುವುದು. ದೈಹಿಕ ಚಟುವಟಿಕೆಯ ಹೆಚ್ಚಳ ಮತ್ತು ಮದ್ಯಪಾನ ನಿಯಂತ್ರಣದಿಂದಲೂ 5 ಎಮೆಮ್ ಹೆಚ್ ಜಿ ರಕ್ತದೊತ್ತಡ ಕಡಿಮೆಯಾಗುವುದು. ಅಧಿಕ ರಕ್ತದೊತ್ತಡ ತಡೆಗಟ್ಟಲು ಮತ್ತು ನಿಯಂತ್ರಿಸಲು ಉತ್ತಮ ಜೀವನ ಶೈಲಿ ಅತ್ಯವಶ್ಯಕ. ಟೆನ್ಶನ್ ನಿಂದ ಹೈಪರ್ ಟೆನ್ಶನ್ ಎಂಬುದು ನಿಜವಾದ ಮಾತು. ಆತಂಕ, ಖಿನ್ನತೆ ಮತ್ತು ಮಾನಸಿಕ ಒತ್ತಡ ನಮ್ಮ ರಕ್ತದೊತ್ತಡದ ಮೇಲೆ ಹಾನಿಕಾರಕ ಪರಿಣಾಮ ಬೀರುತ್ತವೆ. ಇದನ್ನು ತಡೆಗಟ್ಟಲು ಯೋಗ ಮತ್ತು ಧ್ಯಾನ ಅವಶ್ಯಕ. ಮಾನಸಿಕ ವಿಶ್ರಾಂತಿಯಿಂದ ದೇಹಕ್ಕೆ ಮತ್ತು ರಕ್ತನಾಡಿಗಳಿಗೂ ವಿಶ್ರಾಂತಿ ದೊರಕುವುದು. ಇದರಿಂದ 5 ಎಮೆಮ್ ಹೆಚ್ ಜಿ ರಕ್ತದೊತ್ತಡ ಕಡಿಮೆಯಾಗುವುದು ಎಂದು ಕಂಡು ಬಂದಿದೆ. ಒಬ್ಬ ಸಾಮಾನ್ಯ ವ್ಯಕ್ತಿಗೆ 6 ರಿಂದ 8 ಗಂಟೆಗಳ ಉತ್ತಮ ಗಾಢ ನಿದ್ರೆ ಅವಶ್ಯಕ. ಸಾಮಾನ್ಯವಾಗಿ ಮಲಗಿರುವಾಗ ರಕ್ತದೊತ್ತಡ ಕಡಿಮೆಯಾಗುತ್ತದೆ. ಈ ರಾತ್ರಿ ಇಳಿಕೆ ಶೇ 10 ಕ್ಕೂ ಕಡಿಮೆ ಇದ್ದಲ್ಲಿ ಹೃದಯ ರಕ್ತನಾಳಗಳ ಮೇಲೆ ಗಂಡಾಂತರವೆಂದು ಕಂಡು ಬಂದಿದೆ.

ಉತ್ತಮ ಜೀವನ ಶೈಲಿಯಿಂದ ಅಧಿಕ ರಕ್ತದೊತ್ತಡವನ್ನು ತಡೆಗಟ್ಟಬಹುದು ಮತ್ತು ನಿಯಂತ್ರಿಸಬಹುದು. ಒತ್ತಡವಿಲ್ಲದ ಸಂತೋಷದ ಜೀವನದಿಂದ ದೀರ್ಘಾಯುಷ್ಯವನ್ನು ಹೊಂದಬಹುದು. ಬನ್ನಿ ಸದಾ ನಗು ನಗುತ್ತಾ ಎಲ್ಲರನ್ನೂ ನಗಿಸುತ್ತಾ ಬದುಕೋಣ.

## ಪದಕೋಶ:

**ಆ್ಯನೆಮ್ನೆಸಿಸ್:**
(ರೋಗಿಯ) ಪೂರ್ವಚರಿತ್ರೆ; ಆರೋಗ್ಯದ ಕತೆ; ತನ್ನ ದೇಹಸ್ಥಿತಿ, ಆರೋಗ್ಯ, ಅನಾರೋಗ್ಯ, ಅದಕ್ಕಾಗಿ ತೆಗೆದುಕೊಂಡ ಔಷಧಿ, ಒಳಪಟ್ಟ ಚಿಕಿತ್ಸೆ, ಅವುಗಳ ಪರಿಣಾಮ, ಮೊದಲಾದವುಗಳ ಬಗ್ಗೆ ರೋಗಿಯು ನೀಡುವ ವಿವರಣೆ.

**ಎಫೆಮೆರಲ್:**
(ರೋಗಗಳ ವಿಷಯದಲ್ಲಿ) ದಿನಾವಧಿ; ಒಂದು ದಿನ ಮಾತ್ರವಿರುವ.

**ಅಜ್ಞೋದ:**
ಶುದ್ಧವಾದ ನೀರು

**ಆಲಿ:**
ಕಣ್ಣುಗುಡ್ಡೆ, ಗೆಳತಿ, ದೃಷ್ಟಿ, ಬಯಕೆ, ಸಾಲು, ಆಲಿಕಲ್ಲು.

**ಆ್ಯನಲೆಪ್ಟಿಕ್:**
(ವೈದ್ಯಶಾಸ್ತ್ರ) ಉತ್ತೇಜಕ; ಚೇತಕ; ಶಕ್ತಿವರ್ಧಕ.

3ನೇ ಪುಟದಿಂದ

ಕೇಂದ್ರ ಸ್ಥಾಪಿಸಲಾಗುವುದು. ಬೆಳಗಾವಿಯಲ್ಲಿ 50 ರೂ ಕೋಟಿ ವೆಚ್ಚದಲ್ಲಿ ಕಿದ್ವಾಯಿ ಪ್ರಾದೇಶಿಕ ಕ್ಯಾನ್ಸರ್ ಕೇಂದ್ರ ಸ್ಥಾಪನೆ ಮಾಡಲಾಗುವುದು.

ಆಯ್ದ 10 ವೈದ್ಯಕೀಯ ವಿಜ್ಞಾನ ಸಂಸ್ಥೆಗಳ್ಲಿ ಕ್ಯಾನ್ಸರ್ ರೋಗಿಗಳಿಗೆ ಕಿಮೋ ಥೇರಪಿ ನೆರವು ಒದಗಿಸಲಾಗುವುದು.




ಏಳು ತಾಲೂಕು ಆಸ್ಪತ್ರೆಗಳು 100 ಹಾಸಿಗೆಗಳ ಆಸ್ಪತ್ರೆಯಾಗಿ ಮೇಲ್ದರ್ಜೆಗೆ. ತುಮಕೂರಿನಲ್ಲಿ 20 ಕೋಟಿ ವೆಚ್ಚದಲ್ಲಿ ಟ್ರಾಮಾ ಕೇಂದ್ರ ಸ್ಥಾಪನೆ. ಜಯದೇವ ಹೃದ್ರೋಗ ಸಂಸ್ಥೆಯ ನೇತ್ರತ್ವದಲ್ಲಿ 75 ತಾಲೂಕಗಳ ಮ್ಯಾಪಿಂಗ ಮತ್ತು ಹೃದಯ ಸಂಬಂಧಿ ಚಿಕಿತ್ಸೆಯ ನೆರವಿನ ಗುರಿ ಹೊಂದಲಾಗಿದೆ. 200 ಕ್ಕೂ ಹೆಚ್ಚು ಹಾಸಿಗೆಗಳನ್ನು ಹೊಂದಿರುವ ಜಿಲ್ಲಾ ಆಸ್ಪತ್ರೆಗಳಲ್ಲಿ ಸ್ನಾತಕೋತ್ತರ ಪದವಿಗಳನ್ನು ಆರಂಭಿಸಿ ಭೋಧನಾ ಆಸ್ಪತ್ರೆಗಳಾಗಿ ಮೇಲ್ದರ್ಜೆಗೇರಿಸಿವ ಗುರಿಯನ್ನು ಹೊಂದಲಾಗಿದ್ದು ಈ ವರುಷ ತುಮಕೂರು ಜಿಲ್ಲಾ ಆಸ್ಪತ್ರೆಯಲ್ಲಿ ವೈದ್ಯಕೀಯ ಸ್ನಾತಕೋತ್ತರ ಕೋರ್ಸ ಆರಂಭಿಸಲು ಯೋಜನೆ ರೂಪಿಸಲಾಗಿದೆ. ಮುಖ್ಯ ಮಂತ್ರಿ ಆರೋಗ್ಯ ವಾಹಿನಿ ಯೋಜನೆಯಡಿ ಮನೆ ಬಾಗಿಲಿಗೆ ವೈದ್ಯಕೀಯ ಸೌಲಭ್ಯ ಒದಗಿಸಲು ಬೀದರ್, ಚಾಮರಾಜನಗರ, ಹಾವೇರಿ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಸಂಚಾರಿ ಕ್ಲಿನಿಕ್ ಪ್ರಾರಂಬಿಸುವ ಯೋಜನೆ. ರಾಜ್ಯದ ಎಲ್ಲಾ ತಾಲೂಕುಗಳಲ್ಲಿ ನೀಟ್ ಪರೀಕ್ಷೆಗೆ ತರಬೇತಿ, ಬಡ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಾಲ, ಖಾಸಗಿ ವೈದ್ಯಕೀಯ ವಿದ್ಯಾಲಯಗಳ ವರ್ಗೀಕರಣ ಹಾಗೂ ಶುಲ್ಕ ನಿಯಂತ್ರಣ ಸಮಿತಿಯ ಮೂಲಕ ಶುಲ್ಕ ನಿಗದಿಪಡಿಸಲು ಕ್ರಮ ಕೈಗೊಳ್ಳುವುದಾಗಿ ಆಯವ್ಯಯದಲ್ಲಿ ತಿಳಿಸಲಾಗಿದೆ. ಚುನಾವಣಾ ವರುಷವಾದುದರಿಂದ ಕೇವಲ ಆಶ್ವಾಸನೆಯಾಗಿ ಉಳಿಸದೆ ಸರಕಾರ ಘೋಷಿಸಿದ ಯೋಜನೆಗಳನ್ನು ಅನಿಷ್ಠಾನಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು.

ಶಾಲಾ ಕೊಠಡಿಯೊಳಗೆ ಹಿಜಾಬ್ ಧರಿಸುವುದರ ಕುರಿತು ಮಂಗಳೂರಿನಲ್ಲಿ ಆರಂಭವಾದ ಘಟನೆ ನಾಡಿನಾದ್ಯಂತ ವಿವಾದಕ್ಕೆ ಕಾರಣವಾಗಿತ್ತು. 15.03.22 ರಂದು ಕರ್ನಾಟಕ ಉಚ್ಚ ನ್ಯಾಯಾಲಯ ತನ್ನ ತೀರ್ಪನ್ನು ಪ್ರಕಟಿಸಿದ್ದು ಹಿಜಾಬ್ ಧರಿಸುವುದು ಇಸ್ಲಾಮನ ಅತ್ಯವಶ್ಯಕ ಧಾರ್ಮಿಕ ಆಚರಣೆಯಲ್ಲವೆಂದು ತೀರ್ಪು ನೀಡಿ ಸರಕಾರದ ಉಪವಸ್ತ್ರದ ನಿಯಮಗಳನ್ನು ಎತ್ತಿ ಹಿಡಿದಿದೆ. ತೀರ್ಪಿನ ನಂತರ ಶಾಂತಿ ಸುವ್ಯವಸ್ಥೆಯಲ್ಲಿ ಭಂಗ ಬರದಿರುವುದು ಸಮಾಧಾನದ ವಿಷಯ.

ಬರಹಗಾರರ ಸಮಿತಿಯಿಂದ ಕ್ಷೇಮ ಟ್ರಸ್ಟ್ ಶಿವಮೊಗ್ಗದ ಜೊತೆ ಮಿನಿ ಕಥೆ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಸ್ಪರ್ಧೆಯಲ್ಲಿ ವಿಜೇತ ಕಥೆಗಳನ್ನು ಈ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ.

ಎಲ್ಲರಿಗೂ ಬಸವ ಜಯಂತಿಯ ಹಾರ್ದಿಕ ಶುಭಾಶಯಗಳು. ಶರಣ ತತ್ವ ಮತ್ತು ವಚನ ಸಾಹಿತ್ಯದ ಮೂಲಕ ಸಾಮಾಜಿಕ ಸಮಾನತೆಯನ್ನು ಸಾರಿದ, ವಿಶ್ವದ ಮೊದಲ ಪ್ರಜಾಪ್ರಭುತ್ವ ಸಂಸತ್ತಿನ ಕೊಡುಗೆ ನೀಡಿದ ಬಸವಣ್ಣನವರು ಎಂದೆಂದಿಗೂ ಪ್ರಸ್ತುತ. ಅವರ ಆದರ್ಶಗಳನ್ನು ಪಾಲಿಸಲು ಪ್ರಯತ್ನಿಸೋಣ.

ಧನ್ಯವಾದಗಳೊಂದಿಗೆ









**ಡಾ ಶಿವಾನಂದ ಕುಬಸದ**
ಕುಬಸದ ಆಸ್ಪತ್ರೆ, ಯಾದವಾಡ ರಸ್ತೆ,
ಮುಧೋಳ

**ಡಾ. ತನುಶ್ರೀ ಹೆಗಡೆ**
ನೇತ್ರ ತಜ್ಞರು, ಗಣೇಶ ನೇತ್ರಾಲಯ, ಶಿರಸಿ



**ಡಾ. ಗೋವಿಂದ ಹೆಗಡೆ**
ವಿಭಾಗೀಯ ಸಂಪಾದಕರು

## ಚಿತ್ತಾರದ ಬದುಕು

ದಿನವೂ ನನ್ನನ್ನು ನಾನೇ
ಕಳೆದುಕೊಂಡುಬಿಡುತ್ತೇನೆ
ನಿನ್ನಿನ ನಾನು ಇವತ್ತಿನ ನಾನಾಗಿರುವುದಿಲ್ಲ
ನಾಳೆ ನಾನು ಯಾರಾಗಿರುತ್ತೇನೆ
ಎಂಬುದನು ಇಂದು ಅರಿಯಲಾರೆ...

ಇಲ್ಲಿ ಕನಸುಗಳದೇ ಕಾರುಬಾರು
ನಾನು ನಾಳೆ ಅದೇನೋ ಆಗಬೇಕೆಂಬ
ಕನವರಿಕೆಯಲಿ ರಾತ್ರಿ ಕಳೆದುಹೋಗುತ್ತದೆ
ಬೆಳಗಾದರೆ ಮರೆತಿರುತ್ತವೆ ರಾತ್ರಿಯಲಿ
ಕಂಡ ಬಣ್ಣ ಬಣ್ಣದ ಸ್ವಪ್ನಗಳು...

ಚಿತ್ತಾರದ ಬದುಕಿಗೆ ಚಿತ್ತ ತಿರುಗುವಾಗಲೇ
ಬೆತ್ತಲಾಗತೊಡಗುತ್ತವೆ ಅತ್ತ
ಮನದ ತುಂಬೆಲ್ಲ ತುಂಬಿದ ಬಯಕೆಗಳು
ಹಳವಂಡಕ್ಕೆ ಹಾತೊರೆದ ಬದುಕು
ನಿತ್ಯ ನಿರಾಸೆಗೆ ತೆರೆದುಕೊಳ್ಳುತ್ತದೆ...

ಆದರೂ ಬದುಕು ಸಾಗುತ್ತದೆ ನಿರಂತರ
ಆಸೆಗಳಿಲ್ಲದ, ಬಯಕೆ ತುಂಬಿರದ ಬದುಕಿಗೆ
ಬಣ್ಣ ಬರಲು ಹೇಗೆ ಸಾಧ್ಯ.. ಅದಕೇ
ಹರಿವಾಣಗಳ ತುಂಬ ಬಣ್ಣ ಕಲಸಿ
ಸಿದ್ಧವಾಗುತ್ತೇವೆ ಮುಖಕೆ ಮೆತ್ತಿಕೊಳ್ಳಲು...

## ಬಿಸಿಲು ಮಚ್ಚಿನ ಬದುಕು

ಕಡು ಗ್ರೀಷ್ಮ ಬರೆ ಎಳೆದಿದೆ
ಬಯಲುದ್ದಕ್ಕೂ ಸೀಳು ಸೀಳು ಸೋಹೆ
ಒಂಟಿ ಮರದ ಹತಾಶೆ ಉಸುರುತ್ತಿದೆ
ಸೋಕು ಗಾಳಿಯ ಬಿಸಿ
ಕಣ್ಣ ಕುಕ್ಕುವ ಕುರುಡು
ಉರಿಯ ಝಳಪಿಗೆ

ತುದಿಗಾಲ ಕಾಯುವಿಕೆ
ಗಟ್ಟಿವೂರಿದರೆ ಒಡೆದು ಬಿಟ್ಟಾವು
ನೆನಪಿನ ಬೊಕ್ಕೆಗಳು
ನೆತ್ತಿಯ ತಾಪ ಸುಡುವುದಿಲ್ಲ ಒಡಲ ಧಗೆಯಷ್ಟು
ಬಯಲ ಬಂಜರು ಬಾನಿಗೂ ತಟ್ಟಿದಂತಿದೆ
ಶಾಪವೋ ಕೋಪವೋ..
ಹೇಳು ಗೆಳೆಯ


ನಂಬಿಕೆ ಬಾಯಾರಿದಾಗ
ಆಸೆಯ ಉಗುಳು ನುಂಗುತ್ತೇನೆ
ಭರವಸೆಯ ಮುಗಿಲಲ್ಲಿ
ಹನಿ ನೆರಳ ಆಸರೆ ಅರಸುತ್ತೇನೆ
ಪ್ರೀತಿಯ ಪಸೆ ಒಣಗದಂತೆ
ಹೊತ್ತೊತ್ತೂ ಸ್ರವಿಸುತ್ತೇನಲ್ಲ ಗೆಳೆಯ!
ಹೇಳು,
ನನ್ನ ಕಣ್ಣೀರು ನಿನ್ನ ಬರಗಾಲವ ನೀಗೀತೆ?




**ಡಾ ಜ್ಯೋತಿ ಎಸ್ ಘೋಂಗಡೆಮಠ**
ವಿಭಾಗೀಯ ಸಂಪಾದಕರು
ಸ್ತ್ರೀರೋಗ ತಜ್ಞರು, ವಿಶ್ವಜ್ಯೋತಿ ನರ್ಸಿಂಗ್ ಹೋಂ, ಗೋಕಾಕ್


# ಪದಬಂಧ–3


**ಡಾ. ರಾಧಾ ರಮೇಶ್**
ಹುಬ್ಬಳ್ಳಿ


## ಸುಳಿವುಗಳು: ಎಡದಿಂದ ಬಲಕ್ಕೆ

01. ವಿಟಮಿನ್ 'ಡಿ' ಯನ್ನು ಸಚೇತನಗೊಳಿಸಲು ಬೇಕಾದ ನೈಸರ್ಗಿಕ ಮೂಲ (5)
02. ಮಂಗನಿಂದ ಹೇಗೆ ಮಾನವರಾದೆಯೆಂಬುದನ್ನು ತಿಳಿಸುವ ವಾದ(5)
05. ಇಮ್ಯುನೋ ಸಪ್ರೆಸ್ಸಾರ್ ಗಳನ್ನು ಪ್ರತಿರೋಧಕ ಶಕ್ತಿಯ – – – – ಗಳೆಂದು ಕರೆಯಬಹುದೇ? (4)
06. ಎಡಚರು ತಮ್ಮ ಎಡ ಭಾಗದ ಅವಯವಗಳಿಗೆ – – – ನೀಡುತ್ತಾರೆ. (3)
07. ಕಾಲರಾ ಒಂದು – – – – ರೋಗ (4)
08. ಹೃದಯದಲ್ಲಿರುವ ಇದು ಕಪಾಟೇ ಅಥವಾ – – – ವೇ?(3)
09. ಈ ಅಂಗದ ರೋಗವಿರುವವರು ಹಠಾತ್ ಮರಣ ಹೊಂದಬಹುದು (5)
10. ನಮ್ಮೆಲ್ಲರ ಬುದ್ಧಿಶಕ್ತಿ ಇಲ್ಲಿಯೇ ಅಲ್ಲವೇ ಅಡಗಿರುವುದು? (3)
11. Airway ಯನ್ನು ಕನ್ನಡದಲ್ಲಿ ಹೀಗೆ ಕರೆಯಬಹುದು ಅಲ್ಲವೇ?(5)
12. ಇದರಿಂದ ಕೆಲವು ಅಸ್ತಮಾ ರೋಗಿಗಳ ಸ್ಥಿತಿ ಉಲ್ಬಣಿಸಬಹುದು(3)
13. ವಿಲಿಯಂ ಹಾರ್ವೆ ಇದನ್ನು ವಿವರಿಸಿದನೇ? (5)
14. ಪ್ರಜನನ ಕ್ರಿಯೆಗೆ ಸ್ತ್ರೀಯ ಕೊಡುಗೆ ಅದೇಕೋ ತಿರುಗಿ ಬಿದ್ದಿದೆ(3)
16. ಪಾರ್ಶ್ವವಾಯುವನ್ನು ಆ ಪಕ್ಷದವರು ಹೀಗೂ ಕರೆಯುತ್ತಾರೆ (4)
17. ಭಾರತದ ವೈದ್ಯಕೀಯ ಚರಿತ್ರೆಯಲ್ಲಿ ಪುರಾತನ ತಜ್ಞವೈದ್ಯ (Physician) (3)
18. ಈ ಪದಬಂಧವನ್ನು ನೋಡಿ ಅದೇಕೋ ಈ ಗುಂಪು ತಿರುಗಿ ಬಿದ್ದಿದೆ. (4)
19. ಆತ್ಮಹತ್ಯೆಗೆ ಸಾಮಾನ್ಯವಾಗಿ ಬಳಸುವ ವಿಧಾನ (5)
20. ಥಯಾಮೀನ್ ಕೊರತೆಯಿಂದ ಉಂಟಾಗುವ ಈ ನಿಶ್ಶಕ್ತಿಯನ್ನು ಹೀಗೆ ಕರೆಯಬಹುದಲ್ಲವೇ? (5)

## ಮೇಲಿನಿಂದ ಕೆಳಕ್ಕೆ

01. ಈ ಜೀವಿಗಳನ್ನು ನೋಡಲು ಈ ಉಪಕರಣದ ನೆರವು ಬೇಕು (5)
03. ವಿಷಮಶೀತ ಜ್ವರದಲ್ಲಿ ದೇಹದ ಈ ಭಾಗದಲ್ಲಿ ವ್ರಣಗಳು ಆಗುತ್ತವೆ (5)
04. Medical Seminar ನ್ನು ಕನ್ನಡದಲ್ಲಿ ಹೀಗೆ ಕರೆಯಬಹುದಲ್ಲವೇ? (11)
12. ಬೇರೆ ಜೀವಿಗಳ ಮೇಲೆ ಆಶ್ರಯಿಸುವ ಜೀವಿ (5)
15. ಈ ತೊಂದರೆ ಇರುವವರನ್ನು ಈಗ ದಿವ್ಯಾಂಗರೆಂದು ಕರೆಯುತ್ತಾರೆ(5)

### ಪದಬಂಧ 2 ರ ಉತ್ತರಗಳು

**ಎಡದಿಂದ ಬಲಕ್ಕೆ**

1) ಅಲೋಪತಿ 4) ಗುಲ್ಮ 5) ಸೋರಿಯಾಸಿಸ್ 6) ಮ್ಯಾಮೋಗ್ರಫೀ 7) ಮತ 8) ಕೈಗಾರಿಕಾ 14) ವೈಕುಂಠ 15) ಅರ್ಬುದರೋಗ 16) ಯಾಗ 17) ತಂಬಾಕು

**ಮೇಲಿನಿಂದ ಕೆಳಕ್ಕೆ**

1) ಅಲೆ 2) ಪಥ್ಯ 3) ಹೃದಯಾಘಾತ 7) ಮನೋವೈದ್ಯ 10) ಗಾದೆ 11) ಕಾಮಾಲೆರೋಗ 12) ಜಠರ 13) ಅಪಧಮನಿ 15) ಅನ್ನ 16) ದಯಾಳ

**ಪದಬಂಧ 2 ಕ್ಕೆ ಸರಿ ಉತ್ತರ ಕಳಿಸಿದವರು**


**ಡಾ ಕವಿತಾ ಸದಾಶಿವ,** ಭದ್ರಾವತಿ
**ಡಾ ರಮೇಶ್‌ಬಾಬು ಕೆ,** ಹುಬ್ಬಳ್ಳಿ

**ಸೂಚನೆ:**
ಸರಿ ಉತ್ತರವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದುಸರಿ ಉತ್ತರ ಕಳಿಸಿದವರ ಹೆಸರುಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು ಉತ್ತರವನ್ನು padabhandhavs@gmail.com ಕಳಿಸಿ



## ಹನಿಕವನ–ನಗೆಹನಿ


**ಡಾ ಜ್ಯೋತಿ ಎಸ್ ಘೋಂಗಡೆಮಠ**
ವಿಭಾಗೀಯ ಸಂಪಾದಕರು
ಸ್ತ್ರೀರೋಗ ತಜ್ಞರು, ವಿಶ್ವಜ್ಯೋತಿ ನರ್ಸಿಂಗ್ ಹೋಂ, ಗೋಕಾಕ್





### ಎಮ್ ಬಿ ಬಿ ಎಸ್ ಜೀವನದ ಸ್ಮರಣೆ

ಅನಾಟಮಿ ಮ್ಯೂಸಿಯಂನ ಮೂಳೆ, ಮಾಸಿಕ ವೈವಾ ರಗಳೆ,
ವಾಹನ ನಿಲುಗಡೆ ಸ್ಥಳದ ಗಾಸಿಪ್-ಮಳೆ, ಎಲ್ಲರ ಮುಖದಲ್ಲಿ ಕಳೆ;
ಬಯೋಕೆಮ್ ಲ್ಯಾಬ್‌ನ ಹೊಗೆಯ ವಾಯು,
ಜೀವಶಾಸ್ತ್ರದ ಸ್ನಾಯು, ಸುವಾಸನೆಯ ಕ್ಯಾಂಟೀನ್ ಧೀರ್ಗಾಯು!
ಪ್ಯಾಥೋ ವೈವಾ 'ಪ್ಯಾಥೋಸ್', 'ಮೈಕ್ರೊ'ನ ಮಿಲಿಯನ್ 'ಮೈಕ್ರೊಬ್ಸ್',
ಫಾರ್ಮಾದ ಯೋಹಿಂಬೀನ್ ಗ್ವಾನೆಥೆಡೀನ್, ನೋವು ಮರೆಸುವ
ಮಾರ್ಫೀನ್!

ಫೊರೆನ್ಸಿಕ್ ಪಾಠಗಳು ತ್ವರಿತ, ಅಂತಿಮ ಎಂಬಿಬಿಎಸ್ ಚಿಕಿತ್ಸೆ-ಭರಿತ,
ನೇತ್ರಶಾಸ್ತ್ರ, ಇ.ಎನ್.ಟಿ, ಎಸ್‌ಪಿಎಂ ಮಿಶ್ರಣ,
ಮೆಡಿಸಿನ್,ಶಸ್ತ್ರಚಿಕಿತ್ಸೆ, ಒಬಿಜಿ ಶಿಕ್ಷಣ,
ಊಟ ಆಟಗಳಿಂದ ವಂಚಿತ ಜೀವನ ಒಣ ಒಣ;
ನಂತರ ಇಂಟರ್ನ್‌ನ ಹಡಗು ಸಾಗುವುದು ನೇರ,
ಹೀಗೇ ವೈದ್ಯನ ಸೇವೆ ನಡೆಯಲು ನಿರಂತರ,
ನಡುವಯಸ್ಸಿನ ಬಿಕ್ಕಟ್ಟಿನಲ್ಲಿ, ಮರು-ಒಕ್ಕೂಟವು ಒಗ್ಗೂಡಿಸುವುದು
ಸ್ನೇಹಿತರ!!
ಡಾ. ಜ್ಯೋತಿ ಎಸ್ ಘೊಂಗಡೆಮಠ





## ಚಿಣ್ಣರ ಲೋಕ–ಚಿತ್ರ ಕವನ


**ಡಾ ಜ್ಯೋತಿ ಎಸ್ ಘೋಂಗಡೆಮಠ**
ವಿಭಾಗೀಯ ಸಂಪಾದಕರು
ಸ್ತ್ರೀರೋಗ ತಜ್ಞರು, ವಿಶ್ವಜ್ಯೋತಿ ನರ್ಸಿಂಗ್ ಹೋಂ, ಗೋಕಾಕ್

### ಮರ- ಮನುಜ

ವರುಷಕ್ಕೊಮ್ಮೆ
ಹಳತು ತೊರೆದು
ಧರಿಸಿ ಹೊಸತು
ಹಳದಿ– ಹಸಿರು,
ನವ–ನವೀನವಾದವು
ಸಾಲು–ಸಾಲು ಮರಗಳು!
ವರುಷ ಕಳೆಯೆ
ಮನವ ತುಂಬಿ
ಹಳತು ಚಿಂತೆ– ಕಂತೆ
ಎಂಬ ಬೊಂತೆ,
ಸುಕ್ಕಾಗಿ, ಮುಪ್ಪಾಗಿ
ಮುದುಡಿ ಅಳಿದರ
ಮನುಜರೆಲ್ಲರು!



**ಡಾ. ಕವಿತಾ ಸದಾಶಿವ**
ಭದ್ರಾವತಿ.
9480329699



**ವಿಜೋತ ವಿ. ಎಸ್.** 17 ವರ್ಷ
'ಕುಂಚರಹಿತ ಚಿತ್ರ' ಗೋಕಾಕ



**ಡಾ. ಅರವಿಂದ ಪಟೇಲ್**
ವಿಭಾಗೀಯ ಸಂಪಾದಕರು

## ಚಿತ್ರ ಸಂಪದ



ಕೆಂದಳಿಲು **ಡಾ. ಸಂಜಯ್ ಹೆಚ್. ಆರ್.**



ಬಾವಲಿಗಳು **ಡಾ. ಸಂಜಯ್ ಹೆಚ್. ಆರ್.**

ಡಾ.ನಾಗರಾಜ ಚಿಂದನೂರು




ಕಂದು ರೆಕ್ಕೆಯ ಮಿಂಚುಳ್ಳಿ




ವಸಂತ ನೇತಾಡುವ ಗಿಳಿ




ಮರಳುಗಡ್ಡೆ ಹಕ್ಕಿ

ಗುಬುಟು ಕೊಕ್ಕಿನ ಬಾತು

ಡಾ.ರಾಜೀವ ಗೆಜ್ಜಿ ಹೊಸಪೇಟೆ






ಪಟ್ಟಿ ತಲೆಯ ಹೆಬ್ಬಾತು

ಡಾ.ರಾಜೀವ ಗೆಜ್ಜಿ ಹೊಸಪೇಟೆ





ಡಾ. ಶ್ರೀಕಾಂತ ಬಿ.ಕೆ. ಬಳ್ಳಾರಿ





ಜೇನು ಕರಡಿ ದರೋಜಿ
**ಡಾ. ಅರುಣ್ ಎಸ್. ಕೆ**



# ಚಿತ್ತಧಾಮ

## ನಿರಾಶ್ರಿತ ಮಾನಸಿಕ ಅಸ್ವಸ್ಥರಿಗಾಗಿ ವಸತಿ ಮತ್ತು ಪುನರ್ವಸತಿ ಕೇಂದ್ರ

**ಶಾಂತಿಪುರ ಗ್ರಾಮ, ಹೆಗ್ಗಡೆದೇವನ ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ, ಕರ್ನಾಟಕ**

**ಚಿತ್ತ ಪ್ರಕಾಶ ಚಾರಿಟಬಲ್ ಟ್ರಸ್ಟ್ (ರಿ ) ಪೋಷಿತ**






ಚಿತ್ತಧಾಮ 2010ರಲ್ಲಿ ಪ್ರಾರಂಭವಾಯಿತು. ನಾಲ್ಕೂವರೆ ಎಕರೆ ಪ್ರದೇಶದಲ್ಲಿ 7200 ಚದರ ಅಡಿಗಳಷ್ಟು ಜಾಗದಲ್ಲಿ ಇನ್ಫೋಸಿಸ್ ಫೌಂಡೇಶನ್ ನೆರವಿನಿಂದ ವಸತಿ ವ್ಯವಸ್ಥೆಯನ್ನು ಹೊಂದಿರುವ ಮಾನಸಿಕ ಚಿಕಿತ್ಸಾ ಕೇಂದ್ರ ನಿರ್ಮಾಣಗೊಂಡಿದೆ/ರೂಪುಗೊಂಡಿದೆ.

ಮಾನಸಿಕ ಸ್ಥಿಮಿತ ಕಳೆದುಕೊಂಡು ಅಲೆಮಾರಿಯಾಗಿ ಅಲೆಯುತ್ತಿರುವ ನಿರಾಶ್ರಿತರನ್ನು ಪೋಲೀಸರ ಸಹಕಾರದೊಡನೆ ಗುರುತಿಸುವ ಚಿತ್ತಧಾಮ ತಂಡದವರು ಅವರನ್ನು ಸುಧಾರಿಸುವ ಮೊದಲ ಹಂತವಾಗಿ ಕೋರ್ಟ್ ಆದೇಶದ ಮೇರೆಗೆ ಚಿತ್ತಧಾಮಕ್ಕೆ ಸೇರಿಸುತ್ತಾರೆ.

ಒಮ್ಮೆ ಕೇಂದ್ರಕ್ಕೆ ದಾಖಲಾದ ನಿರಾಶ್ರಿತ ಮಾನಸಿಕ ಅಸ್ವಸ್ಥರನ್ನು ಚಿತ್ತಧಾಮವು ತನ್ನ ಮನೆಯ ಓರ್ವ ಸದಸ್ಯರಂತೆಯೇ ಪರಿಗಣಿಸುತ್ತದೆ. ತಕ್ಷಣವೇ ಅವರಿಗೆ ಅಗತ್ಯ ಅರೋಗ್ಯ ತಪಾಸಣೆ ಮತ್ತು ಅವರ ಮಾನಸಿಕ ಸ್ಥಿತಿಯ ಪರಿಶೀಲನೆ ನಡೆಸುತ್ತಲೇ , ಅಗತ್ಯ ಚಿಕಿತ್ಸೆಯನ್ನು ಪ್ರಾರಂಭಿಸಲಾಗುತ್ತದೆ.

ಪುನರ್ವಸತಿ ಕೇಂದ್ರದಲ್ಲಿ ಸಹಜ ಕೃಷಿ ಮತ್ತು ಪಶುಪಾಲನೆಯಿಂದ ಕ್ಷೀರೋತ್ಪಾದನೆ ಚಟುವಟಿಕೆಗಳೂ ನಡೆಯುತ್ತಿವೆ.

ಮಾನಸಿಕ ಚಿಕಿತ್ಸೆಯಿಂದ ಗುಣಮುಖರಾದವರನ್ನು ಅವರ ಕುಟುಂಬದವರೊಂದಿಗೆ ಸೇರಿಸುವ ಮಹತ್ಕಾರ್ಯವನ್ನೂ ಸಹ ಚಿತ್ತಧಾಮ ಮಾಡುತ್ತಿದೆ. ಈವರೆಗೂ ಚಿಕಿತ್ಸೆಯಿಂದ ಮಾನಸಿಕ ಸ್ವಾಸ್ಥ್ಯವನ್ನು ಪಡೆದ ನೂರಾರು ವ್ಯಕ್ತಿಗಳನ್ನು ದೂರದ ಊರುಗಳಲ್ಲಿರುವ, ಅಂದರೆ ಮಹಾರಾಷ್ಟ್ರ, ರಾಜಾಸ್ಥಾನ, ಪಂಜಾಬ್, ಹರಿಯಾಣ, ಬಿಹಾರ, ಒರಿಸ್ಸಾ, ತೆಲಂಗಾಣ, ಆಂಧ್ರ ಪ್ರದೇಶ, ತಮಿಳುನಾಡು, ಕೇರಳ ಮತ್ತು ಕರ್ನಾಟಕದಲ್ಲಿರುವ ಅವರವರ ಮನೆಗಳಿಗೆ ಅವರನ್ನು ಕಳುಹಿಸಲಾಗಿದೆ.

ಇಂತಹ ಮಹತ್ ಕಾರ್ಯ ನಡೆಸುತ್ತಿರುವ ಚಿತ್ತಧಾಮ, ಮಾನಸಿಕ ಸ್ಥಿಮಿತ ಕಳೆದುಕೊಂಡಿರುವ ಹೊರ ರೋಗಿಗಳಿಗಾಗಿ ತಿಂಗಳಿಗೊಮ್ಮೆ ಎರಡು ಸಲ ಸಲಹಾ ಸಮಾಲೋಚನೆ ಕ್ಯಾಂಪ್ ನ್ನು ಉಚಿತವಾಗಿ ನಡೆಸುತ್ತಿದೆ. ಅಂತಹವರಿಗೆ ಚಿತ್ತಸಂಜೀವಿನಿ ಚಾರಿಟಬಲ್ ಟ್ರಸ್ಟ್ ಸಹಯೋಗದೊಡನೆ ಒಂದು ತಿಂಗಳಿಗಾಗುವಷ್ಟು ಅಗತ್ಯ ಔಷಧಿಗಳನ್ನೂ ಸಹ ಉಚಿತವಾಗಿ ನೀಡಲಾಗುತ್ತಿದೆ. ಪ್ರತಿತಿಂಗಳೂ 150 ಹೊರರೋಗಿಗಳು ಈ ಸೌಲಭ್ಯ ಪಡೆಯುತ್ತಿದ್ದಾರೆ.

ಇದರ ಜೊತೆಗೆ ಸಮುದಾಯ ಮಾನಸಿಕ ಅರೋಗ್ಯ ಪ್ರೇರೇಪಣಾ ಕಾರ್ಯಕ್ರಮಗಳು ಹಾಗೂ ಮಾನಸಿಕ ಅರೋಗ್ಯದ ಕುರಿತ ಕಾರ್ಯಕ್ರಮ ಗಳನ್ನು ಶಾಲೆಯಲ್ಲಿ ಆಯೋಜಿಸಲಾಗಿದೆ.